ಸಂಪಾದಕರು :
ಎಂ.ಎಸ್. ವಿಕಾಸ್


ಸೋಮವಾರ, ಮೇ 06, 2024
ದಾವಣಗೆರೆ, ಪುಟ : 8 ರೂ : 5
ಸಂಪುಟ : 50 ಸಂಚಿಕೆ : 355 RNI : 27369/75


# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ


50 1974 2023
janathavani@mac.com
www.janathavani.com
08192 254736 91642 99999








# ಸಂಸದ ಸಿದ್ದೇಶ್ವರರಿಂದ ಸಾಧ್ಯವಾಗದ ಅಭಿವೃದ್ಧಿ ಅವರ ಪತ್ನಿಯಿಂದ ಸಾಧ್ಯನಾ ? ಮುಖ್ಯಮಂತ್ರಿ ಸಿದ್ದರಾಮಯ್ಯ



ಹರಿಹರ, ಮೇ 5 - ನಾಲ್ಕು ಬಾರಿ ಸಂಸದರಾಗಿದ್ದ ಜಿ.ಎಂ.ಸಿದ್ದೇಶ್ವರ ಅವರ ಕೈಯ್ಯಲ್ಲಿ ಜಿಲ್ಲೆಯನ್ನು ಅಭಿವೃದ್ಧಿ ಮಾಡಲು ಆಗಲಿಲ್ಲ. ಇನ್ನೂ ಅಡುಗೆ ಮಾಡುವ ಮಹಿಳೆ ಹೇಗೆ ದಾವಣಗೆರೆ ಜಿಲ್ಲೆಯನ್ನು ಅಭಿವೃದ್ಧಿ ಪಥದತ್ತ ತೆಗೆದುಕೊಂಡು ಹೋಗುತ್ತಾರೆ ? ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಶಿಕ್ಷಣವಂತರು, ಜನರ ಕಷ್ಟಗಳಿಗೆ ಸ್ಪಂದಿಸುವ ಒಳ್ಳೆಯ ಗುಣವನ್ನು ಹೊಂದಿದ್ದು, ಸಂಸತ್ ಭವನದಲ್ಲಿ ಜನರ ಧ್ವನಿಯಾಗಿ ಸೇವೆ ಮಾಡುವ ಎಲ್ಲಾ ಲಕ್ಷಣಗಳನ್ನು ಹೊಂದಿದ್ದಾರೆ. ಅವರನ್ನು ಬಹುಮತದೊಂದಿಗೆ ಗೆಲ್ಲಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದರು.

ನಗರದ ಗಾಂಧಿ ಮೈದಾನದಲ್ಲಿ ನಡೆದ ಲೋಕಸಭಾ ಚುನಾವಣೆಯ ದಾವಣಗೆರೆ ಕ್ಷೇತ್ರದ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಪರವಾಗಿ ಪ್ರಜಾಧ್ವನಿ 2 ಪ್ರಚಾರ ಸಮಾರಂಭದಲ್ಲಿ ಅವರು ಮಾತನಾಡಿದರು.

ಬಿಜೆಪಿ ಸರ್ಕಾರ ಧರ್ಮ ಧರ್ಮದ ಮಧ್ಯೆ, ಜಾತಿ-ಜಾತಿಗಳ ಮಧ್ಯೆ ಕಲಹ ಸೃಷ್ಟಿ ಮಾಡಿ, ಜನರ ನೆಮ್ಮದಿ ಹಾಳು ಮಾಡುವಂತೆ ಮಾಡಿದೆ. ಹಿಂದುಳಿದ ವರ್ಗಗಳ ಮೀಸಲಾತಿ ತೆಗೆದು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿಸಲಾಗಿದೆ ಎಂದು ಸುಳ್ಳು ಸೃಷ್ಟಿ ಮಾಡಿ ಮತವನ್ನು ಪಡೆಯವಂತಹ ಕೆಲಸಕ್ಕೆ ಮುಂದಾಗಿದ್ದಾರೆ. ಕಳೆದ 30 ವರ್ಷದ ಕೆಳಗೆ ಚಿನ್ನಪ್ಪ ರೆಡ್ಡಿ ವರದಿಯಂತೆ ಅಲ್ಪಸಂಖ್ಯಾತರಿಗೆ ಶೇ.4 ರಷ್ಟು ಮೀಸಲಾತಿ ಹಂಚಿಕೆಯನ್ನು ಮಾಡಲಾಗಿದೆಯೇ ವಿನಃ ನಮ್ಮ ಸರ್ಕಾರ ಮಾಡಿಲ್ಲ. ಮಾಡಿದ್ದರೆ ನಾವು ಅವರನ್ನು ಟೀಕೆ ಮಾಡುವುದನ್ನು ಕೈ ಬಿಡುತ್ತೇವೆ. ಬಿಜೆಪಿಯವರು ದಲಿತ ಹಿಂದುಳಿದ ವರ್ಗದವರು ಹಾಗೂ ಮುಸ್ಲಿಂ ಸಮುದಾಯದ ಮಧ್ಯೆ ಬಿರುಕು ಸೃಷ್ಟಿ ಮಾಡುವಂತಹ ಕೆಲಸಕ್ಕೆ ಮುಂದಾಗಿದೆ. ಜೊತೆಗೆ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ದೇಶದ ಶೇ.10 ರಷ್ಟು ಮೀಸಲಾತಿಯನ್ನು ಬ್ರಾಹ್ಮಣ ಸಮಾಜಕ್ಕೆ ನೀಡುವಂತಹ ಕೆಲಸವನ್ನು ಮಾಡಿದರು. ಸಂವಿಧಾನವು ಸಮ ಸಮಾಜ ನಿರ್ಮಾಣ ಮಾಡಬೇಕು ಎಂದು ಹೇಳುತ್ತದೆ. ಆದರೆ, ಪ್ರಧಾನಿ ನರೇಂದ್ರ ಮೋದಿಯವರು ಸಂವಿಧಾನವನ್ನು ಸರಿಯಾಗಿ ಓದದೇ ಇರುವುದಕ್ಕೆ ಇಷ್ಟೆಲ್ಲಾ ರಾದ್ಧಾಂತಕ್ಕೆ ಕಾರಣವಾಗಿದೆ ಎಂದು ಹೇಳಿದರು.

ಇದುವರೆಗೂ ಬಿಜೆಪಿ ಪಕ್ಷಕ್ಕೆ ಬೆಂಬಲಿಸುವ ಆರ್.ಎಸ್.ಎಸ್. ಮತ್ತು ಇತರೆ ಸಂಘಟನೆಗಳು ಮೀಸಲಾತಿ ವಿರೋಧ ಮಾಡಿಕೊಂಡು ಬಂದಿವೆ. ಜೊತೆಗೆ ರಾಮ್ ಜೋಯಿಷರು ಸುಪ್ರೀಂ ಕೋರ್ಟ್‌ನಲ್ಲಿ ಮೀಸಲಾತಿ ವಿಚಾರಕ್ಕೆ ಅರ್ಜಿಯನ್ನು ಹಾಕಿದ್ದರು. ಆದರೆ, ಸುಪ್ರೀಂ ಕೋರ್ಟ್ ಅದನ್ನು ರದ್ದುಪಡಿಸಿತು. ನಮ್ಮ ಸರ್ಕಾರ ದಲಿತರಿಗೆ ಹಿಂದುಳಿದ ವರ್ಗದವರಿಗೆ, ಶಿಕ್ಷಣ ಮತ್ತು ಇತರೆ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದವರಿಗೆ ಮೀಸಲಾತಿ ಕೊಟ್ಟರೆ ಅದನ್ನು ವಿರೋಧ ಮಾಡಿದರು. ಅಲ್ಪಸಂಖ್ಯಾತ ವರ್ಗದವರು ಟೋಪಿ, ಬುರ್ಕಾ ಹಾಕಿದರೆ ಅದನ್ನು ವಿರೋಧ ಮಾಡಿದರು. ಇವರಿಗೆ ನೈತಿಕತೆ ಇದೇನಾ ? ಎಂದು ಪ್ರಶ್ನಿಸಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿಯವರ ತಮ್ಮ ಹತ್ತು ವರ್ಷಗಳಲ್ಲಿ ಸಾಧನೆ ಮಾಡಿದ್ದು, ಅದಾನಿ - ಅಂಬಾನಿಯವರ 16 ಲಕ್ಷ ಕೋಟಿ ರೂ. ಸಾಲ ಮನ್ನಾ ಮಾಡಿದರು. ರೈತರು ದೇಶದ ಆಸ್ತಿ ಎಂದು ಹೇಳುತ್ತಾರೆ. ಆದರೆ, ರೈತರ ಸಾಲಮನ್ನಾ ಮಾಡಲಿಲ್ಲ. ಹಾಗಾಗಿ ಇವರು ಬಡವರ ಪರವಾಗಿ ಇಲ್ಲದೇ ಇರುವುದರಿಂದ ಬಿಜೆಪಿ ಪಕ್ಷದವರಿಗೆ ಮತವನ್ನು ಹಾಕಬೇಡಿ ಎಂದು ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಮಾತನಾಡಿ, ಹರಿಹರ - ದಾವಣಗೆರೆ ನಗರಗಳ ಸಹೋದರರು ಇದ್ದಂತೆ. ಇಲ್ಲಿನ ನಾಯಕರು ಏನೋ ಸಣ್ಣ ಪುಟ್ಟ ವ್ಯತ್ಯಾಸಗಳು ಇದ್ದರೆ ಅವುಗಳನ್ನು ಬದಿಗಿಟ್ಟು ಒಳ್ಳೆಯ ಲೀಡ್ ಕೊಟ್ಟು ಡಾ. ಪ್ರಭಾ ಮಲ್ಲಿಕಾರ್ಜುನ್ ರವರಿಗೆ ಹೆಚ್ಚು ಮತವನ್ನು ಹಾಕಿಸಬೇಕು. ಅಭ್ಯರ್ಥಿ ಪ್ರಭಾ ಅವರು ಸಂಸದರಾಗಿ ಆಯ್ಕೆಯಾದರೆ, ಮುಖ್ಯವಾಗಿ ನೀರಾವರಿಗೆ ಹೆಚ್ಚು ಆದ್ಯತೆ ಕೊಟ್ಟು, ತುಂಗಭದ್ರಾ ನದಿ ಪಕ್ಕದಲ್ಲಿ ಹರಿಹರ ಇರುವುದರಿಂದ ಕುಡಿಯುವ ನೀರಿನ ಶೇಖರಣಾ ಘಟಕ ಸ್ಥಾಪಿಸಿ, ಇಲ್ಲಿನ ಜನರ ನೀರಿನ ಸಮಸ್ಯೆಯನ್ನು ಪರಿಹರಿಸಲು ಮುಂದಾಗಲಿದ್ದಾರೆ ಎಂದು ಹೇಳಿದರು.

ಮಾಜಿ ಶಾಸಕ ರಾಮಪ್ಪ, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ಕಮ್ಯೂನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಸಾತಿ ಸುಂದರೇಶ್, ಕೆ.ಪಿ.ಸಿ.ಸಿ. ರಾಜ್ಯ ವಕ್ತಾರೆ ಯು.ಟಿ.ಫರ್ಜಾನಾ, ಕೆಪಿಸಿಸಿ ಸದಸ್ಯ ಡಿ. ಬಸವರಾಜ್ ಮಾತನಾಡಿದರು.

ಈ ಸಂದರ್ಭದಲ್ಲಿ ಹೆಚ್.ಎಂ.ರೇವಣ್ಣ, ಮಾಜಿ ಎಂ.ಎಲ್.ಸಿ. ಮೋಹನ್ ಕೊಂಡಜ್ಜಿ, ಹೆಚ್.ಎಸ್.ನಾಗರಾಜ್, ಗುತ್ತೂರು ಜಿ.ಬಿ. ಹಾಲೇಶಗೌಡ್ರು, ಎಂ.ನಾಗೇಂದ್ರಪ್ಪ, ಕೃಷ್ಣ ಸಾ ಭೂತೆ, ಡಿ.ಬಸವರಾಜ್, ಹಳ್ಳಳ್ಳಿ ಬಸಪ್ಪ, ನಗರಸಭೆ ಸದಸ್ಯರಾದ ಶಂಕರ್ ಖಟಾವ್ಕರ್, ಕೆ.ಜಿ. ಸಿದ್ದೇಶ್, ರಜನಿಕಾಂತ್, ಅಲಿಂ, ಕೆಪಿಸಿಸಿ ಸದಸ್ಯ ಬಿ.ರೇವಣಸಿದ್ದಪ್ಪ, ನಿಖಿಲ್ ಕೊಂಡಜ್ಜಿ, ಡಿ.ಕುಮಾರ್, ಎಲ್.ಬಿ.ಹನುಮಂತಪ್ಪ, ಅಬೀದ್ ಅಲಿ, ಬಿ.ಎಂ.ವಾಗೀಶ್ ಸ್ವಾಮಿ, ಟಿ.ಜೆ. ಮುರುಗೇಶಪ್ಪ, ಸಿ.ಎನ್.ಹುಲುಗೇಶ್, ಅಮರಾವತಿ ರೇವಣಸಿದ್ದಪ್ಪ, ಮಂಜುನಾಥ್ ಪಾಟೀಲ್, ಏಜಾಜ್ ಆಹ್ಮದ್, ಎಂ.ಬಿ.ಅಣ್ಣಪ್ಪ, ಕೆ.ಬಿ.ರಾಜಶೇಖರ್, ಜಿಗಳಿ ಆನಂದಪ್ಪ, ಮಲ್ಲೇಶ್ ಕಮಲಾಪುರ, ಕಿರಣ್ ಭೂತೆ, ಮಂಜುನಾಥ್, ಸಂತೋಷ್ ನೋಟದರ್, ಬೀರೇಶ್ ಮಾಸ್ಟರ್, ಸಚಿನ್ ಕೊಂಡಜ್ಜಿ, ವಿಜಯಕುಮಾರ್ ರಟ್ಟೀಹಳ್ಳಿ, ಕಿರಣ ಬೊಂಗಾಳೆ, ಹಬೀಬ್ ಉಲ್ಲಾ, ದಾದಾಪೀರ್ ಭಾನುವಳ್ಳಿ, ಕುಂಬಳೂರು ವಿರೂಪಾಕ್ಷಪ್ಪ, ಬಿ.ಫೈರೋಜ್, ಮಹಮ್ಮದ್ ಸಿಗ್ಬತ್‌ವುಲ್ಲಾ, ಬಿ.ಕೆ.ಸೈಯದ್ ರೆಹಮಾನ್, ಸೈಯದ್ ಜಾಕೀರ್, ನಾಗಮ್ಮ ವಿದ್ಯಾ, ನೇತ್ರಾವತಿ, ಭಾಗ್ಯಮ್ಮ ಮಲೇಬೆನ್ನೂರು ಶಿವಕುಮಾರ್, ಕೆ.ಪಿ.ಗಂಗಾಧರ್, ಭೋವಿ ಕುಮಾರ್, ಆದಾಪುರ ವೀರಭದ್ರಪ್ಪ, ನಸ್ರುಲ್ಲಾ, ಇತರರು ಹಾಜರಿದ್ದರು.

## ಹರಿಹರಕ್ಕೆ ಶಾಶ್ವತ ಕುಡಿಯುವ ನೀರಿನ ಯೋಜನೆ : ಸಿಎಂ

**ಚುನಾವಣೆ ಮುಗಿದ ನಂತರ ಹರಿಹರ ತಾಲ್ಲೂಕಿನ ಅತ್ಯವಶ್ಯಕವಾಗಿರುವ ಭೈರನಪಾದ ನೀರಾವರಿ ಯೋಜನೆಗೆ ಆದಷ್ಟು ಬೇಗ ಟೆಂಡರ್ ಕರೆಯುವ ಮೂಲಕ ತಾಲ್ಲೂಕಿನ 5200 ಹೆಕ್ಟೇರ್ ಜಮೀನಿಗೆ ನೀರು ಹರಿಸುವ ಕೆಲಸಕ್ಕೆ ಮುಂದಾಗುವೆ ಮತ್ತು ತಾಲ್ಲೂಕಿನ ಕೊಂಡಜ್ಜಿ ಹಾಗೂ ಅಗಸನಕಟ್ಟೆ ಕೆರೆ ಅಭಿವೃದ್ಧಿ ಜೊತೆಗೆ ಹರಿಹರ ನಗರದ ಶಾಶ್ವತ ಕುಡಿಯುವ ನೀರಿನ ಶೇಖರಣಾ ಘಟಕ ಸ್ಥಾಪಿಸಿ, ಇಲ್ಲಿನ ಜನತೆಯ ಸಮಸ್ಯೆಯನ್ನು ಚುನಾವಣೆ ಮುಗಿದ ತಕ್ಷಣವೇ ಪರಿಹರಿಸುವುದರ ಮೂಲಕ ಇಲ್ಲಿನ ಜನತೆಗೆ ಕೊಟ್ಟ ಮಾತಿನಂತೆ ನಡೆದುಕೊಳ್ಳುವೆ ಎಂದು ಸಿ.ಎಂ. ಸಿದ್ದರಾಮಯ್ಯ ಹರಿಹರ ತಾಲ್ಲೂಕಿನ ಜನತೆಗೆ ಭರವಸೆ ನೀಡಿದರು.**

# ಸಾಮಾಜಿಕ ನ್ಯಾಯ ಸಮಿತಿಯಿಂದ ಕಾಂಗ್ರೆಸ್ ಅಭ್ಯರ್ಥಿ ಪ್ರಭಾ ಬೆಂಬಲಿಸಿ, ಎಸ್ಸೆಸ್ಸೆಂಗೆ ಸನ್ಮಾನ



ದಾವಣಗೆರೆ, ಮೇ 5 - ಲೋಕಸಭಾ ಚುನಾವಣೆಯ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರ ಪರವಾಗಿ ಜಿಲ್ಲಾ ಉಸ್ತುವಾರಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರ ವಕೀಲರ ಭವನದಲ್ಲಿ ಮತಯಾಚನೆಗೆ ಆಗಮಿಸಿದ್ದ ಸಂದರ್ಭದಲ್ಲಿ ಜಿಲ್ಲಾ ಸಮಾಜಿಕ ನ್ಯಾಯ ಸಮಿತಿಯಿಂದ ಸನ್ಮಾನಿಸಲಾಯಿತು.

ಜಿಲ್ಲಾ ಸಮಾಜಿಕ ನ್ಯಾಯ ಸಮಿತಿ ಅಧ್ಯಕ್ಷರೂ ಆಗಿರುವ ವಕೀಲ ಎಸ್. ಪರಮೇಶ್ವರ್ ಮಾತನಾಡಿ, ಸಂವಿಧಾನದ ಉಳುವಿಗಾಗಿ, ದೇಶದ ಉಳುವಿಗಾಗಿ ಹಾಗೂ ಸಾಮಾಜಿಕ ನ್ಯಾಯ ಎತ್ತಿ ಹಿಡಿಯುವ ಕಾಂಗ್ರೆಸ್‌ಗೆ ಮತ ನೀಡುವಂತೆ ಕೇಳಿಕೊಂಡರಲ್ಲದೇ, ಕೇಂದ್ರ ಸರ್ಕಾರ ಸ್ವಾಮ್ಯದ ಸಂಸ್ಥೆಗಳ ಖಾಸಗೀಕರಣವನ್ನು ಖಂಡಿಸಿದರು.

ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಬಂದ ನಂತರ ಗ್ಯಾರಂಟಿ ಯೋಜನೆ ಜಾರಿಗೆ ತಂದು ಜನ ಸಾಮಾನ್ಯರಿಗೆ ಅನುಕೂಲವಾಗಿದೆ. ಸಾಮಾಜಿಕ ನ್ಯಾಯವನ್ನು ಒದಗಿಸಿದೆ. ಅಲ್ಲದೇ, 6ನೇ ಗ್ಯಾರಂಟಿ ವಕೀಲರ ಸಂರಕ್ಷಣಾ ಕಾಯ್ದೆಯನ್ನು ಜಾರಿಗೆ ತಂದಿದೆ. ಇದರಿಂದ ಬಹುವರ್ಷಗಳಿಂದ ಬೀದಿಗೆ ಬಂದು ಹೋರಾಟ ಮಾಡುತ್ತಿದ್ದ ವಕೀಲರಿಗೆ ಸಾಮಾಜಿಕ ನ್ಯಾಯವನ್ನು ಕೊಟ್ಟಿದೆ ಎಂದು ಹೇಳಿದರು. ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿರುವ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಮತ ನೀಡುವಂತೆ ಕೋರಿದರು.

ಈ ಸಂದರ್ಭದಲ್ಲಿ ಜಿಲ್ಲಾ ಸಾಮಾಜಿಕ ನ್ಯಾಯ ಸಮಾಜದ ಅಧ್ಯಕ್ಷ ಎಸ್. ಪರಮೇಶ್, ಕಾಂಗ್ರೆಸ್ ಹಿರಿಯ ಮುಖಂಡ ರಾಮಚಂದ್ರ ಕಲಾಲ್, ಗೌರವ ಅಧ್ಯಕ್ಷ ಬಿ.ಎಂ. ಹನುಮಂತಪ್ಪ, ಉಪಾಧ್ಯಕ್ಷ ಸಿ. ಶ್ಯಾಮ್, ರಂಗಸ್ವಾಮಿ, ಕೆ.ಕೆ, ಬಾಬು ಗೋಸಾಯಿ, ವಿ ಗೋಪಾಲ್, ಆವರಗೆರೆ ವಿಜಯ ಕುಮಾರ್, ವಿ.ಟಿ. ಪ್ರಕಾಶ್, ಧ್ಯಾನಪ್ಪ ಅನುಷ್‌ಪಾಡ್, ನಾಗರಾಜ್, ಕಾಶೀನಾಥ್ ಹಾಗೂ ಇತರೆ ಕಾಂಗ್ರೆಸ್ ಮುಖಂಡರು ಹಾಜರಿದ್ದರು. ವೇದಿಕೆಯ ಅಧ್ಯಕ್ಷತೆಯನ್ನು ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್‌ಕುಮಾರ್ ವಹಿಸಿದ್ದರು. ಕಾರ್ಯದರ್ಶಿ ಬಸವರಾಜ್ ನಿರೂಪಿಸಿದರು.

# ಗಂಗಾಮತ ಸಮಾಜ ಬಿಜೆಪಿಗೆ ಬೆಂಬಲಿಸಲು ಮನವಿ



**ಹರಿಹರ**

ಹರಿಹರ, ಮೇ 5- ಗಂಗಾಮತ ಸಮುದಾಯದ ಒಳಿತು, ಅಭಿವೃದ್ಧಿಗಾಗಿ ಬಿಜೆಪಿ ಯಾವಾಗಲೂ ನಿಮ್ಮ ಜೊತೆ ನಿಂತಿದೆ. ನೀವೂ ಕೂಡ ಪ್ರತಿ ಚುನಾವಣೆಯಲ್ಲಿ ಬಿಜೆಪಿಗೆ ಬೆಂಬಲ ನೀಡಿ ನಮ್ಮನ್ನು ಗೆಲ್ಲಿಸಿಕೊಂಡು ಬಂದಿದ್ದೀರಿ. ಈ ಬಾರಿ ನಮ್ಮ ಬಿಜೆಪಿ ಅಭ್ಯರ್ಥಿ ಗಾಯಿತ್ರಿ ಸಿದ್ದೇಶ್ವರ್ ಅವರನ್ನು ಹೆಚ್ಚಿನ ಅಂತರದಿಂದ ಗೆಲ್ಲಿಸಲು ಗಂಗಾಮತ ಸಮಾಜ ನಮಗೆ ಬೆಂಬಲ ನೀಡಬೇಕು ಎಂದು ಶಾಸಕ ಬಿ.ಪಿ. ಹರೀಶ್ ಮನವಿ ಮಾಡಿದರು.

ತಾಲ್ಲೂಕಿನ ಗುತ್ತೂರು ಗಂಗಾಮತ ಸಮುದಾಯ ಭವನದಲ್ಲಿ ನಡೆದ ಗಂಗಾಮತ ಸಮಾಜದ ಸಭೆಯಲ್ಲಿ ಮಾತನಾಡಿ, ಸಿದ್ದೇಶಣ್ಣ ದಾವಣಗೆರೆ ಲೋಕಸಭಾ ಕ್ಷೇತ್ರದ ಅಭಿವೃದ್ಧಿಗೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ಎಲ್ಲರಿಗೂ ಸುಲಭವಾಗಿ ಕೈಗೆ ಸಿಗುವ ವ್ಯಕ್ತಿ ಸಿದ್ದೇಶಣ್ಣ. ಈ ಬಾರಿ ಅವರ ಪತ್ನಿ ಗಾಯಿತ್ರಿ ಸಿದ್ದೇಶ್ವರ್ ಅವರು ಚುನಾವಣೆಯಲ್ಲಿ ಸ್ಪರ್ಧಿಸಿದ್ದಾರೆ. ಅವರನ್ನು ಬಹುಮತದಿಂದ ಆರಿಸಿ ದೆಹಲಿಗೆ ಕಳುಹಿಸಬೇಕು ಎಂದು ಮನವಿ ಮಾಡಿದರು.

ಈ ವೇಳೆ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯಿತ್ರಿ ಸಿದ್ದೇಶ್ವರ ಅವರಿಗೆ ಗಂಗಾಮತ ಸಮಾಜ ಬಾಂಧವರು ಬೆಂಬಲ ಸೂಚಿಸಿದರು. ಎಂಎಲ್ಸಿ ರವಿಕುಮಾರ್, ಜಿ.ಎಸ್.ಅಶ್ವಿನಿ, ಶಿವಶಂಕರ್, ಮಹಾಂತೇಶ್, ಧರ್ಮೇಂದ್ರ ರಾಟಿ, ಬೇತೂರು ಬಸವರಾಜ್, ಹೆಬ್ಬಾಳ್ ಮಹೇಂದ್ರ, ಎ.ಪಿ.ಆನಂದ್, ಪೈಲ್ವಾನ್ ಬಸಣ್ಣ, ಆಲೂರು ರಾಜು, ಕಾಡಜ್ಜಿ ರಾಜು, ಚೀಲೂರು ಲೋಕೇಶ್, ಲಿಂಗರಾಜು, ರವಿ, ಮಂಜುನಾಥ್ ಮಲೇಬೆನ್ನೂರು, ಗುಡಿಹಳ್ಳಿ ನಾಗರಾಜ್, ಪ್ಯಾಟಿ ಬಸಣ್ಣ, ಹೊನ್ನಾಳಿ ಅಧ್ಯಕ್ಷ ರಮೇಶ್, ವೆಂಕಟೇಶ್, ಎಂ.ಎನ್. ಮಂಜುನಾಥ್ ಮತ್ತು ಗಂಗಾಮತ ಸಮಾಜ ಬಾಂದವರು ಇದ್ದರು.

# ಮಾಯಕೊಂಡ : ಬಿಜೆಪಿ ಪರ ಶ್ಯಾಮ್ ಮತಯಾಚನೆ



ದಾವಣಗೆರೆ, ಮೇ 5- ಮಾಯಕೊಂಡ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಅಣಜಿ, ಜಮ್ಮಾಪುರ, ಕೆರೆಯಾಗಳಹಳ್ಳಿ, ಗೊಲ್ಲರಳ್ಳಿಯ ಎಸ್.ಟಿ ಕಾಲೋನಿ, ಮಲ್ಲೇನಹಳ್ಳಿಯ ಭೋವಿ ಕಾಲೋನಿಗೆ ತೆರಳಿದ ಬಿಜೆಪಿ ಯುವ ಮೋರ್ಚಾ ರಾಜ್ಯ ಉಪಾಧ್ಯಕ್ಷ ಜಿ.ಎಸ್. ಶ್ಯಾಮ್ ಅವರ ನೇತೃತ್ವದ ಕಾರ್ಯಕರ್ತರು, ಬಿಜೆಪಿ ಅಭ್ಯರ್ಥಿ ಶ್ರೀಮತಿ ಗಾಯತ್ರಿ ಸಿದ್ದೇಶ್ವರ ಅವರ ಪರವಾಗಿ ಮತಯಾಚನೆ ಮಾಡಿದರು.

# 18ನೇ ವಾರ್ಡಿನಲ್ಲಿ ಬಿಜೆಪಿ ಪರ ಜಿ.ಎಂ. ಪುತ್ರ ಮತಯಾಚನೆ



ದಾವಣಗೆರೆ, ಮೇ 5 - ನಗರದ 18ನೇ ವಾರ್ಡಿನಲ್ಲಿ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಅವರ ಪರವಾಗಿ ಪುತ್ರ ಜಿ.ಎಸ್ ಅನಿತ್ ಕುಮಾರ್ ಹಾಗೂ ವಾರ್ಡಿನ ಮುಖಂಡರು, ಕಾರ್ಯಕರ್ತರು ಸೇರಿ ಬಿರುಸಿನ ಪ್ರಚಾರ ಮಾಡಿ ಮತ ಯಾಚಿಸಿದರು.

# ನಂಜಪ್ಪ ಆಸ್ಪತ್ರೆ ಸಮೂಹದಿಂದ ಮತದಾನದ ಜಾಗೃತಿ

ದಾವಣಗೆರೆ, ಮೇ 5- ನಂಜಪ್ಪ ಆಸ್ಪತ್ರೆ ಸಮೂಹದಿಂದ ಮತದಾನದ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ, ಸಾರ್ವಜನಿಕರಿಗೆ ವಿಶೇಷ ಕೊಡುಗೆ ನೀಡಲಾಗಿದೆ. ಲೋಕಸಭಾ ಚುನಾವಣೆಯಲ್ಲಿ ಮತದಾನ ಮಾಡಿದವರಿಗೆ ಲ್ಯಾಬ್ ಪರೀಕ್ಷೆಗಳ ಮೇಲೆ ಶೇ.25 ಹಾಗೂ ಇಸಿಜಿ ಇಕೋ, ಟಿ.ಎಂ.ಟಿ, ಸಿ.ಟಿ., ಎಂ.ಆರ್.ಐ. ಅಲ್ಟ್ರಾಸೌಂಡ್ ಹಾಗೂ ಮ್ಯಾಮೋಗ್ರಾಫಿ ಮೇಲೆ ಶೇ.15 ರಿಯಾಯಿತಿ ನೀಡಲಾಗುತ್ತದೆ. ನಿಮ್ಮ ಮತದಾನದ ಗುರುತನ್ನು ತೋರಿಸಿ, ವಿಶೇಷ ರಿಯಾಯಿತಿ ಪಡೆದುಕೊಳ್ಳಬಹುದು. ಈ ಸೌಲಭ್ಯ ದಾವಣಗೆರೆಯ ನಂಜಪ್ಪ ಆಸ್ಪತ್ರೆ ಹಾಗೂ ಶಿವಮೊಗ್ಗದ ನಂಜಪ್ಪ ಆಸ್ಪತ್ರೆ ಮತ್ತು ನಂಜಪ್ಪ ಲೈಫ್ ಕೇರ್‌ನಲ್ಲಿ ಲಭ್ಯ. ಈ ರಿಯಾಯಿತಿಯು ನಾಡಿದ್ದು ದಿನಾಂಕ 7 ರಿಂದ 14 ರವರೆಗೆ ಇರುತ್ತದೆ.

# ಯುವ ದಲಿತ ಸಂಘರ್ಷ ಸಮಿತಿ ಬಿಜೆಪಿ ಪಕ್ಷಕ್ಕೆ ಸೇರ್ಪಡೆ



ದಾವಣಗೆರೆ, ಮೇ 5- ಯುವ ದಲಿತ ಸಂಘರ್ಷ ಸಮಿತಿ ಜಿಲ್ಲಾಧ್ಯಕ್ಷ ಎಂ. ರಮೇಶ್, ಉತ್ತರ ಅಧ್ಯಕ್ಷ ಪಿ.ರಮೇಶ್, ತಾಲ್ಲೂಕು ಖಜಾಂಚಿ ಪ್ರವೀಣ್ ಕುಮಾರ್, ವೀರ ಮದಕರಿ ಸೇನೆ ಜಿಲ್ಲಾ ಉಪಾಧ್ಯಕ್ಷ ಬನ್ನಿಕೋಡು ಕುಮಾರ್ ಅವರು ಸಂಸದ ಜಿ.ಎಂ.ಸಿದ್ದೇಶ್ವರ ನೇತೃತ್ವದಲ್ಲಿ ಬಿಜೆಪಿ ಸೇರ್ಪಡೆಗೊಂಡರು. ಬಿಜೆಪಿ ಮುಖಂಡ ಕೊಳೇನಹಳ್ಳಿ ಸತೀಶ್, ವಕೀಲರಾದ ರಾಘವೇಂದ್ರ, ದಿವಾಕರ್ ಇದ್ದರು.

# ಹೈಸ್ಕೂಲ್ ಮೈದಾನ ಸ್ವಚ್ಛಗೊಳಿಸಿದ ಜಿಲ್ಲಾ ಕ್ರೀಡಾಪಟುಗಳು



ದಾವಣಗೆರೆ, ಮೇ 5 - ನಗರದ ಹೈಸ್ಕೂಲ್ ಮೈದಾನದಲ್ಲಿ ನಿನ್ನೆ ನಡೆದ ಪ್ರಜಾಧ್ವನಿ-2 ಕಾರ್ಯಕ್ರಮ ಯಶಸ್ವಿಯಾಗಿ ಮುಗಿದಿದ್ದು, ಇಂದು ಜಿಲ್ಲಾ ಕ್ರೀಡಾಪಟುಗಳು ಸ್ವಚ್ಛಗೊಳಿಸಿದರು.

ಜಿಲ್ಲಾ ಕ್ರೀಡಾಪಟುಗಳ ಸಂಘ ಹಾಗೂ 17ನೇ ವಾರ್ಡ್ ಕಾಂಗ್ರೆಸ್ ಕಾರ್ಯಕರ್ತರಿಂದ ದಿನೇಶ್ ಕೆ.ಶೆಟ್ಟಿಯವರ ನೇತೃತ್ವದಲ್ಲಿ ಸ್ವಚ್ಛತೆ ಕಾಪಾಡುವ ದೃಷ್ಟಿಯಿಂದ ಸ್ವಚ್ಛತಾ ಕಾರ್ಯ ನಡೆಸಿದ ಕ್ರೀಡಾಪಟುಗಳು ಎಲ್ಲೆಂದರಲ್ಲಿ ಕಸ ಹಾಕದಂತೆ ಸಾರ್ವಜನಿಕರಲ್ಲಿ ವಿನಂತಿಸಿದರು.

ಈ ಸಂದರ್ಭದಲ್ಲಿ ಕ್ರೀಡಾಪಟು ಗಳಾದ ಎಸ್.ಮಲ್ಲಿಕಾರ್ಜುನ್, ಜಯಪ್ರಕಾಶ್ ಗೌಡ, 17ನೇ ವಾರ್ಡ್ ಅಧ್ಯಕ್ಷ ಮಧು ಪವಾರ್, ಪರಶುರಾಮ್ ಯುವರಾಜ್, ತಿಮ್ಮೇಶ್, ಸುರೇಶ್ ಮತ್ತಿತರರಿದ್ದರು.

# ಶಾಮನೂರು ಬಡಾವಣೆಯ ಎಕೆ ಕಾಲೋನಿ ನಿವಾಸಿಗಳಿಂದ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ



ದಾವಣಗೆರೆ, ಮೇ 5 - ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ಅವರ ಸಮ್ಮುಖದಲ್ಲಿ ಶಾಮನೂರು ಬಡಾವಣೆಯ ಎಕೆ ಕಾಲೋನಿ ನಿವಾಸಿಗಳು ಮುಖಂಡರಾಗಿರುವ ಶಾಮನೂರು ಕಣ್ಣಾಳ ಅಂಜಿನಪ್ಪ ಅವರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ವ್ಯಕ್ತಪಡಿಸಿದರು.

ನಗರದ ಬಂಬೂ ಬಜಾರ್ ರಸ್ತೆಯಲ್ಲಿನ ಕಲ್ಲೇಶ್ವರ ಮಿಲ್‌ನಲ್ಲಿ ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ಅವರು ಬೆಂಬಲ ವ್ಯಕ್ತಪಡಿಸಿದ ಕಾರ್ಯಕರ್ತರಿಗೆ ಕಾಂಗ್ರೆಸ್ ಪಕ್ಷದ ಶಾಲನ್ನು ಹಾಕಿ ಆತ್ಮೀಯವಾಗಿ ಬರಮಾಡಿಕೊಂಡರು.

ಈ ವೇಳೆ ಮಾತನಾಡಿದ ಸಚಿವರು, ಒಂದೊಂದು ಮತವು ಅತ್ಯಮೂಲ್ಯವಾಗಿದ್ದು, ಈ ಬಾರಿಯ ದಾವಣಗೆರೆ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿರುವ ಡಾ. ಪ್ರಭಾ ಮಲ್ಲಿಕಾರ್ಜುನ ಅವರಿಗೆ ಪ್ರತಿಯೊಬ್ಬರೂ ಕುಟುಂಬ ಸಮೇತರಾಗಿ ಬಂದು ಓಟು ಹಾಕಬೇಕು ಎಂದು ಮನವಿ ಮಾಡಿದರು.

ಈ ವೇಳೆ ಶಾಮನೂರು ಬಡಾವಣೆಯ ಎಕೆ ಕಾಲೋನಿಯ ಜಗದೀಶ್, ರಾಘವೇಂದ್ರ, ಕರಿಯಪ್ಪ, ಪರಶುರಾಮ್, ದಾನಪ್ಪ, ನಿಂಗರಾಜ್, ಪ್ರಕಾಶ್, ರಾಮಪ್ಪ ಸೇರಿದಂತೆ ನೂರಕ್ಕು ಹೆಚ್ಚು ಕಾರ್ಯಕರ್ತರು ಇದ್ದರು.

# ವಿನಯ್‌ಗೆ ಮಹಿಳೆಯರ ಮಹಾಸೈನ್ಯದ ಬೆಂಬಲ



ದಾವಣಗೆರೆ, ಮೇ 5 - ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಜಿ. ಬಿ. ವಿನಯ್ ಕುಮಾರ್ ಅವರಿಗೆ ಮಹಿಳೆಯರ ಮಹಾ ಸೈನ್ಯದ ಜನಬೆಂಬಲ ವ್ಯಕ್ತವಾಗಿದೆ. ನಗರದ ಭಗತ್ ಸಿಂಗ್ ನಗರದಿಂದ ಹಲವಾರು ಬೀದಿ ಬೀದಿಗಳಲ್ಲಿ ಹಿರಿಯರು, ತಾಯಂದಿರು, ಯುವಕರು, ಯುವತಿಯರು ಸೇರಿದಂತೆ ಎಲ್ಲಾ ವರ್ಗದ ಮುಖಂಡರು ವಿನಯ್ ಕುಮಾರ್ ಅವರಿಗೆ ಸಾಥ್ ನೀಡಿದರು.


# ಆರುಂಡಿ ಸಾಂತಮ್ಮ ನಿಧನ



ದಾವಣಗೆರೆ ಸಮೀಪದ ಹೊಸಕುಂದುವಾಡ ಗ್ರಾಮದ ದಿ|| ಆರುಂಡಿ ದೇವೇಂದ್ರಪ್ಪ ಪತ್ನಿ **ಶ್ರೀಮತಿ ಸಾಂತಮ್ಮ** ಅವರು ದಿನಾಂಕ 5-5-2024ರ ಭಾನುವಾರ ಮಧ್ಯಾಹ್ನ 12 ಕ್ಕೆ ನಿಧನರಾಗಿರುತ್ತಾರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 70 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂದು ಬಳಗ ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 6-5-2024ರ ಸೋಮವಾರ ಬೆಳಗ್ಗೆ 10 ಗಂಟೆಗೆ ಹಳೇ ಕುಂದುವಾಡದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ, ಮೊ. : 9844356210**

## ಬಸಪ್ಪ ಗಟ್ಟಿಗನೂರು ನಿಧನ



ಹರಪನಹಳ್ಳಿ ತಾಲ್ಲೂಕು ದುಗ್ಗಾವತಿ ವಾಸಿ ಬಸಪ್ಪ ಗಟ್ಟಿಗನೂರು ಇವರು ದಿನಾಂಕ 5.5.2024ರ ಭಾನುವಾರ ರಾತ್ರಿ 8 ಗಂಟೆಗೆ ನಿಧನರಾದರು. ಅವರಿಗೆ 74ವರ್ಷ ವಯಸ್ಸಾಗಿತ್ತು. ಪತ್ನಿ, ನಾಲ್ಕು ಜನ ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 6.5.2024ರ ಸೋಮವಾರ ಮಧ್ಯಾಹ್ನ 2 ಗಂಟೆಗೆ ಹರಪನಹಳ್ಳಿ ತಾಲ್ಲೂಕು ದುಗ್ಗಾವತಿಯಲ್ಲಿ ನೆರವೇರಲಿದೆ.

# ಹಣ, ಆಮಿಷಕ್ಕೆ ಮತ ಮಾರಿಕೊಳ್ಳಬೇಡಿ : ವಿನಯ್ ಕಳಕಳಿ



ಹರಿಹರ, ಮೇ 5 - ಲೋಕಸಭೆ ಚುನಾವಣೆ ಯಲ್ಲಿ ಹಣ, ಆಮಿಷವೊಡ್ಡುವ ಮೂಲಕ ಮತದಾರರನ್ನು ಸೆಳೆಯುವ ಪ್ರಯತ್ನ ಮಾಡಲಾಗುತ್ತಿದೆ. ಜಿಲ್ಲೆಯ ಜನರು ಸ್ವಾಭಿಮಾನಿಗಳಾಗಿದ್ದು, ಸ್ವಾಭಿಮಾನಕ್ಕೆ ಮತ ಹಾಕಿ ಎಂದು ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಜಿ. ಬಿ. ವಿನಯ್ ಕುಮಾರ್ ಮನವಿ ಮಾಡಿದರು.

ಬೆಳ್ಳೂಡಿ ಗ್ರಾಮದಲ್ಲಿ ಭರ್ಜರಿ ಪ್ರಚಾರ ನಡೆಸಿದರು. ವಿನಯ್ ಕುಮಾರ್ ಆಗಮಿಸುತ್ತಿದ್ದಂತೆ ಗ್ರಾಮಸ್ಥರು ಅದ್ದೂರಿಯಾಗಿ ಬರಮಾಡಿಕೊಂಡರು. ಈ ವೇಳೆ ಗ್ರಾಮದ ಭರಮಪ್ಪ, ರೇವಣಸಿದ್ದಪ್ಪ, ಭೀಮಪ್ಪ, ಕುಬೇಂದ್ರ, ಚಂದ್ರು, ಸಿದ್ದಪ್ಪ, ರಾಮಪ್ಪ, ಬೀರಪ್ಪ, ಸಿದ್ದೇಶ, ಪ್ರಭು ಮತ್ತಿತರರು ಹಾಜರಿದ್ದರು.

ರಾಜನಹಳ್ಳಿ ಗ್ರಾಮದ ಮುಖಂಡರಾದ ಸಂತೋಷ, ಗೋವಿಂದ, ಹುಲಿಗೇಶ, ಹನುಮಂತ, ಮನು, ಪರಶುರಾಮ್, ಪ್ರಶಾಂತ, ಹನುಮಂತ ಮತ್ತಿತರರು ಹಾಜರಿದ್ದರು.

ಜಿಗಳಿ ಹಾಗೂ ಕುಣಿಬೆಳಕೆರೆ ಗ್ರಾಮದಲ್ಲಿ ವಿನಯ್ ಕುಮಾರ್ ಮತ ಯಾಚಿಸಿದರು.

ಈ ವೇಳೆ ಜಿಗಳಿ ಗ್ರಾಮದ ಮುಖಂಡರಾದ ದೇವೇಂದ್ರಪ್ಪ ಪೂಜಾರು, ಹನುಮಂತಪ್ಪ ಹುಳ್ಳೇರ, ಶಿವಪ್ಪ ಎಕ್ಕೆಗೊಂದಿ, ರಂಗನಾಥ ಪೂಜಾರ, ಕೆಂಚಪ್ಪ ಪೂಜಾರ, ಮಧು ತಿಮ್ಮನಕಟ್ಟೆ, ರಾಜಣ್ಣ, ಕುಬೇರಗೌಡ ಹಾಗೂ ಕುಣಿಬೆಳಕೆರೆ ಗ್ರಾಮದ ವಿಜಯ್, ರೇವಣಸಿದ್ದೇಶ, ಬೀರೇಶ, ಚಂದ್ರಪ್ಪ, ಮಲ್ಲಣ್ಣ, ಮಧು, ಶಿವು, ಅಶೋಕ, ಚಂದ್ರ, ವಿಜಯಪ್ಪ, ಶಿವಣ್ಣ, ಬಸವರಾಜಪ್ಪ, ಹುಲ್ಲುಮನೆ ಚಿಕ್ಕಪ್ಪ, ಬಸಣ್ಣ ಮತ್ತಿತರರು ಹಾಜರಿದ್ದರು.

ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

1974 2023

ಸೋಮವಾರ, ಮೇ 06, 2024

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

☎ 08192 254736 | 91642 99999

## ಮೋದಿ 10 ಗುರುತರ ಸಾಧನೆ ತೋರಿಸಿದರೆ ರಾಜಕೀಯದಿಂದ ನಿವೃತ್ತಿ : ಮುಖ್ಯಮಂತ್ರಿ



### ಹೊನ್ನಾಳಿ ಪ್ರಚಾರ ಸಭೆಯಲ್ಲಿ ಸಿದ್ದರಾಮಯ್ಯ ಸವಾಲು

ಹೊನ್ನಾಳಿ, ಮೇ 5 - ಬಿಜೆಪಿಯ ಸುಳ್ಳು ಮತ್ತು ಕಾಂಗ್ರೆಸ್‌ನ ಸತ್ಯದ ನಡುವೆ ಲೋಕಸಭಾ ಚುನಾವಣೆ ನಡೆಯುತ್ತಿದ್ದು, ಜನರು ಸತ್ಯ ನುಡಿಯುವ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದರು.

ನಗರದ ಪಟ್ಟಣಶೆಟ್ಟಿ ಲೇಔಟ್‌ನಲ್ಲಿ ಕಾಂಗ್ರೆಸ್ ಪಕ್ಷದಿಂದ ಇಂದು ಹಮ್ಮಿಕೊಳ್ಳಲಾಗಿದ್ದ ಪ್ರಜಾಧ್ವನಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

10 ವರ್ಷ ದೇಶವನ್ನಾಳಿದ ಮೋದಿ ಸರ್ಕಾರದಿಂದ ಬೆಲೆಯೇರಿಕೆ, ನಿರುದ್ಯೋಗ ಸಮಸ್ಯೆ, ಅಗತ್ಯ ಉತ್ಪನ್ನಗಳ ಬೆಲೆ ಹೆಚ್ಚಳದಿಂದ ಜನರ ಕೊಂಡುಕೊಳ್ಳುವ ಶಕ್ತಿ ಕುಂದಿದ್ದು, ಈ ಎಲ್ಲಾ ಅಂಶಗಳನ್ನು ಗಂಭೀರವಾಗಿ ಪರಿಗಣಿಸಿ 5 ಗ್ಯಾರಂಟಿ ಯೋಜನೆಗಳನ್ನು ಯಾವುದೇ ಜಾತಿ-ಮತ-ಪಕ್ಷ ಎನ್ನದೇ ರಾಜ್ಯದ ಎಲ್ಲಾ ಸಮುದಾಯಗಳ ಬಡವರು ಇಂದು 5 ಗ್ಯಾರಂಟಿ ಯೋಜನೆಗಳ ಫಲಾನುಭವಿಗಳಾಗಿದ್ದಾರೆ ಎಂದು ಹೇಳಲು ಹರ್ಷವಾಗುತ್ತದೆ ಎಂದರು.

ಮೋದಿ ನೇತೃತ್ವದ ಸರ್ಕಾರದಲ್ಲಿ 10 ವರ್ಷ ಸಂಸದರಾಗಿದ್ದ ಜಿ.ಎಂ.ಸಿದ್ದೇಶ್ವರ ಅವರು ಇಡೀ ಜಿಲ್ಲೆಯಲ್ಲಿ ಹೇಳಿಸಿಕೊಳ್ಳದ ಅಭಿವೃದ್ಧಿ ಕೆಲಸ ಮಾಡದೇ, ಲೋಕಸಭೆಯಲ್ಲೂ ಜಿಲ್ಲೆಯ ಪರ ಮತ್ತು ತಾಲ್ಲೂಕಿನ ಸಮಸ್ಯೆಗಳ ಕುರಿತಾಗಿ ಧ್ವನಿ ಎತ್ತದೆ ? ತಮ್ಮ ಅವಧಿ ಮುಗಿಸಿ ಮತ್ತೆ ತಮ್ಮ ಪತ್ನಿ ಗಾಯತ್ರಿ ಅವರಿಗೆ ಟಿಕೆಟ್ ಕೊಡಿಸಿದ್ದಾರೆ. ಸಿದ್ದೇಶ್ವರ ಅವರೇ ಧ್ವನಿಯೆತ್ತಿಲ್ಲ ಎಂದ ಮೇಲೆ ರಾಜಕೀಯ ಅನುಭವವಿರದ ಅವರ ಪತ್ನಿ ಧ್ವನಿ ಎತ್ತುವರೇ ? ಎಂದು ಮಾರ್ಮಿಕವಾಗಿ ಪ್ರಶ್ನಿಸಿದರು. ಇವರನ್ನು ಅಸಮರ್ಥ ಎಂದು ಮೋದಿ ತಮ್ಮ ಸಂಪುಟದಿಂದ ಕೈಬಿಟ್ಟಿದ್ದವರಿಗೆ ಬೆಂಬಲಿಸುವಿರಾ ? ಎಂದು ಪ್ರಶ್ನಿಸಿದರು.

ಕಾಂಗ್ರೆಸ್ ಅಭ್ಯರ್ಥಿ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರು ವಿದ್ಯಾವಂತರಿದ್ದು, ಅವರು ಗೆದ್ದರೆ ಜಿಲ್ಲೆಯ ಸಮಸ್ಯೆಗಳ ಬಗ್ಗೆ ಗಮನಹರಿಸಿ ಅವುಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಕೆಲಸ ಮಾಡುತ್ತಾರೆ ಎಂಬ ವಿಶ್ವಾಸವಿದೆ. ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಗೆದ್ದರೆ ನಾನೇ ಗೆದ್ದಂತೆ. ನನಗೆ ಅಧಿಕಾರ ನಡೆಸಲು ಇನ್ನೂ ಶಕ್ತಿ ಹೆಚ್ಚಾಗುತ್ತದೆ ಎಂದರು.

**ಕೃತಜ್ಞತೆ :** ನಾನು ಚುನಾವಣೆ ಸಂದರ್ಭಗಳಲ್ಲಿ ಅಭ್ಯರ್ಥಿಗಳ ಪರವಾಗಿ ಮತಯಾಚನೆ ಮಾಡಿದಾಗಲೆಲ್ಲಾ ತಾವುಗಳು ನನ್ನ ಮೇಲೆ ಪ್ರೀತಿ, ಅಭಿಮಾನ ತೋರಿಸಿ ಅಭ್ಯರ್ಥಿಗಳನ್ನು ಗೆಲ್ಲಿಸಿದ್ದೀರಿ. ಅದಕ್ಕಾಗಿ ತಮಗೆಲ್ಲರಿಗೂ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುವುದಾಗಿ (7ನೇ ಪುಟಕ್ಕೆ)

## 2ನೇ ಹಂತದ ಪ್ರಚಾರಕ್ಕೆ ತೆರೆ

### ಪ್ರಮುಖ ಚರ್ಚಾ ವಿಷಯವಾದ ಪ್ರಜ್ವಲ್ ಪೆನ್‌ಡ್ರೈವ್

ಬೆಂಗಳೂರು, ಮೇ 5 - ರಾಜ್ಯದ ಎರಡನೇ ಹಂತದಲ್ಲಿ ನಡೆಯುತ್ತಿರುವ 14 ಲೋಕಸಭಾ ಕ್ಷೇತ್ರಗಳ ಚುನಾವಣೆಯ ಬಹಿರಂಗ ಪ್ರಚಾರಕ್ಕೆ ಭಾನುವಾರ ತೆರೆ ಬಿದ್ದಿದೆ. ಎರಡನೇ ಹಂತದಲ್ಲಿ ಹಾಸನ ಸಂಸದ ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ವಿವಾದವೇ ಪ್ರಮುಖ ಚರ್ಚಾ ವಿಷಯವಾಗಿತ್ತು.

ಮೇ 7ರಂದು ನಡೆಯಲಿರುವ ಚುನಾವಣೆ ಬಿಜೆಪಿಗೆ ಪ್ರತಿಷ್ಠೆಯ ವಿಷಯವಾಗಿದೆ. ಕಳೆದ 2019ರ ಚುನಾವಣೆಯಲ್ಲಿ ಎಲ್ಲಾ 14 ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವು ಸಾಧಿಸಿತ್ತು.

ರಾಜ್ಯದ 28 ಲೋಕಸಭಾ ಕ್ಷೇತ್ರಗಳ ಪೈಕಿ 14ರಲ್ಲಿ ಮೊದಲ ಹಂತದಲ್ಲಿ ಏಪ್ರಿಲ್ 26ರಂದು ಮತದಾನ ನಡೆದಿತ್ತು.

ಎರಡನೇ ಹಂತದ ಚುನಾವಣಾ ಅಭಿಯಾನದಲ್ಲಿ ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ ಹಾಗೂ ಪ್ರಿಯಾಂಕ ಗಾಂಧಿ ವಾದ್ರಾ ಸೇರಿದಂತೆ ಹಲವರು ಪೆನ್‌ಡ್ರೈವ್ ಹಗರಣವನ್ನೇ ಪ್ರಮುಖ ವಿಷಯವಾಗಿಟ್ಟುಕೊಂಡಿದ್ದರು.

400 ಮಹಿಳೆಯರ ಮೇಲೆ ಪ್ರಜ್ವಲ್ ಅತ್ಯಾಚಾರ ಎಸಗಿರುವುದಾಗಿ ಹಾಗೂ ಅತ್ಯಾಚಾರಿ ಪರ ಪ್ರಧಾನ ಮಂತ್ರಿ ನರೇಂದ್ರ ಮೋದಿ ಮತ ಯಾಚಿಸಿರುವುದಾಗಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ತರಾಟೆಗೆ ತೆಗೆದುಕೊಂಡಿದ್ದರು.

ಮತ್ತೊಂದೆಡೆ, ರಾಜ್ಯ ಸರ್ಕಾರ ದೇಶ ವಿರೋಧಿ ಚಟುವಟಿಕೆ ತಡೆಯಲು ವಿಫಲವಾಗಿದೆ ಎಂದು ಬಿಜೆಪಿ ಅಭಿಯಾನ ನಡೆಸಿತ್ತು. ಲವ್ ಜಿಹಾದ್ ಹಾಗೂ ಓಲೈಕೆ ರಾಜಕೀಯದ ಬಗ್ಗೆ ಕೇಸರಿ ಪಕ್ಷ ಟೀಕಾ ಪ್ರಹಾರ ನಡೆಸಿತ್ತು.

ಬೆಳಗಾವಿಯಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಮೊದಲ ಹಂತದಲ್ಲಿ ನಾವು ಎಂಟರಿಂದ ಒಂಭತ್ತು ಕ್ಷೇತ್ರಗಳಲ್ಲಿ ಗೆಲ್ಲಲಿದ್ದೇವೆ. ಎರಡನೇ ಹಂತದಲ್ಲಿ ಹತ್ತು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಲಿದ್ದೇವೆ ಎಂದು ತಿಳಿಸಿದರು.

ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನೆಗಳ ಬಗ್ಗೆ ಭರವಸೆ ಹೊಂದಿದೆ. ಗ್ಯಾರಂಟಿಗಳು ಚುನಾವಣೆಯಲ್ಲಿ ಲಾಭ ತಂದು ಕೊಡಲಿವೆ ಎಂದು ಪಕ್ಷದ ನಾಯಕರು ಹೇಳುತ್ತಿದ್ದಾರೆ.

ಮೇ 7ರಂದು ನಡೆಯಲಿರುವ ಚುನಾವಣೆಯಲ್ಲಿ ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಅವರು ಸತತ ಐದನೇ ಬಾರಿ ಆಯ್ಕೆ ಬಯಸಿದ್ದಾರೆ.

ಇದೇ ವೇಳೆ ಯಾದಗಿರಿ ಜಿಲ್ಲೆಯ ಶೇರಾಪುರ ವಿಧಾನಸಭಾ ಕ್ಷೇತ್ರಕ್ಕೂ ಚುನಾವಣೆ ನಡೆಯಲಿದೆ. ಕಾಂಗ್ರೆಸ್ ಶಾಸಕ ರಾಜ ವೆಂಕಟಪ್ಪ ನಾಯಕ ಅವರು ಕಳೆದ ಫೆಬ್ರವರಿಯಲ್ಲಿ ನಿಧನರಾಗಿದ್ದರಿಂದ ಈ ಕ್ಷೇತ್ರ ತೆರವಾಗಿತ್ತು.

ಬೆಳಗಾವಿ, ಉತ್ತರ ಕನ್ನಡ, ಚಿಕ್ಕೋಡಿ, ಬಾಗಲಕೋಟೆ, ಬೀದರ್, ಹಾವೇರಿ, ಧಾರವಾಡ, ಕೊಪ್ಪಳ, ಬಳ್ಳಾರಿ, ರಾಯಚೂರು, ವಿಜಯಪುರ, ದಾವಣಗೆರೆ, ಶಿವಮೊಗ್ಗ ಹಾಗೂ ಕಲಬುರಗಿ ಕ್ಷೇತ್ರಗಳಿಗೆ ಚುನಾವಣೆ ನಡೆಯುತ್ತಿದೆ.

227 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಬಿಜೆಪಿ ಹಾಗೂ ಕಾಂಗ್ರೆಸ್‌ಗಳು ತಲಾ 14 ಅಭ್ಯರ್ಥಿಗಳನ್ನು ಕಣಕ್ಕಿಳಿಸಿವೆ. ಬಿ.ಎಸ್.ಪಿ. ಒಂಭತ್ತು ಕ್ಷೇತ್ರಗಳಲ್ಲಿ ಸ್ಪರ್ಧಿಸಿದೆ. 117 ಸ್ವತಂತ್ರ ಅಭ್ಯರ್ಥಿಗಳಿದ್ದಾರೆ. 73 ಜನರು ನೋಂದಾಯಿತ ಮಾನ್ಯತೆ ಪಡೆಯದ ಪಕ್ಷಗಳಿಂದ ಕಣದಲ್ಲಿದ್ದಾರೆ. 14 ಕ್ಷೇತ್ರಗಳಲ್ಲಿ 2.59 ಕೋಟಿ ಮತದಾರರಿದ್ದಾರೆ. 28,257 ಮತಗಟ್ಟೆಗಳನ್ನು ಸ್ಥಾಪಿಸಲಾಗುವುದು. (7ನೇ ಪುಟಕ್ಕೆ)

## ಮೇ 8ರವರೆಗೆ ರೇವಣ್ಣ ಕಸ್ಟಡಿಗೆ



ಬೆಂಗಳೂರು, ಮೇ 5 – ಸಂತ್ರಸ್ತೆಯನ್ನು ಅಪಹರಿಸಿ, ಅಕ್ರಮವಾಗಿ ವಶದಲ್ಲಿಟ್ಟುಕೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಜೆಡಿಎಸ್ ಶಾಸಕ ಹೆಚ್.ಡಿ. ರೇವಣ್ಣ ಅವರನ್ನು ಮೇ 8ರವರೆಗೆ ಪೊಲೀಸ್ ಕಸ್ಟಡಿಗೆ ವಹಿಸಲಾಗಿದೆ.

ಮಾಜಿ ಪ್ರಧಾನ ಮಂತ್ರಿ ಹೆಚ್.ಡಿ. ದೇವೇಗೌಡ ಅವರ ಪುತ್ರರಾಗಿರುವ ರೇವಣ್ಣ ಅವರನ್ನು ಶನಿವಾರ ಎಸ್.ಐ.ಟಿ. ಬಂಧಿಸಿತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ ರೇವಣ್ಣ ದಾಖಲಿಸಿದ್ದ ಜಾಮೀನು ಅರ್ಜಿಯನ್ನು ನ್ಯಾಯಾಲಯ ಈ ಹಿಂದೆ ತಳ್ಳಿ ಹಾಕಿತ್ತು.

ಬಂಧನದ ನಂತರ ಇಲ್ಲಿನ ಬೌರಿಂಗ್ ಅಂಡ್ ಲೇಡಿ ಕರ್ಜನ್ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆ ನಡೆಸಲಾಗಿತ್ತು. ನಂತರ ಹೆಚ್ಚುವರಿ ಮುಖ್ಯ ಮೆಟ್ರೋಪಾಲಿಟನ್ ನ್ಯಾಯಾಧೀಶರ ಎದುರು ಹಾಜರು ಪಡಿಸಲಾಯಿತು. ನ್ಯಾಯಾಧೀಶರು ಆರೋಪಿಯನ್ನು ಎಸ್.ಐ.ಟಿ. ಕಸ್ಟಡಿಗೆ ನೀಡಿದ್ದಾರೆ.

ನ್ಯಾಯಾಲಯಕ್ಕೆ ಹಾಜರು ಪಡಿಸುವುದಕ್ಕೆ ಮುಂಚೆ ಮಾತನಾಡಿದ್ದ ರೇವಣ್ಣ, ಈ ಪ್ರಕರಣದಲ್ಲಿ ನಾನು ಭಾಗಿ ಎಂಬುದಕ್ಕೆ ಯಾವುದೇ ಸಾಕ್ಷಿಗಳಿಲ್ಲ. ಇದರಲ್ಲಿ ದೊಡ್ಡ ರಾಜಕೀಯ ಸಂಚಿದೆ ಎಂದು ಆರೋಪಿಸಿದ್ದರು. ಈ ನಡುವೆ, ಸಂಸದ ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣಕ್ಕೆ ಸಂಬಂಧಿಸಿದ ಸಂತ್ರಸ್ತೆಯರಿಗಾಗಿ ಎಸ್‌ಐಟಿ ಸಹಾಯವಾಣಿ ಆರಂಭಿಸಿದೆ.

ಈ ಪ್ರಕರಣದ (7ನೇ ಪುಟಕ್ಕೆ)

## ಪ್ರಜ್ವಲ್ ಪ್ರಕರಣ : ಸಂತ್ರಸ್ತೆಯರಿಗೆ ನೆರವು

ಬೆಳಗಾವಿ, ಮೇ 5 - ಸಂಸದ ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣದಲ್ಲಿ ಸಂತ್ರಸ್ತರಾಗಿರುವವರಿಗೆ ರಾಜ್ಯ ಕಾಂಗ್ರೆಸ್ ಸರ್ಕಾರ ಹಣಕಾಸು ನೆರವು ನೀಡಲಿದೆ.

ಪತ್ರಕರ್ತರೊಂದಿಗೆ ಮಾತನಾಡಿದ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಈ ವಿಷಯ ಪ್ರಕಟಿಸಿದ್ದಾರೆ. (7ನೇ ಪುಟಕ್ಕೆ)

## ಮತದಾನ ಮಾಡಿ ಸೆಲ್ಫಿ ಕಳುಹಿಸಿ ವಿಶೇಷ ಬಹುಮಾನ

ದಾವಣಗೆರೆ, ಮೇ 5 -ದಾವಣಗೆರೆ ಲೋಕಸಭಾ ಕ್ಷೇತ್ರಕ್ಕೆ ಮೇ 7 ರಂದು ಬೆಳಗ್ಗೆ 7 ರಿಂದ ಸಂಜೆ 6 ರವರೆಗೆ ಮತದಾನ ನಡೆಯಲಿದ್ದು, ಮತದಾನ ಮಾಡಿ ಶಾಹಿ ಹಚ್ಚಿದ ಎಡಗೈ ತೋರು ಬೆರಳು (7ನೇ ಪುಟಕ್ಕೆ)

## ಕಾಂಗ್ರೆಸ್‌ಗೆ ಬಡವರ ಮೇಲೆ ನಾಟಕೀಯ ಪ್ರೀತಿ

### ಉತ್ತರ-ದಕ್ಷಿಣ ಕ್ಷೇತ್ರದ ಪ್ರಚಾರದಲ್ಲಿ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ



**ಲೋಕಸಭಾ ಕ್ಷೇತ್ರದ ವಾತಾವರಣ ನೋಡಿದರೆ ನಮ್ಮ ಬಿಜೆಪಿ ಅಭ್ಯರ್ಥಿ ಕನಿಷ್ಠ 2 ಲಕ್ಷ ಲೀಡ್‌ನಲ್ಲಿ ಗೆಲ್ಲುತ್ತಾರೆ. ಶಾಮನೂರು ಕುಟುಂಬದ ದೌರ್ಜನ್ಯದಿಂದ ಕ್ಷೇತ್ರದ ಮತದಾರರು ಹೈರಾಣಾಗಿದ್ದಾರೆ. ಸಿದ್ದೇಶ್ವರ ಅವರು ಮಾಡಿರುವ ಅಭಿವೃದ್ಧಿ ಕೆಲಸ ನೋಡಿದ್ದಾರೆ. ಗಾಯತ್ರಿ ಸಿದ್ದೇಶ್ವರ ಅವರು ಗೆಲ್ಲುವು ಖಚಿತ, ನಿಶ್ಚಿತ.**

**- ಮಾಳವಿಕಾ ಅವಿನಾಶ್, ಬಿಜೆಪಿ ವಕ್ತಾರೆ**

**ದಾವಣಗೆರೆ ಬಿಜೆಪಿ ಭದ್ರಕೋಟೆ, 6 ಬಾರಿ ಸತತವಾಗಿ ಬಿಜೆಪಿ ಗೆದ್ದಿದೆ ಅಂದರೆ ಸುಮ್ಮನೆ ಅಲ್ಲ. ನಮ್ಮ ಕಾರ್ಯಕರ್ತರ ಶ್ರಮ, ಸಿದ್ದೇಶ್ವರ ಅವರ ಅಭಿವೃದ್ಧಿ ಕಾರ್ಯಗಳು ಬಿಜೆಪಿ ಶ್ರೀರಕ್ಷೆ. ಈ ಬಾರಿ ಗಾಯತ್ರಿ ಸಿದ್ದೇಶ್ವರ ಅವರನ್ನು ನಾವೆಲ್ಲವೂ ಸೇರಿ 2 ಲಕ್ಷಕ್ಕೂ ಅಧಿಕ ಮತಗಳ ಅಂತರದಿಂದ ಗೆಲ್ಲಿಸಬೇಕು.**

**- ಎಸ್.ಎ.ರವೀಂದ್ರನಾಥ್**, ಮಾಜಿ ಸಚಿವರು

ದಾವಣಗೆರೆ, ಮೇ 5- ಕಾಂಗ್ರೆಸ್ ಪಕ್ಷಕ್ಕೆ ಹಾಗೂ ಕಾಂಗ್ರೆಸ್ಸಿಗರಿಗೆ ಬಡ ವರೆಂದರೆ ನಾಟಕೀಯ ಪ್ರೀತಿ. ಅವರ ಮೇಲೆ ನಿಜವಾದ ಕಾಳಜಿ ಇಲ್ಲ. ಮೂರು ತಲೆಮಾರು ದೇಶದ ಪ್ರಧಾನಿಗಳಾಗಿದ್ದ ಗಾಂಧಿ ಕುಟುಂಬಕ್ಕೆ ದೇಶದ ಬಡವರ ಕಷ್ಟ ಅರ್ಥವಾಗಲೇ ಇಲ್ಲ. ರೋಟಿ -ಕಪಡಾ-ಮಕಾನ್ ಎಂಬುವುದು 6 0 ವರ್ಷ ಕೇವಲ ಘೋಷಣೆಯಾಗಿಯೇ ಉ ಳಿದಿತ್ತು. ಅದನ್ನು ಪೂರ್ತಿ ಮಾಡುವ ನಿಟ್ಟಿನಲ್ಲಿ ಕಾರ್ಯ ಮಾಡಿದ್ದು ನರೇಂದ್ರ ಮೋದಿ ಜೀ ಅವರೇ ವಿನಃ ಕಾಂಗ್ರೆಸ್ ಅಲ್ಲ ಎಂದು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಅವರು ಕಾಂಗ್ರೆಸ್ ವಿರುದ್ಧ ಗುಡುಗಿದರು.

ದಾವಣಗೆರೆ ಉತ್ತರ, ದಕ್ಷಿಣ ವಿಧಾನಸಭಾ ಕ್ಷೇ ತ್ರ ವ್ಯಾಪ್ತಿಯಲ್ಲಿ ಕೊನೆ ದಿನದ ಬಹಿರಂಗ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, 60 ವರ್ಷ ದೇ ಶ ವನ್ನಾಳಿದ ಕಾಂಗ್ರೆಸ್ ಬಡತನ ನಿರ್ಮೂಲನೆಗೆ ಪ್ರಾಮಾಣಿಕ ಪ್ರಯತ್ನ ಮಾಡಲೇ ಇಲ್ಲ . ಗಾಂಧಿ ಪರಿವಾರ ತಮ್ಮ ಕುಟುಂಬದ ಅ ಸ್ತಿ ತ್ವಕ್ಕಾಗಿ ರಾಜಕಾರಣ ಮಾಡಿದೆಯೇ ವಿನಃ ದೇಶ ದ ಅಭಿವೃದ್ಧಿ, ಬಡವರ ಕಾಳಜಿಗಾಗಿ ರಾಜಕಾರಣ ಮಾಡಿಲ್ಲ ಎಂದು ಛೇಡಿಸಿದರು.

ನರೇಂದ್ರ ಮೋದಿಜೀ ಪ್ರಧಾನಿಯಾಗಿ 10 ವರ್ಷಗಳಲ್ಲೇ 3 ಕೋಟಿ ಮನೆಗಳನ್ನು ನಿರ್ಮಾಣ ಮಾಡಿದ್ದಾರೆ. ದೇಶದ 80 ಕೋಟಿಗೂ ಹೆಚ್ಚು ಜನರಿಗೆ ಉಚಿತ ಪಡಿತರ ನೀಡುತ್ತಿದ್ದಾರೆ. ಬಡವರ ಕಲ್ಯಾಣಕ್ಕಾಗಿ ಹಲವಾರು ಯೋಜನೆ ಜಾರಿಗೊಳಿಸಿದ್ದಾರೆ. ಕೇವಲ 10 ವರ್ಷಗಳಲ್ಲಿ ಮೋದಿ ಜೀ ಇಷ್ಟೆಲ್ಲಾ ಸಾಧನೆ ಮಾಡಿದ್ದಾರೆ ಎಂದಾದರೆ, 60 ವರ್ಷ ದೇಶ ಆಳಿದ ಕಾಂಗ್ರೆಸ್‌ಗೆ ಏಕೆ ಸಾಧ್ಯವಾಗಲಿಲ್ಲ ? ಎಂದು ಪ್ರಶ್ನಿಸಿದ ಅವರು, ಮೋದಿ ಜೀ ತಂದಿರುವ ಹಲವಾರು ಸುಧಾರಣೆಗಳಿಂದ ದೇಶದ 25 ಕೋಟಿ ಜನ ಹಲವು ಆಯಾಮಗಳ ಬಡತನದಿಂದ ಹೊರ ಬಂದಿದ್ದಾರೆ ಎಂದರು.

ಪ್ರಿಯಾಂಕಾ ಗಾಂಧಿ ನಿನ್ನೆ ದಾವಣಗೆರೆಯಲ್ಲಿ ನಿರುದ್ಯೋಗದ ಬಗ್ಗೆ ಮಾತನಾಡಿದ್ದಾರೆ. ದೇಶಾದ್ಯಂತ ಬ್ರಿಟಿಷರ ಕಾಲದಲ್ಲಿದ್ದ ಅನೇಕ ದೊಡ್ಡ ದೊಡ್ಡ ಖಾಸಗಿ ಕಂಪನಿಗಳು, ಕಾರ್ಖಾನೆಗಳು ಮುಚ್ಚುವ ಹಂತಕ್ಕೆ ಬರಲು ಕಾಂಗ್ರೆಸ್ ಕಾರಣ. ಕಾಂಗ್ರೆಸ್ ಕಾಲದಲ್ಲಿ ಸಾರ್ವಜನಿ ಕ ಸ್ವಾಮ್ಯದ ಅನೇಕ ಉದ್ದಿಮೆಗಳು ನಷ್ಟದ ಹಾದಿಯಲ್ಲಿದ್ದವು. ಕೆಲಸ ಮಾಡುವ ಕಾರ್ಮಿಕರಿಗೆ ಸಂಬಳ ಕೊಡಲು ಆಗದ ಸ್ಥಿತಿಗೆ ಉದ್ದಿಮೆಗಳನ್ನು ತಂದ ಕೀರ್ತಿ ಕಾಂಗ್ರೆಸ್ ಸರ್ಕಾರಕ್ಕೆ ಸಲ್ಲುತ್ತದೆ (7ನೇ ಪುಟಕ್ಕೆ)

## ದಾವಣಗೆರೆ ಜಿಲ್ಲೆ ಅಭಿವೃದ್ಧಿಯೇ ನನ್ನ ಗ್ಯಾರಂಟಿ : ವಿನಯ್



ದಾವಣಗೆರೆ, ಮೇ 5 - ನನ್ನ ಗ್ಯಾರಂಟಿ ಅಭಿವೃದ್ಧಿ, ಬಡ ಕುಟುಂಬ, ಹಳ್ಳಿ ಪ್ರದೇಶದಿಂದ ಬಂದಂತಹ ನನಗೆ ಬಡವರು, ಹಸಿವಿನ ನೋವು ಗೊತ್ತು. ಜನಸೇವೆ ಮಾಡಬೇಕೆಂದು ತುಂಬಾನೇ ಕಷ್ಟಪಟ್ಟು ಚುನಾವಣಾ ಕಣದಲ್ಲಿದ್ದೇನೆ. ಅಭಿವೃದ್ಧಿಯನ್ನು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ತಲುಪಿಸಬೇಕೆಂಬ ಅಪೇಕ್ಷೆಯಿಂದ ಬಂದಿದ್ದೇನೆ. ಪ್ರಯತ್ನದಲ್ಲಿ ಯಶಸ್ವಿಯಾಗುತ್ತೇನೆ ಎಂಬ ನಂಬಿಕೆ ಇದೆ. ಸಮೀಕ್ಷೆಗಳಲ್ಲಿ ಗೆಲುವು ನನ್ನ ಪರವಿದೆ ಎಂಬುದು ಗೊತ್ತಾಗುತ್ತಿದ್ದಂತೆ ನನ್ನನ್ನು ತುಳಿಯುವ ಪ್ರಯತ್ನ ನಡೆಯುತ್ತಿದೆ ಎಂದು ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಜಿ.ಬಿ. ವಿನಯ್ ಕುಮಾರ್ ಹೇಳಿದರು.

ನಗರದ ವಿವಿಧೆಡೆ ಮತಯಾಚನೆ ಮಾಡಿದ ಬಳಿಕ ಮಾತನಾಡಿದ ಅವರು, ರಾಜಕಾರಣದಲ್ಲಿ ಇನ್ನೂ 30 ರಿಂದ 35 (7ನೇ ಪುಟಕ್ಕೆ)

TVS Training & Services

Job Details

- Post: RELATIONSHIP MANAGER (Grade: Senior Officer)
- Age Criteria : Below 25years 6 months (Male & Female)
- Qualification: Any Graduates (BE/B.Tech & MBA are not eligible)

DATE: 09.05.2024 | TIME : 10.00 A.M.

Interview Venue :
VIDYA POSHAK
Vysya Hostel,1st Floor, Near Jayadeva Circle, Davanagere


ICICI Bank

Build your Banking career through PGPRM
(Post Graduate Program in Relationship Management)
Complete 21 days training and join ICICI Bank (on-roll)
* Please carry soft copy and hard copy resume, PAN, Aadhar & Educational Certificate

Kindly register your details on the given link
https://tinyurl.com/ICICICAMPUSRM
WhatsApp / Contact: 9500066826

ಮತದಾನ ಮಾಡಿ ವಿಶೇಷ ರಿಯಾಯತಿ ಪಡೆಯಿರಿ

ನಿಮ್ಮ 'ರವಿತೇಜ' ದಲ್ಲಿ



ಮತದಾನ ನಮ್ಮ ಹಕ್ಕು
ತಪ್ಪದೇ ಮತದಾನ ಮಾಡಿ.

10% OFF + 10% OFF

ಮತದಾನ ದಿನದಂದು ಮಾತ್ರ

Raviteja
Textiles
Silk Sarees | Mens Wear | Kids Wear

ರವಿತೇಜ ಗಾರ್ಮೆಂಟ್ಸ್
ಚಾಮರಾಜಪೇಟೆ, ಫೋ : 98800 32999

ರವಿತೇಜ'ಸ್
ವಿದ್ಯಾನಗರ, ಫೋ : 98803 82611

ರವಿತೇಜ ಕಿಡ್ಸ್
ಚಾಮರಾಜಪೇಟೆ, ಫೋ : 98800 32999

ರವಿತೇಜ ಫ್ಯಾಷನ್
ಚೇತನ ಹೋಟೆಲ್ ರಸ್ತೆ, ಫೋ : 95916 33871

ರವಿತೇಜ ಸಿಲ್ಕ್ಸ್ ಅಂಡ್ ಸ್ಯಾರೀಸ್
ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ. ಫೋ : 98444 66844, 97419 53993

# ಸಾಮಾನ್ಯ ಜನರು ನನ್ನ ಗಾಡ್ ಫಾದರ್, ಗೆದ್ದರೆ ಸ್ವಾಭಿಮಾನಕ್ಕೆ ಜಯ ಸಿಕ್ಕಂತೆ



**ಹರಪನಹಳ್ಳಿ ಕ್ಷೇತ್ರದ ಪ್ರಚಾರದಲ್ಲಿ ಪಕ್ಷೇತರ ಅಭ್ಯರ್ಥಿ ಜಿ. ಬಿ. ವಿನಯ್ ಕುಮಾರ್**

ಹರಪನಹಳ್ಳಿ,ಮೇ 5 - ರಾಜಕಾರಣದಲ್ಲಿ ನನಗೆ ಯಾರೂ ಗಾಡ್ ಫಾದರ್ ಇಲ್ಲ. ಜನಸಾಮಾನ್ಯರೇ ನನ್ನ ಗಾಡ್ ಫಾದರ್. ನಾನು ಈ ಬಾರಿಯ ಚುನಾವಣೆಯಲ್ಲಿ ಗೆದ್ದರೆ ಜಿಲ್ಲೆಯ ಸ್ವಾಭಿಮಾನಿಗಳಿಗೆ ಗೆಲುವು ಸಿಕ್ಕಂತೆ ಎಂದು ದಾವಣಗೆರೆ ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಜಿ. ಬಿ. ವಿನಯ್ ಕುಮಾರ್ ಹೇಳಿದರು.

ಹರಪನಹಳ್ಳಿಯಲ್ಲಿ ಬೃಹತ್ ರೋಡ್ ಶೋ ನಡೆಸಿ ಮಾತನಾಡಿದ ಅವರು, ಸಾಮಾನ್ಯರಿಂದ, ಸಾಮಾನ್ಯರಿಗಾಗಿ, ಸಾಮಾನ್ಯರಿಗೋಸ್ಕರ ನಡೆಸುತ್ತಿರುವ ಚುನಾವಣೆ ಇದು. ದೊಡ್ಡ ನಾಯಕರು ಯಾರೂ ನನ್ನ ಹಿಂದೆ ಇಲ್ಲ. ನನ್ನ ಜೊತೆಗಿರುವುದು ಸ್ವಾಭಿಮಾನಿಗಳು. ಕುಟುಂಬ ರಾಜಕಾರಣಕ್ಕೆ ಇತಿಶ್ರೀ ಹಾಡಲೇ ಬೇಕೆಂದು ಪಣ ತೊಟ್ಟಿರುವ ಜನರು ಈ ಬಾರಿಯ ಚುನಾವಣೆಯಲ್ಲಿ ನನ್ನನ್ನು ಗೆಲ್ಲಿಸಿ, ಲೋಕಸಭೆಗೆ ಕಳುಹಿಸಿಕೊಡುವ ಮೂಲಕ ನಾವು ಸ್ವಾಭಿಮಾನಿಗಳು ಎಂದು ಸಾಬೀತುಪಡಿಸುತ್ತಾರೆ ಎಂದರು.

ಕ್ರೀಡೆಗೆ ವಿಶೇಷ ಆದ್ಯತೆ ನೀಡಲಾಗುವುದು. ಕುಸ್ತಿಪಟುಗಳು ಹೆಚ್ಚಿದ್ದು, ಅವರಿಗೆ ಸೂಕ್ತ ಸೌಲಭ್ಯವುಳ್ಳ ಗರಡಿಮನೆ ಆಗಬೇಕಿದೆ. ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡಬೇಕಿದೆ. ಮಹಿಳೆಯರ ಬದುಕು ಹಸನಾಗಿಸಲು ವಿಶೇಷ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇನೆ ಎಂದು ತಿಳಿಸಿದರು.

# ಹರಿಹರದಲ್ಲಿ ಶಕ್ತಿ ಪ್ರದರ್ಶಿಸಿದ ಜಿ.ವಿ.ವಿನಯ್



ದಾವಣಗೆರೆ, ಮೇ 5 - ಹರಿಹರ ಪಟ್ಟಣದಲ್ಲಿ ದಾವಣಗೆರೆ ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಜಿ. ಬಿ. ವಿನಯ್ ಕುಮಾರ್ ಅವರು ರೋಡ್ ಶೋ ನಡೆಸಿದರು. ಸಾವಿರಾರು ಸಂಖ್ಯೆಯಲ್ಲಿ ಅಭಿಮಾನಿಗಳು, ಹಿತೈಷಿಗಳು, ಬೆಂಬಲಿಗರು ರಾ ಲ್ಲಿಯಲ್ಲಿ ಪಾಲ್ಗೊಳ್ಳುವ ಮೂಲಕ ಶಕ್ತಿ ಪ್ರದರ್ಶಿಸಲಾಯಿತು.

ಹರಿಹರ ಎಪಿಎಂಸಿ ಹರಿಹರೇಶ್ವರ ದೇವಸ್ಥಾನ ರಸ್ತೆ ಕೆ ಇ ಬಿ ರಸ್ತೆ ಮಾರ್ಗವಾಗಿ ಹರಪನಹಳ್ಳಿ ಸರ್ಕಲ್, ಎ. ಕೆ. ಕಾಲೋನಿ ರಸ್ತೆ, ಹರ್ಲಾಪುರ ರಸ್ತೆ, ಶಿವಮೊಗ್ಗ ರಸ್ತೆ ಮಾರ್ಗವಾಗಿ ಜೆ. ಸಿ. ಬಡಾವಣೆ ನಾಲ್ಕನೇ ಮೇನ್ ಆಸ್ಪತ್ರೆ ರಸ್ತೆ ಮಾರ್ಗವಾಗಿ ಪಿ. ಬಿ. ರಸ್ತೆಯವರೆಗೆ ರೋಡ್ ಶೋ ನಡೆಸಲಾಯಿತು.

ಈ ವೇಳೆ ಮಾತನಾಡಿದ ವಿನಯ್ ಕುಮಾರ್ ಅವರು, ಇಷ್ಟೊಂದು ಸಂಖ್ಯೆಯಲ್ಲಿ ಜನರು ಸೇರಿದ್ದನ್ನು ನೋಡಿದರೆ ಹರಿಹರ ತಾಲ್ಲೂಕಿನಲ್ಲಿ ಎಷ್ಟೊಂದು ಬೆಂಬಲ ಸಿಕ್ಕಿದೆ ಎಂಬುದು ಗೊತ್ತಾಗುತ್ತದೆ. ಎಲ್ಲಾ ವರ್ಗದ ಜನರು ತುಂಬಾನೇ ಪ್ರೀತಿ ಕೊಟ್ಟಿದ್ದಾರೆ ಎಂದು ಹೇಳಿದರು.

ಬಿಬಿಎಂಪಿ ಮಾಜಿ ಮೇಯರ್ ಕೆ. ವೆಂಕಟೇಶ್ ಮೂರ್ತಿ, ನಿವೃತ್ತ ಕೆಎಎಸ್ ಅಧಿಕಾರಿಗಳಾದ ಕೊತ್ತಬಂರಿ ಸಿದ್ದಪ್ಪ ಭಾನುವಳ್ಳಿ, ಕೆ. ರೇವಣಪ್ಪ ಕಮಲಪುರ, ಕುರುಬ ಸಮಾಜದ ರಾಜ್ಯ ಘಟಕದ ಮಾಜಿ ನಿರ್ದೇಶಕ ಟಿ. ಬಸವರಾಜ್, ನಾಗರಾಜ್ ಎಸ್. ಮೇರ್ವಾಡಿ, ಇಮ್ರಾನ್, ಕೆ. ಲಕ್ಷ್ಮಣ್, ಮುಬಾರಕ್, ನವಾಬ್, ಜಫಾರ್, ಸಾಹಿಲ್, ವಾಸೀಂ, ಇದಾಯತ್, ಅರ್ಫಾನ್, ರ್‍ಯೈಯದ್, ಕಾರ್ತಿಕ್, ಮಂಜುನಾಥ, ವಿನಯ್, ನದೀಮ್, ಸಂತೋಷ್ ಮತ್ತಿತರರು ಪಾಲ್ಗೊಂಡಿದ್ದರು.

## ಕಾಂಗ್ರೆಸ್ ಸೋಲಿಸಲು ಪಕ್ಷೇತರ ಅಭ್ಯರ್ಥಿಗಳಿಗೆ ಮತ ನೀಡಿ

ದಾವಣಗೆರೆ, ಮೇ 5 - ಕಾಂಗ್ರೆಸ್ ಪಕ್ಷ ಮುಸ್ಲಿಮರನ್ನು ವೋಟ್ ಹಾಕಿಸಿಕೊಳ್ಳಲು ಇಟ್ಟುಕೊಂಡಿದೆ. ಆದ್ದರಿಂದ ಇಸ್ಲಾಂನವರು ಮುಸ್ಲಿಂ ಪಕ್ಷೇತರ ಅಭ್ಯರ್ಥಿಗಳಿಗೆ ಮತ ಚಲಾಯಿಸಿ ಎಂದು ಅಭ್ಯರ್ಥಿ ತಸ್ಲಿಂ ಬಾನು ಹೇಳಿದರು.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ಮಾರ್ಟ್‌ಸಿಟಿಗೆ ಕೋಟ್ಯಾಂತರ ಹಣ ವ್ಯಯಿಸಿದ್ದರೂ ನಗರದ ಕೆಲವೆಡೆ ಚರಂಡಿ, ರಸ್ತೆಗಳು ಅಭಿವೃದ್ಧಿಯಾಗಿಲ್ಲ ಎಂದು ದೂರಿದರು. ಮುಸಲ್ಮಾನರನ್ನು ದುಡಿಸಿಕೊಳ್ಳುವ ಕಾಂಗ್ರೆಸ್ ಪಕ್ಷ ಸೋಲಿಸಲು, ನಮ್ಮ ಸಮಾಜದವರು ಮುಸ್ಲಿಂ ಸಮಾಜದ 12 ಜನ ಪಕ್ಷೇತರ ಅಭ್ಯರ್ಥಿಗಳಿಗೆ ಮತ ಚಲಾಯಿಸಿ ಎಂದು ಹೇಳಿದರು. ಹೆಗಡೆ ನಗರ ಸ್ಥಳಾಂತರಿಸಿ, ಅಲ್ಲಿದ್ದ ನಿವಾಸಿಗಳ ಬದುಕನ್ನು ಅತಂತ್ರ ಸ್ಥಿತಿಗೆ ತಂದಿದ್ದಾರೆ. ಆದ್ದರಿಂದ ಎಲ್ಲರೂ 12 ಜನ ಮುಸ್ಲಿಂ ಪಕ್ಷೇತರ ಅಭ್ಯರ್ಥಿಗಳಲ್ಲಿ ಯಾರಿಗಾದರೂ ತಪ್ಪದೇ ಮತ ಹಾಕುವಂತೆ ಮನವಿ ಮಾಡಿದರು.

ಈ ವೇಳೆ ಸುಭಾನ್ ಸಾಬ್, ಸಲಿಂ, ಫರ್ವೇಜ್, ರಶೀದ್ ಖಾನ್ ಸುದ್ದಿಗೋಷ್ಠಿಯಲ್ಲಿದ್ದರು.

# ಲಂಬಾಣಿ ತಾಂಡಾ ಸೇರಿ ವಿವಿಧೆಡೆ ವಿನಯ್ ಪ್ರಚಾರ

ದಾವಣಗೆರೆ, ಮೇ 5 - ದಾವಣಗೆರೆ ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಜಿ. ಬಿ. ವಿನಯ್ ಕುಮಾರ್ ಅವರು ಲಂಬಾಣಿ ತಾಂಡಾಗಳು ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಬಿರುಸಿನ ಪ್ರಚಾರ ನಡೆಸಿದರು.

ದಾವಣಗೆರೆ ತಾಲ್ಲೂಕಿನ ನೀಲಾನಹಳ್ಳಿ, ಹಳೇಬಾತಿ, ಓಬಜಿಹಳ್ಳಿ, ಬದಿನಾಯ್ಕನ ತಾಂಡ, ಮಾಗಾನಹಳ್ಳಿ, ಪುಟಗನಾಳ್ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಭರ್ಜರಿ ರೋಡ್ ಶೋ ನಡೆಸಿದರು. ಲಂಬಾಣಿ ತಾಂಡಗಳಲ್ಲಿ ಮಹಿಳೆಯರು ವಿನಯ್ ಕುಮಾರ್ ಅವರ ಬಳಿ ಸಮಸ್ಯೆ ಹೇಳಿದರು.

ಬದಿನಾಯ್ಕನ ತಾಂಡಾಕ್ಕೆ ವಿನಯ್ ಕುಮಾರ್ ಅವರು ಬರುತ್ತಿದ್ದಂತೆ ಬಂಜಾರ ಸಮುದಾಯದ ಮಹಿಳೆಯರು ಸಂಪ್ರದಾಯಿಕ ಉಡುಗೆ ತೊಟ್ಟು ಆರತಿ ಬೆಳಗಿ ಅದ್ಧೂರಿಯಾಗಿ ಬರಮಾಡಿಕೊಂಡರು.

ಈ ವೇಳೆ ಮಾತನಾಡಿದ ವಿನಯ್ ಕುಮಾರ್ ಅವರು, ಮಹಿಳೆಯರ ಪರಿಸ್ಥಿತಿ ಅರ್ಥವಾಗುತ್ತದೆ. ತಾಯಂದಿರು, ಅಕ್ಕಂದಿರು, ತಂಗಿಯರು, ಯುವತಿ ಯರು ಆರ್ಥಿಕವಾಗಿ ಸಬಲರಾಗಬೇಕು. ಈ ನಿಟ್ಟಿನಲ್ಲಿ ಕಾರ್ಯೋನ್ಮುಖ ನಾಗುತ್ತೇನೆ. ಆರ್ಥಿಕ ಶಕ್ತಿ ತುಂಬಲು ಶಕ್ತಿಮೀರಿ ಪ್ರಯತ್ನಿಸುತ್ತೇನೆ ಎಂದು ಭರವಸೆ ನೀಡಿದರು. ಈ ವೇಳೆ ಗ್ರಾಮದ ಪ್ರಮುಖ ರಾದ ರಮೇಶ್, ಕೃಷ್ಣನಾಯ್ಕ, ಕಾಳ್ಯ ನಾಯ್ಕ, ಮಂಜನಾಯ್ಕ, ಮೂರ್ತಿ ನಾಯ್ಕ, ಲಿಂಗೇಶ ನಾಯ್ಕ, ಪ್ರಕಾಶ ನಾಯ್ಕ ಮತ್ತಿತರರು ಹಾಜರಿದ್ದರು.



**ಓಬಜಿಹಳ್ಳಿ ಗ್ರಾಮದಲ್ಲಿ ಪ್ರಚಾರ:** ಓಬೇಜಿಹಳ್ಳಿ ಗ್ರಾಮದಲ್ಲಿ ರೋಡ್ ಶೋಗೆ ಜನರಿಂದ ಅದ್ದೂರಿ ಸ್ವಾಗತ ಸಿಕ್ಕಿತು. ಗ್ರಾಮದ ಜಾತಿ, ಧರ್ಮ ಮರೆತು ಎಲ್ಲರೂ ಒಟ್ಟಾಗಿ ವಿನಯ್ ಕುಮಾರ್ ಅವರನ್ನು ಬೆಂಬಲಿಸಲು ನಿರ್ಧರಿಸಿದರು. ಈ ವೇಳೆ ಗ್ರಾಮದ ಪ್ರಮುಖರಾದ ಪರಮೇಶ್ವರ ನಾಯ್ಕ, ನಾಗನಾಯ್ಕ, ಹಾಲೇನಾಯ್ಕ, ನೇಮಾ ನಾಯ್ಕ, ಉಗ್ರ ನಾಯ್ಕ, ಸತ್ಯ ನಾಯ್ಕ, ಕೃಷ್ಣ ನಾಯ್ಕ, ಮಂಜ ನಾಯ್ಕ ಮತ್ತಿತರರು ಹಾಜರಿದ್ದರು.

ಪುಟಗನಾಳ್ ಗ್ರಾಮದಲ್ಲಿಯೂ ವಿನಯ್ ಕುಮಾರ್ ಪ್ರಚಾರ ನಡೆಸಿದರು.

# ಹರಪನಹಳ್ಳಿಯಲ್ಲಿ ಜನಸಾಗರ : ವಿನಯ್ ಕುಮಾರ್‌ಗೆ ಜೈಕಾರ

ದಾವಣಗೆರೆ, ಮೇ 5 - ದಾವಣಗೆರೆ ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಜಿ.ಬಿ. ವಿನಯ್ ಕುಮಾರ್ ಅವರು ಹರಪನಹಳ್ಳಿಯಲ್ಲಿ ಭರ್ಜರಿ ಪ್ರಚಾರ ನಡೆಸಿದರು. ಗ್ರಾಮ ಗ್ರಾಮ ಗಳಿಂದ ಸಾವಿರಾರು ಸಂಖ್ಯೆಯಲ್ಲಿ ಜನಸಾಗರವೇ ಹರಿದು ಬಂದಿತ್ತು. ಎಲ್ಲಿ ನೋಡಿದರೂ ಜನವೋ ಜನರು ಕಂಡು ಬಂದರು. ಜನರ ಪ್ರೀತಿಗೆ ವಿನಯ್ ಕುಮಾರ್ ಅವರು ಖುಷಿಯಾದರು.

ಹರಪನಹಳ್ಳಿಗೆ ವಿನಯ್ ಕುಮಾರ್ ಅವರು ಆಗಮಿಸುತ್ತಿದ್ದಂತೆ ಸೇರಿದ್ದ ಜನಸ್ತೋಮ ಅದ್ದೂರಿಯಾಗಿ ಸ್ವಾಗತ ನೀಡಿತಲ್ಲದೇ, ಪಟಾಕಿ ಸಿಡಿಸಿ ಸಂಭ್ರಮಿಸಿದರು. ವಿನಯ್ ಕುಮಾರ್ ಅವರಿಗೆ ಜೈಕಾರ, ಸಿಲಿಂಡರ್ ಘೋಷಣೆಗಳು ಮುಗಿಲು ಮುಟ್ಟಿದವು. ಮಹಿಳೆಯರು ಆರತಿ ಬೆಳಗಿ ಸ್ವಾಗತಿಸಿದರೆ, ಯುವಕರು ನೃತ್ಯ ಮಾಡಿ ಗಮನ ಸೆಳೆದರು.

ಹರಪನಹಳ್ಳಿಯ ಹರಿಹರ ವೃತ್ತದಿಂದ ಆರಂಭವಾದ ಬೃಹತ್ ರೋಡ್ ಶೋ ತೆಕ್ಕದಗರಡಿಕೇರೆ, ಅರಸಿಕೇರ ರಸ್ತೆ, ಕೋರಮರ ಓಣಿ, ವಾಲ್ಮೀಕಿ ನಗರ, ಐಬಿ ವೃತ್ತದಿಂದ ಕೊಟ್ಟೂರು ವೃತ್ತದ ಮುಖ್ಯರಸ್ತೆ, ಮೆಗಳಪೇಟೆ ಸಾಗಿದ ಮೂಲಕ ಸಾಗಿ ಹರಪ್ಪನಹಳ್ಳಿಯ ಬಸ್ ನಿಲ್ದಾಣ ತಲುಪಿ ಮುಕ್ತಾಯಗೊಂಡಿತು. ಯಾವ ರಾಷ್ಟ್ರೀಯ ಪಕ್ಷಗಳಿಗೂ ಕಡಿಮೆ ಏನಿಲ್ಲ ಎಂಬಂತೆ ಮೆರವಣಿಗೆ ಸಾಗಿತು. ವಾದ್ಯಗಳು, ತಮಟೆ ಸದ್ದು ಮೆರವಣಿಗೆಗೆ ಮತ್ತಷ್ಟು ರಂಗು ನೀಡಿತು. ಎಲ್ಲೆಲ್ಲೂ ವಿನಯ್ ಕುಮಾರ್ ಭಾವಚಿತ್ರ, ಸ್ವಾಭಿಮಾನಿ ಸಂಕೇತವೂ ರಾರಾಜಿಸಿತು.



**ಜಿಬಿವಿ ಜನುಮದಿನ ಆಚರಣೆ :** ನೀಲಗುಂದ ಕ್ರಾಸ್ ಬಳಿ ಅಭಿಮಾನಿಗಳು, ಕಾರ್ಯಕರ್ತರು, ಹಿತೈಷಿಗಳು, ಬೆಂಬಲಿಗರು ಜಿ.ಬಿ. ವಿನಯ್ ಕುಮಾರ್ ಅವರ ಹುಟ್ಟು ಹಬ್ಬದ ಪ್ರಯುಕ್ತ ದಾರಿ ಮಧ್ಯೆ ಕೇಕ್ ಕತ್ತರಿಸಿ ಸಂಭ್ರಮಿಸಿದರು.

ಈ ವೇಳೆ ಮಾತನಾಡಿದ ಅವರು, ಇಲ್ಲಿ ಸೇರಿ ರುವ ಜನಸ್ತೋಮ ನೋಡಿದರೆ ನನಗೆ ಗೆದ್ದೇ ಗೆಲ್ಲುವೆ ಎಂಬ ವಿಶ್ವಾಸ ಮತ್ತಷ್ಟು ಇಮ್ಮಡಿಗೊಳಿಸಿದೆ. ಇಷ್ಟೊಂದು ಸಂಖ್ಯೆಯಲ್ಲಿ ಗ್ರಾಮ ಗ್ರಾಮಗಳಿಂದ ಬಂದಿರುವ ಜನರನ್ನು ನೋಡಿದರೆ ಬಿಜೆಪಿ, ಕಾಂಗ್ರೆಸ್‌ಗೆ ನಡುಕ ಉಂಟಾಗುವಂತೆ ಮಾಡಿದೆ. ಜನರ ಮಧ್ಯೆ ಇರುವವನು ನಾನು. ನಿಮ್ಮೊಂದಿಗೆ ಇರುವವನು ನಾನು. ನಿಮ್ಮಿಂದಲೇ ಬೆಳೆದವನು. ನಿಮಗಾಗಿಯೇ ಚುನಾವಣೆಗೆ ಸ್ಪರ್ಧಿಸಿದ್ದೇನೆ, ನೀವೇ ಗೆಲ್ಲಿಸಬೇಕು ಎಂದು ಮನವಿ ಮಾಡಿದರು.

# ಹರಿಹರ ಐತಿಹಾಸಿಕ ತಾಣಗಳ ಅಭಿವೃದ್ಧಿಗೆ ವಿಶೇಷ ಆದ್ಯತೆ : ವಿನಯ್

ಹರಿಹರ, ಮೇ 5- ನಾನು ಲೋಕಸಭೆ ಸದಸ್ಯನಾದರೆ ಹರಿಹರ ತಾಲ್ಲೂಕಿನ ಸರ್ವಾಂಗೀಣ ಅಭಿವೃದ್ಧಿಗೆ ಹಗಲಿರುಳು ಶ್ರಮಿಸುತ್ತೇನೆ. ಐತಿಹಾಸಿಕ ತಾಣಗಳ ಅಭಿವೃದ್ಧಿಗೆ ವಿಶೇಷ ಆದ್ಯತೆ ನೀಡುತ್ತೇನೆ ಎಂದು ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಜಿ.ಬಿ.ವಿನಯ್ ಕುಮಾರ್ ಭರವಸೆ ನೀಡಿದರು.

ಹರಿಹರೇಶ್ವರ ದೇವಾಲಯ, ಲಕ್ಷ್ಮಿ ದೇವಾಲಯ, ಕಾಲಭೈರವ, ಒಡಬಾಂಡೇಶ್ವರ, ತಾರಕೇಶ್ವರ, ಚಿಕ್ಕ ಹರಿಹರೇಶ್ವರ, ಕಾಶಿ ವಿಶ್ವನಾಥ, ಯೋಗೇಶ್ವರ, ಆಂಜನೇಯ, ಅಂಬಾಭವಾನಿ, ವಿಠ್ಠಲ ಮಂದಿರ, ಬಸವೇಶ್ವರ, ಶ್ರೀ ರಾಮದೇವರ ಗುಡಿ, ವೆಂಕಟರಮಣಸ್ವಾಮಿ, ಮಾರ್ಕಂಡೇಶ್ವರ ದೇವಾಲಯ, ಶ್ರೀ ವೀರಭದ್ರೇಶ್ವರ ಗುಡಿ, ಉಕ್ಕಡಗಾತ್ರಿ ದೇವಾಲಯವೂ ಸೇರಿದಂತೆ, ಅನೇಕ ಧಾರ್ಮಿಕ, ಶ್ರದ್ಧಾ ಕೇಂದ್ರಗಳಿವೆ. ಈ ದೇವಾಲಯಗಳ ಅಭಿವೃದ್ಧಿಗೆ ಒತ್ತು ನೀಡಲಾಗುವುದು ಎಂದು ಹೇಳಿದರು.

ಈ ವೇಳೆ ಭಾನುವಳ್ಳಿ ಗ್ರಾಮದ ವಿ. ನಾಗರಾಜ್, ಎಂ. ಮಾಂತೇಶ್, ಬಿ. ಎನ್. ಕರಿಯಪ್ಪ, ಬಿ. ಮಹಾದೇವಪ್ಪ, ಬಿ. ಚಂದ್ರಪ್ಪ, ಹೆಚ್.ಸುರೇಶ್, ಎ.ಲೋಕೇಶ್, ಜೋಗಪ್ಪರ ಸುರೇಶ್, ಕೋಲ್ಕರ್ ನಾಗಪ್ಪ, ನಾಗರಾಜ ಶಿಕಾರಿಪುರ ಮತ್ತಿತರರು ಹಾಜರಿದ್ದರು.





ಭಾನುವಳ್ಳಿ, ಮಲೇಬೆನ್ನೂರು ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಮತಯಾಚನೆ ಮಾಡಿದರು.

ಮಲೇಬೆನ್ನೂರಿನಲ್ಲಿ ಮಾತನಾಡಿದ ವಿನಯ್ ಕುಮಾರ್, ಮಲೇಬೆನ್ನೂರು ಸೇರಿದಂತೆ, ಹಲವು ಗ್ರಾಮಗಳಲ್ಲಿ ಇಂದಿಗೂ ಭದ್ರಾ ಅಚ್ಚುಕಟ್ಟುದಾರರಿದ್ದಾರೆ. ತುಂಗಭದ್ರಾ ನದಿಯು ಹರಿಯುತ್ತದೆ. ಈ ಭಾಗದಲ್ಲಿ ನೀರಿನ ಸಮಸ್ಯೆ ಉಂಟಾಗಲೇಬಾರದು. ಒಂದೆಡೆ ಭದ್ರಾ ಡ್ಯಾಂನಿಂದಲೂ ನೀರು ಬರುತ್ತದೆ. ತುಂಗಭದ್ರಾ ನದಿಯೂ ಹರಿಯುತ್ತದೆ. ಆದರೂ ಈ ಭಾಗದ ಅಡಿಕೆ, ಭತ್ತ ಬೆಳೆಗಾರರು ನೀರು ಸಿಗದೇ ಪರದಾಡುವಂತಾಗಿದೆ. ತನ್ನ ಹಕ್ಕಿಗಾಗಿ ಹೋರಾಡುವಂಥ ಸ್ಥಿತಿ ನಿರ್ಮಾಣ ಆಗಿದೆ. ಇದು ನಿಜಕ್ಕೂ ಬೇಸರದ ಸಂಗತಿ ಎಂದರು.

ಈ ಸಂದರ್ಭದಲ್ಲಿ ಮಲೇಬೆನ್ನೂರು ಗ್ರಾಮದ ಮುಖಂಡರಾದ ಸೈಯ್ಯದ್ ಗೌಸ್, ಸುಲೇಮಾನ್, ಸೈಯ್ಯದ್ ಮುಬಾರಕ್, ಸೈಫುಲ್ಲಾ, ಪ್ರಭು, ಜಮೀರ್, ಶ್ರೀನಿವಾಸ, ದಾನಪ್ಪ, ವಿನಯ್, ಪವನ್, ವಿಜಯ್ ಕುಮಾರ್, ರೇವಣಸಿದ್ಧ, ಗೋರಪುರ ಹನುಮಂತಪ್ಪ, ಮಂಜುನಾಥ ಮತ್ತಿತರರು ಹಾಜರಿದ್ದರು.

## ಭಾನುವಳ್ಳಿ : ಕಾಂಗ್ರೆಸ್ ಅಭ್ಯರ್ಥಿ ಪರ ಮಾಜಿ ಸಚಿವ ರೇವಣ್ಣ ಮತಯಾಚನೆ



ಮಲೇಬೆನ್ನೂರು, ಮೇ 5- ಕಾಂಗ್ರೆಸ್ ಸರ್ಕಾರದ ಪಂಚ ಗ್ಯಾರಂಟಿ ಗಳಿಂದ ಹೆಣ್ಣು ಮಕ್ಕಳು ಹಾದಿ ತಪ್ಪುತಿದ್ದಾರೆ ಎಂದವರ ಕುಟುಂಬವೇ ಹಾದಿ ತಪ್ಪಿರುವ ಘಟನೆ ನಿಮ್ಮ ಮುಂದಿದೆ ಎಂದು ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಹೆಚ್.ಎಂ.ರೇವಣ್ಣ ಹೇಳಿದರು.

ಅವರು ಭಾನುವಾರ ಭಾನುವಳ್ಳಿ ಗ್ರಾಮದಲ್ಲಿ ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಪರ ಮತಯಾಚನೆ ಮಾಡಿ ಮಾತನಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಜನ ಸಾಮಾನ್ಯರ ಪರ ಅನೇಕ ಜನ ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು , ಈ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಸೇರಿದಂತೆ, ರಾಜ್ಯದ 20 ಕ್ಕೂ ಹೆಚ್ಚು ಸ್ಥಾನಗಳಲ್ಲಿ ಗೆಲುವು ಖಚಿತವಾಗಿದೆ.

ಡಾ. ಪ್ರಭಾ ಅವರ ಗೆಲುವಿನಲ್ಲಿ ಅಹಿಂದ ವರ್ಗ ಪ್ರಮುಖ ಪಾತ್ರ ವಹಿಸಲಿದ್ದು, ಬಿಜೆಪಿಯ ಇನ್ನೊಂದು ಮುಖವಾಡ ಪಕ್ಷೇತರ ಅಭ್ಯರ್ಥಿ ವಿನಯ್ ಕುಮಾರ್ ಬಿಜೆಪಿಯ ಅಣತಿಯಂತೆ ಕೆಲಸ ಮಾಡುತ್ತಿದ್ದಾರೆ. ಅವರನ್ನು ತಿರಸ್ಕರಿಸಿ ಎಂದು ಹೆಚ್.ಎಂ.ರೇವಣ್ಣ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಹರಿಹರ ತಾಲ್ಲೂಕು ಉಸ್ತುವಾರಿ ಪಿ.ಆರ್.ರಮೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ.ಅಬೀದ್ ಅಲಿ, ಮುಖಂಡರಾದ ಹೆಚ್.ಕೆ. ಕನ್ನಪ್ಪ, ಚಂದ್ರ ಪ್ಪ, ಜೆ.ಮನ್ಸೂರ್ ಅಲಿ, ಜೆ.ಗುತ್ಯಪ್ಪ, ಹೇಮಂತರಾಜ್, ಕರಿಯಪ್ಪ, ಕೆಂಚಪ್ಪ, ಕೆ.ಎ.ಕೆಂಚಪ್ಪ, ಚಂದ್ರಪ್ಪ, ಹಾಲಪ್ಪ ಪೂಜಾರ್, ಮುಕ್ತಿಯಾರ್ ಮೆಹಬುಬ್ ಸಾಬ್ ಸೇರಿದಂತೆ ಇನ್ನು ಅನೇಕರು ಹಾಜರಿದ್ದರು.

## ಜಿ.ಬೇವಿನಹಳ್ಳಿಯಲ್ಲಿ ಡಾ. ಪ್ರಭಾ ಪರ ಪುತ್ರ ಸಮರ್ಥ್ ಮತಯಾಚನೆ



ಮಲೇಬೆನ್ನೂರು, ಮೇ 5- ಜಿ.ಬೇವಿನಹಳ್ಳಿ ಗ್ರಾಮದಲ್ಲಿ ಭಾನುವಾರ ಸಮರ್ಥ್ ಮಲ್ಲಿಕಾರ್ಜುನ್ ಅವರು, ತಮ್ಮ ತಾಯಿ ಡಾ. ಪ್ರಭಾ ಮಲ್ಲಿಕಾರ್ಜುನ್ ಪರ ಬರಿಗಾಲಿನಿಂದ ಸಂಚರಿಸಿ, ಮತಯಾಚನೆ ಮಾಡುವ ಮೂಲಕ ಗ್ರಾಮಸ್ಥರ ಗಮನ ಸೆಳೆದರು. ನನ್ನ ತಾಯಿಯ ಗೆಲುವಿಗಾಗಿ ಪ್ರಾರ್ಥಿಸಿ, ಬರಿಗಾಲಿನಿಂದಲೇ ಎಲ್ಲಾ ಕಡೆ ಓಡಾಡಿ ಮತಯಾಚನೆ ಮಾಡುತ್ತಿದ್ದೇನೆ ಎಂದು ಸಮರ್ಥ್ ಗ್ರಾಮಸ್ಥರಿಗೆ ತಿಳಿಸಿದರು. ಗ್ರಾಮದ ಮುಖಂಡ ಹೆಚ್.ಬಿ.ಶ್ರೀಕಾಂತ್, ಬಿ.ಕೆ.ಗದಿಗೆಪ್ಪ, ಎಂ.ಚಂದ್ರಪ್ಪ, ಹೆಚ್.ಬಂಗಾರಪ್ಪ ಸೇರಿದಂತೆ ಇನ್ನು ಅನೇಕರು ಈ ವೇಳೆ ಇದ್ದರು.


**ಜೈ ಶ್ರೀಮನ್ನಾರಾಯಣ**
ವಿಕಾಸ ತರಂಗಿಣಿ, ದಾವಣಗೆರೆ
29ನೇ ವರ್ಷದ
**ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ**
ಮಾರ್ಚ್ 23 ರಿಂದ 2 ತಿಂಗಳ ಕಾಲ.
ಇಂದಿನ ಮಜ್ಜಿಗೆ ಪ್ರಾಯೋಜಕರು :-
ದಿ.ಶ್ರೀಮತಿ ಐಗೂರು ಚನ್ನಬಸಮ್ಮ ಮತ್ತು ದಿ.ಶ್ರೀ ಐಗೂರು ದೊಡ್ಡಬಸಪ್ಪ ಇವರ ಜ್ಞಾಪಕಾರ್ಥವಾಗಿ ಮಕ್ಕಳು: ಐಗೂರು ಚಂದ್ರಶೇಖರ್, ಐಗೂರು ಪ್ರಭಣ್ಣ ಕುಟುಂಬ ವರ್ಗದವರ ಸೇವಾರ್ಥ
ಸ್ಥಳ : ಮಹಾನಗರ ಪಾಲಿಕೆ ಆವರಣ

**ಕರ್ನಾಟಕ ಮುಕ್ತ ವಿದ್ಯಾಲಯ (KOS)**
ಕೇಂದ್ರ ಹಾಗೂ ರಾಜ್ಯ ಸರ್ಕಾರದ ಶಾಶ್ವತ ಮಾನ್ಯತೆ ಪಡೆದಿದೆ
ಶಿಕ್ಷಣ ವಂಚಿತರಾದವರಿಗೆ ನೇರ ಪರೀಕ್ಷೆ
SSLC/PUC/ಪದವಿ/ಸ್ನಾತಕೋತ್ತರ ಪದವಿ & ಡಿಪ್ಲೋಮಾ ಕೋರ್ಸ್‌ಗಳಿಗೆ ಪ್ರವೇಶ ಪ್ರಾರಂಭ
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87490 24789, 87620 58369, 82173 02649

**ಸೈಟುಗಳ ಮಾರಾಟಕ್ಕಿವೆ**
ಬಾಲಾಜಿ ಲೇಔಟ್ ಪೂರ್ವ 30x50, ಪಶ್ಚಿಮ ದಕ್ಷಿಣ 30x50 (ಅಕ್ಕ-ಪಕ್ಕ) ಮಹಾಲಕ್ಷ್ಮಿ ಲೇಔಟ್, ಪೂರ್ವ 40x50 (ಕಾವೇರಿ ಅಪಾರ್ಟ್‌ಮೆಂಟ್ ಹತ್ತಿರ) ಪಶ್ಚಿಮ 30x50, ಎಸ್.ಎಸ್. ಲೇಔಟ್ ಉತ್ತರ 40x70, (MBA ಕಾಲೇಜ್ ಹತ್ತಿರ)
ಐಗೂರು ವಿಜಯಕುಮಾರ
99457 02495

**ಬಾಡಿಗೆಗೆ ಇದೆ**
ಐಗೂರು ಗ್ರಾಮದ ತುಂಬಿಗೆರೆ ರಸ್ತೆಯಲ್ಲಿ ಇರುವ 2 ಎಕರೆ ಜಮೀನಿನಲ್ಲಿ 1 ಎಕರೆ ಜಮೀನು NA (ಕೈಗಾರಿಕ ವಲಯ) ಆಗಿದೆ. ಇದು ಬಾಡಿಗೆಗೆ ದೊರೆಯುತ್ತದೆ. ಮತ್ತು ಆ ಜಮೀನಿನಲ್ಲಿ ಸಿಮೆಂಟ್ ಬ್ರಿಕ್ಸ್ ಕಾರ್ಖಾನೆಯು ಬಾಡಿಗೆಗೆ ಇದೆ.
9036559096, 9242837951

**ಸೈಟುಗಳು ಮಾರಾಟಕ್ಕಿವೆ**
ವಿವೇಕಾನಂದ ಬಡಾವಣೆಯಲ್ಲಿ LIC ಕಾಲೋನಿಯಲ್ಲಿ, ಅಥಣಿ ಕಾಲೇಜ್ ಹತ್ತಿರ 30x42 North, 40x50 South, 25x40 West, 30x50 Corner, 30x50 North,
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮಳಿಗೆ ಬಾಡಿಗೆಗೆ ಇದೆ**
ತರಳಬಾಳು ಬಡಾವಣೆ, ಮಾಗನೂರು ಬಸಪ್ಪ ಶಾಲೆಯ ಎದುರು, 15x11.5 ಅಡಿ ಅಳತೆಯ ಮಳಿಗೆ ಬಾಡಿಗೆಗೆ ಇದೆ.
99016 32462

**ಬೇಕಾಗಿದ್ದಾರೆ**
1. ಪ್ರಯೋಗಾಲಯವನ್ನು ನಿರ್ವಹಿಸಲು ವಿಶ್ಲೇಷಣಾತ್ಮಕ ರಸಾಯನಶಾಸ್ತ್ರಜ್ಞ (HPLC, GC, AAS, ಇತ್ಯಾದಿ)
2. ಅನುಭವಿ ಚಾಲಕ ಮತ್ತು ಸಹಾಯಕ
3. ಹೆಂಗಸರು ಪ್ಯಾಕಿಂಗ್ ಮಾಡಲು ಹೆಸರಾಂತ ಕಂಪನಿಗೆ ಅಗತ್ಯವಿದೆ.
ಕೈಗಾರಿಕಾ ಪ್ರದೇಶ, ಲೋಕಿಕೆರೆ ರಸ್ತೆ, ದಾವಣಗೆರೆ.
ವಾಟ್ಸಾಪ್ ರೆಸ್ಯೂಮ್ ಕಳುಹಿಸಿ. ಈ ನಂಬರ್‌ಗೆ ಕರೆ ಮಾಡಿ.
99863 66358

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸ ಮಾಡಲು 20-35 ವರ್ಷದೊಳಗಿನ ಹುಡುಗರು ಬೇಕಾಗಿದ್ದಾರೆ.
ಆಸಕ್ತರು ಸಂಪರ್ಕಿಸಿ :
ಪ್ರಕಾಶ್ ಟಿ.ವಿ. ಸೆಂಟರ್
ಶ್ರೀ ಮುರುಘರಾಜೇಂದ್ರ ಕಾಂಪ್ಲೆಕ್ಸ್, ಕುರುಬರ ಹಾಸ್ಟೆಲ್ ಎದುರು, ಹದಡಿ ರಸ್ತೆ, ದಾವಣಗೆರೆ.

**ಸೈಟುಗಳು ಮಾರಾಟಕ್ಕಿವೆ**
ಪಿ.ಬಿ. ರೋಡಿಗೆ ಹತ್ತಿರ ಶನೇಶ್ವರ ದೇವಸ್ಥಾನ ಹಿಂಭಾಗದಲ್ಲಿ 30x40 East, 30x40 ಅಕ್ಕ-ಪಕ್ಕ, 60x40 East, Rate - 2600/-
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ವಾಣಿಜ್ಯ ಮಳಿಗೆ ಬಾಡಿಗೆಗೆ ಇದೆ**
ಪಿ.ಜೆ. ಬಡಾವಣೆ, ಅಕ್ಕಮಹಾದೇವಿ ರಸ್ತೆಯಲ್ಲಿನ ಜೈನ್ ವಿದ್ಯಾಲಯದ ಎದುರು ಇರುವ ಯೂನಿಟಿ ಹೆಲ್ತ್ ಸೆಂಟರ್ ಕಾಂಪ್ಲೆಕ್ಸ್‌ನಲ್ಲಿ ವಾಣಿಜ್ಯ ಮಳಿಗೆ ಬಾಡಿಗೆಗೆ ಇದೆ. ಸಂಪರ್ಕಿಸಿ :
98862-42526

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಮಹಿಳಾ ನರ್ಸ್ ಬೇಕಾಗಿದ್ದಾರೆ. ಸಮಯ : ಬೆಳಿಗ್ಗೆ 10ರಿಂದ ಸಂಜೆ 6 ಗಂಟೆಯವರೆಗೆ.
ಸಂಪರ್ಕಿಸಿ
98808 51871

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, ಹೋಲ್ ಸೇಲ್ ಫಾರ್ಮಾದಲ್ಲಿ ಬಿಲ್ಲಿಂಗ್ ಮಾಡಿರುವ ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ. ಭೇಟಿಯ ಸಮಯ ಸಂಜೆ 6:30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿಜೆ ಬಡಾವಣೆ ದಾವಣಗೆರೆ.

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಸೊಳ್ಳೆ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಕುಷನ್ ವರ್ಕ್ಸ್, ಸೋಫಾ ಸೆಟ್, Duroflex Bed, ಕಿಟಕಿಗೆ ಅಲ್ಯುಮೀನಿಯಂ ಡೋರ್, ಸೊಳ್ಳೆ ಮೆಶ್ ಹಾಕಲಾಗುವುದು.
Swapna Cushion Work
Behind Vittal Temple, Maharaj Pet, Davanagere
98445 81966

**ನಾಯಿ ಕಳೆದಿದೆ**
ನಮ್ಮ ನಾಯಿ ಹದಡಿ ರೋಡ್‌ನಲ್ಲಿ ಬೀಗಲ್ ಸೋಮೇಶ್ವರ ಹಾಸ್ಪಿಟಲ್ ಹತ್ತಿರ, ಜಾತಿಯ ನಾಯಿ ಕಳೆದಿದೆ, ಸಿಕ್ಕಿದರೆ ಕೊಡಿ, ನಮ್ಮ ಮನೆಯ ಸಣ್ಣ ಹುಡುಗ ಬಹಳ ಅಳುತ್ತಿದ್ದಾನೆ ದಯ ಮಾಡಿ ಕೊಡಿ.
98864 83971, 99163 69648

**ಮನೆಗಳು ಮಾರಾಟಕ್ಕಿವೆ**
SS 'A' Block ದಕ್ಷಿಣ 30x40 ಡುಪ್ಲೆಕ್ಸ್, ದಕ್ಷಿಣ 30x50 ಡುಪ್ಲೆಕ್ಸ್ (DC ಮನೆ ಹತ್ತಿರ) ವಿದ್ಯಾನಗರ ದಕ್ಷಿಣ 50x85 (Coffee Day Circle)
ಐಗೂರು ವಿಜಯಕುಮಾರ
99457 02495

**WANTED**
Required Male Office Assistant
ANDANUR CHITS (R)
Ram & Co. Circle, Davanagere.

Start your OWN BUSINESS in just 25000/- rupees. Make a healthy and profitable life yours. CONTACT:
83109 06663

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಸೇಲ್ಸ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ**
ಸಂಪರ್ಕಿಸಿ :
ಪ್ರಕಾಶ್ ಟಿ.ವಿ. ಸೆಂಟರ್
ಶ್ರೀ ಮುರುಘರಾಜೇಂದ್ರ ಕಾಂಪ್ಲೆಕ್ಸ್, ಕುರುಬರ ಹಾಸ್ಟೆಲ್ ಎದುರು, ಹದಡಿ ರಸ್ತೆ, ದಾವಣಗೆರೆ.

**WANTED**
House Keeping Work
Timings 9 to 6.30 pm & 12 to 9pm
Hairpoint Unisex Salon
MCC `B' Block, Near Water Tank Park Dvg.
97386 64400, 91483 19342

**ಶಿಕ್ಷಕ/ ಶಿಕ್ಷಕಿಯರು ಬೇಕಾಗಿದ್ದಾರೆ**
ನಿಸರ್ಗ ಆಂಗ್ಲ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢಶಾಲೆ, ಎಸ್‌ಓಜಿ ಬಡಾವಣೆ, ದಾವಣಗೆರೆ.
1) NTC/RBST/ PUC - 01
2) DEd/ BA/BCom/BSc - 02
3) Computer Tr - 01
4) BSc BEd(Maths) - 01
87927 02690, 99862 26454

**ಬೇಕಾಗಿದ್ದಾರೆ**
SBI Life Insurance ಗೆ Advisors ಬೇಕಾಗಿದ್ದಾರೆ. 30 ವರ್ಷ ಮೇಲ್ಪಟ್ಟ SSLC ಪಾಸ್ ಮಾಡಿರುವವರು Part time ಕೆಲಸ ಮಾಡಿ ತಿಂಗಳಿಗೆ 30 ಸಾವಿರ ಸಂಪಾದಿಸಬಹುದು.
99009 19091

**ತಕ್ಷಣ ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ**
8000-14000 + ESI
Phone 86600 95900
97311 55583, 96861 63898

**TEACHERS WANTED**
B.Sc, B.Ed - 2. BA, B.Ed (English) - 2. Hindi, B.Ed - 1. D.Ed - 2.
Shree Taralabalu HPS English Medium School,
21 Ward, Basapura, Davanagere. Contact :
94488 03836, 95912 85527
81977 96810

**ಬೂಸಪ್ಪನಟ್ಟಿ ಗ್ರಾಮದಲ್ಲಿ ಜಮೀನು ಮಾರಾಟಕ್ಕಿದೆ**
S/R No. 118/2, 13 ಗುಂಟೆ ಪೂರ್ವಕ್ಕೆ ಸಿಮೆಂಟ್ ರೋಡ್, ನೀರು, ಕರೆಂಟ್ ಸೌಲಭ್ಯವಿದೆ.
97405 92589

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**WANTED TEACHERS**
M.Sc (Mathematics)
B.Sc B.Ed (Mathematics) - 2,
BA B.Ed (Hindi) - 1
ACM SHOOL
Devaraj Urs Layout C Block, 2nd Cross, Davanagere.
M : 89703 21855

**ರೂಂ ಬಾಡಿಗೆಗೆ ಇದೆ**
ನಿಜಲಿಂಗಪ್ಪ ಬಡಾವಣೆಯ ಮ. ನಂ. 146 ರ ಎರಡನೇ ಮಹಡಿಯಲ್ಲಿರುವ ರೂಂ (ಪ್ರತ್ಯೇಕ ಕಿಚನ್ ಮತ್ತು ಟಾಯ್ಲೆಟ್ ಹೊಂದಿದೆ) ಬಾಡಿಗೆಗೆ ಲಭ್ಯವಿರುತ್ತದೆ. ಆಸಕ್ತರು ಸಂಪರ್ಕಿಸಿ :
70195 85753

**ಮನೆ ಮಾರಾಟಕ್ಕಿದೆ**
3 ಮಳಿಗೆ, 2 BHK, ಗ್ರೌಂಡ್, 1ನೇ ಮಹಡಿ, 2 BHK, 1 BHK 12 ಚದರಡಿವುಳ್ಳ, ಬೋರ್‌ವೆಲ್ ಇರುವ ಮನೆ ಮಾರಾಟಕ್ಕಿದೆ. ಆಸಕ್ತರು ಕರೆ ಮಾಡಬಹುದು
70192 17786, 70191 08442

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಬೇಕಾಗಿದ್ದಾರೆ**
ಶುಭಂ ಫುಡ್ಸ್ ರೈಸ್ ಮಿಲ್, ಬಾಡ
ರೈಸ್‌ಮಿಲ್‌ನಲ್ಲಿ ಅಕೌಂಟೆಂಟ್ ಕೆಲಸ ಮಾಡಲು ಬಿ.ಕಾಂ. ಪದವೀಧರರು ಬೇಕಾಗಿದ್ದಾರೆ. ಸಂಪೂರ್ಣ ಕಂಪ್ಯೂಟರ್ ಮಾಹಿತಿ ಮತ್ತು ಟ್ಯಾಲಿ ಅನುಭವವಿರಬೇಕು, ಇ.ಎಸ್.ಐ., ಪಿಎಫ್, ಊಟ, ವಸತಿ ಸೌಲಭ್ಯವಿರುತ್ತದೆ. ಆಕರ್ಷಕ ವೇತನ ಇರುತ್ತದೆ. ಆಸಕ್ತರು ದಾಖಲಾತಿಗಳೊಂದಿಗೆ ಸಂದರ್ಶಿಸುವ ದಿ.: 8 ಮತ್ತು 9ನೇ ಮೇ 2024, ಸಮಯ : ಬೆ. 10 ರಿಂದ ಮ. 3ರವರೆಗೆ.
95919 72869, 99722 22663

**CHANGE OF NAME**
I, ARPEETHA SAGAR BHUTI previously called as ARPEETHA K.A. (ARPEETHA KATHALAGERE ANANDAPPA), R/o Behind Vani Rice Mill, # 3682/A85, 1st Main, 8th Cross, Taralabalu Badavane, Davangere-577005 have changed my name as ARPEETHA SAGAR BHUTI vide affidavit dated 02.05.2024 sworn before Notary public K. Eshwar, Davangere. Henceforth all my transactions & dealings will be in my new name ARPEETHA SAGAR BHUTI.

**ಹರಪನಹಳ್ಳಿಯಲ್ಲಿ ಶಿಕ್ಷಕಿಯರು ಬೇಕಾಗಿದ್ದಾರೆ**
ಸಂಕಲ್ಪ ವಿಕಲಚೇತನ ಮಕ್ಕಳ ಕೇಂದ್ರದಲ್ಲಿ ಕಾರ್ಯನಿರ್ವಹಿಸಲು
1) ಮುಖ್ಯಸ್ಥರು-1 ಎಂ.ಎ., ಎಂ.ಎಡ್
2) ಮುಖ್ಯ ಶಿಕ್ಷಕಿ-2 ಬಿ.ಎಡ್.,
3) ಸಹ ಶಿಕ್ಷಕಿ-2 ಬಿ.ಎಡ್., ಡಿ.ಎಡ್.
ಅರ್ಜಿಯನ್ನು sankalpadvg@gmail ಗೆ ದಿನಾಂಕ : 15.5.2024ರ ಒಳಗೆ ಸಲ್ಲಿಸಬಹುದು. ಸ್ಥಳೀಯರಿಗೆ ಮಾತ್ರ ಆದ್ಯತೆ.
63614 27927

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

ನೇರ ಪರೀಕ್ಷೆ ಕಟ್ಟಲು/ರೆಗ್ಯುಲರ್ ಪ್ರವೇಶಕ್ಕಾಗಿ
**SSLC ನೇರ ಪರೀಕ್ಷೆ**
IInd PUC/Senior Secondary, Arts/Commerce/Science B.Sc.-Agriculture, B.Tech All branches, D.Pharma, B.Ed., PhD regular B.A., B.com., B.Sc., M.A., M.Com., MBA, MLIB, Correspondence.
ಆಸಕ್ತರು ಫೋಟೋ-8, ಆಧಾರ್ ಕಾರ್ಡ್ ಹಾಗೂ ಮಾರ್ಕ್ಸ್ ಕಾರ್ಡ್‌ನೊಂದಿಗೆ ಸಂಪರ್ಕಿಸಿರಿ.
SS Global Institute for Higher Education
1982-1ನೇ ಮಹಡಿ, ಅನ್ವಯ ಆಯುರ್ವೇದಿಕ್ ಆಸ್ಪತ್ರೆ, ಶ್ರೀ ಸಾಯಿಬಾಬಾ ದೇವಸ್ಥಾನ ಹತ್ತಿರ, ಎಂಸಿಸಿ 'ಎ' ಬ್ಲಾಕ್, ದಾವಣಗೆರೆ-04.
72593 59861/99863 45266
ವಿ. ಸೂ: ಫೀಸನ್ನು ಕಂತಿನಲ್ಲಿ ಪಾವತಿಸಬಹುದು

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

# ಬಿಜೆಪಿ ಪಕ್ಷಕ್ಕೆ ವಿವಿಧ ಪಕ್ಷಗಳ ಕಾರ್ಯಕರ್ತರ ಬೆಂಬಲ



ದಾವಣಗೆರೆ, ಮೇ 5 - ಚಿನ್ನಸಮುದ್ರ ಲಂಬಾಣಿ ತಾಂಡಾದ ಕಾಂಗ್ರೆಸ್, ಆಮ್ ಆದ್ಮಿ ಪಕ್ಷ ಹಾಗೂ ರೈತ ಸಂಘದ ಕಾರ್ಯಕರ್ತರು ತಮ್ಮ ಪಕ್ಷ ತೊರೆದು ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಅವರಿಗೆ ಬೆಂಬಲ ನೀಡಲು ಬಿಜೆಪಿ ಸೇರಿದರು.

ಕಾರ್ಯಕರ್ತರಾದ ಸಿ.ಆರ್. ಅರುಣ್ ಕುಮಾರ್, ಚಂದ್ರನಾಯ್ಕ್, ಧನ್ಯನಾಯ್ಕ್, ಭೀಮಾನಾಯ್ಕ್, ರವಿನಾಯ್ಕ್, ತಿಪ್ಪೇಸ್ವಾಮಿ, ಪ್ರಭುನಾಯ್ಕ್, ಕುಬೇಂದ್ರ, ರಾಜಣ್ಣ, ವಾಲ್ಯನಾಯ್ಕ್, ನಾಗನಾಯ್ಕ್, ಪರಮೇಶ್ ನಾಯ್ಕ್, ಈಡಿಗರ ರುದ್ರಣ್ಣ, ರಾಜನಾಯ್ಕ್ , ಸುರೇಶ್ ನಾಯ್ಕ್, ಈಡಿಗರ ರಂ ಗಣ್ಣ, ಸೇವ್ಯಾನಾಯ್ಕ್, ರವಿನಾಯ್ಕ್, ಈಡಿಗರ ಸುನೀಲ್, ಶಂಕರ್ ನಾಯ್ಕ್, ಸುನೀಲ್, ತಿಪ್ಪೇಶನಾಯ್ಕ್, ತಿಮ್ಮನಾಯ್ಕ್, ಮುರುಳಿ, ಹರ್ಷಿತಾ, ಮುರುಳಿ, ತಿಪ್ಪೇಸ್ವಾಮಿ, ಜಯನಾಯ್ಕ್, ಸೇರಿದಂತೆ ಇತರರು ತಮ್ಮ ಪಕ್ಷ ತೊರೆದರು.

ಈ ವೇಳೆ ಸಂಸದ ಜಿ.ಎಂ. ಸಿದ್ದೇಶ್ವರ, ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಎಸ್ಸಿ ಮೋರ್ಚಾ ಅಧ್ಯಕ್ಷ ಹನುಮಂತನಾಯ್ಕ್, ಉಪಾಧ್ಯಕ್ಷ ಮಂಜಾನಾಯ್ಕ್ , ಮುಖಂಡ ಮಹೇಶ್ ನಾಯ್ಕ್ ಮತ್ತಿತರರಿದ್ದರು.

## ಕಾಂಗ್ರೆಸ್‌ಗೆ ಅಹಿಂದ ಪ್ರಜಾ ಶಕ್ತಿ ಸಂಘಟನೆ ಬೆಂಬಲ



ದಾವಣಗೆರೆ, ಮೇ 5- ಲೋಕಸಭಾ ಚುನಾವಣೆಯಲ್ಲಿ 'ಅಹಿಂದ ಪ್ರಜಾ ಶಕ್ತಿ ಸಂಘಟನೆ' ಕಾಂಗ್ರೆಸ್ ಪಕ್ಷಕ್ಕೆ ಸಂಪೂರ್ಣ ಬೆಂಬಲ ನೀಡಲಿದೆ ಎಂದು ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಪ್ರವೀಣ್ ಕುಮಾರ್ ಯಾಧವ್ ತಿಳಿಸಿದರು.

ಸ ಮಿತಿಯ ಮುಖಂಡರು ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ಜೊತೆ ಸಭೆ ನಡೆಸಿ, ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಬೆಂಬಲ ಸೂಚಿಸುವುದಾಗಿ ಹೇಳಿದರು.

ಮಹಾಂತೇಶ್ ಕುಂದವಾಡ ಮಾತನಾಡಿ, ತುಳಿತಕ್ಕೆ ಒಳಗಾದ ಮರಾಠ, ಕುರುಬ, ಯಾದವ, ಈಡಿಗ, ಕುಂಬಾರ, ವಿಶ್ವಕರ್ಮ ಸಮಾಜ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ನೀಡುತ್ತವೆ ಎಂದು ಹೇಳಿದರು.

ದಲಿತರು, ಹಿಂದುಳಿದವರು, ಬಡವರು ಮತ್ತು ಶೋಷಿತರ ಪರವಾಗಿ ಕಾಂಗ್ರೆಸ್ ಸದಾ ಇರುತ್ತದೆ ಎಂದು ಎಸ್.ಎಸ್ ಮಲ್ಲಿಕಾರ್ಜುನ್ ತಿಳಿಸಿದರು.

ರಾಜ್ಯಾಧ್ಯಕ್ಷ ಜಿ.ಎಂ. ಗೋವಿಂದ ರಾಜ್, ಆರ್. ಹನುಮಂತಪ್ಪ, ಧನ್ವಂತರಿ ಮತ್ತು ಇತರರು ಇದ್ದರು.

## ಡಾ. ಶಿವರಾಜ್ ಕುಮಾರ್ ಅಭಿಮಾನಿಗಳಿಂದ ಪ್ರಭಾಗೆ ಬೆಂಬಲ

ದಾವಣಗೆರೆ, ಮೇ 5 - ಅಖಿಲ ಕರ್ನಾಟಕ ಡಾ. ಶಿವರಾಜ್ ಕುಮಾರ್ ಅಭಿಮಾನಿ ಸಂಘದ ಜಿಲ್ಲಾ ಘಟಕವು ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಬೆಂಬಲ ನೀಡಲಿದೆ ಎಂದು ಜಿಲ್ಲಾಧ್ಯಕ್ಷ ಯೋಗೇಶ್ ತಿಳಿಸಿದರು. ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಖಿಲ ಕರ್ನಾಟಕ ಡಾ. ರಾಜ್ ಕುಮಾರ್ ಅಭಿಮಾನಿ ಸಂಘ ಹಾಗೂ ರಾಜರತ್ನ ಪುನೀತ್ ರಾಜಕುಮಾರ್ ಅಭಿಮಾನಿಗಳ ಸಂಘವು ಕಾಂಗ್ರೆಸ್ ಅಭ್ಯರ್ಥಿಯನ್ನು ಸಂಪೂರ್ಣ ಬೆಂಬಲಿಸುವ ಮೂಲಕ ಮೇ 7ರಂದು ಮತದಾನ ಮಾಡುವಂತೆ ಮನವಿ ಮಾಡಿದರು. ಈ ವೇಳೆ ಸಂಘದ ಗೌರವ ಅಧ್ಯಕ್ಷ ಸುರೇಶ್ ಶಾಮನೂರು, ರಾಜಣ್ಣ,ನಿಂಗರಾಜ್,ದಾದಾಪೀರ್‌ಸುದ್ದಿಗೋಷ್ಠಿಯಲ್ಲಿದ್ದರು.

# ಸಾಸ್ವೇಹಳ್ಳಿ ಏತ ನೀರಾವರಿ ಯೋಜನೆ ಜಾರಿಗೆ ತಂದದ್ದು ಕಾಂಗ್ರೆಸ್

## ಸಂಸದ ಸಿದ್ದೇಶ್ವರ ಸುಳ್ಳಿನ ಸರದಾರ : ಶಾಸಕ ಶಿವಗಂಗಾ ತಿರುಗೇಟು



ಚನ್ನಗಿರಿ,ಮೇ 5- ಸಾಸ್ವೇಹಳ್ಳಿ ಏತ ನೀರಾವರಿ ಯೋಜನೆ ಜಾರಿಗೆ ತಂದಿದ್ದು ನಾನು ಮತ್ತು ಮಾಡಾಳು ವಿರೂಪಾಕ್ಷಪ್ಪ ಎಂದು ಸಂತೇಬೆನ್ನೂರಿನಲ್ಲಿ ಹೇಳಿಕೆ ನೀಡಿರುವ ಸಂಸದ ಜಿ.ಎಂ ಸಿದ್ದೇಶ್ವರ ಅವರು ಸುಳ್ಳಿನ ಸರದಾರ. ಇಂತಹ ಸುಳ್ಳುಗಳನ್ನು ಹೇಳಿಯೇ ನಾಲ್ಕು ಬಾರಿ ಗೆದ್ದಿರುವುದು ಎಂದು ಶಾಸಕ ಬಸವರಾಜು ವಿ. ಶಿವಗಂಗಾ ಖಾರವಾಗಿ ತಿರುಗೇಟು ನೀಡಿದ್ದಾರೆ.

ಸಾಸ್ವೆಹಳ್ಳಿ ಏತ ನೀರಾವರಿ ಯೋಜನೆ ಜಾರಿ ಬಗ್ಗೆ ಬಹಿರಂಗವಾಗಿ ಚರ್ಚೆಗೆ ಬರಲಿ, ದಾಖಲೆ ಸಹಿತ ನಾನು ವಿವರಿಸುತ್ತೇನೆ ಎಂದು ಸಿದ್ದೇಶ್ವರ ಅವರಿಗೆ ಸವಾಲು ಕೂಡಾ ಹಾಕಿದ್ದಾರೆ.

2015-16 ನೇ ಸಾಲಿನಲ್ಲಿ ಆಗ ಅಧಿಕಾರದಲ್ಲಿದ್ದ ಕಾಂಗ್ರೆಸ್ ಪಕ್ಷ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಯವ್ಯಯ ಭಾಷಣದಲ್ಲಿ ಸಂತೇಬೆನ್ನೂರು ಮತ್ತು ಕಸಬಾ ಹೋಬಳಿಗಳಲ್ಲಿ 2 ಹಂತದಲ್ಲಿ ಏತ ನೀರಾವರಿ ಯೋಜನೆ ಕೈಗೊಳ್ಳುವ ಬಗ್ಗೆ ಘೋಷಣೆ ಮಾಡಿದ್ದರು. ಅದರಂತೆ ನೀರಾವರಿ ಇಲಾಖೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಪ್ರಸ್ತಾವನೆ ಸಲ್ಲಿಸಿದೆ. ವರದಿ ಅನುಸಾರ ದಾವಣಗೆರೆ, ಚಿತ್ರದುರ್ಗ ಮತ್ತು ಶಿವಮೊಗ್ಗ ಜಿಲ್ಲೆಗಳ (ಚನ್ನಗಿರಿ ಕಸಬಾ ಹೋಬಳಿ 46 ಕೆರೆಗಳು) ಒಟ್ಟು 121 ಕೆರೆಗಳಿಗೆ ನೀರೊದಗಿಸುವುದು ಯೋಜನೆ ಉದ್ದೇಶವಾಗಿತ್ತು.

23.06.2016ರಂದು ನೀರಾವರಿ ಇಲಾಖೆ ಯಿಂದ ಈ ಯೋಜನಾ ವರದಿಯನ್ನು 15ನೇ ಅಂದಾಜು ಪರಿಶೀಲನಾ ಸಮಿತಿ ಸಭೆಯಲ್ಲಿ ಮಂಡಿಸ ಲಾಗಿತ್ತು ಎಂದು ಶಿವಗಂಗಾ ಮಾಹಿತಿ ನೀಡಿದ್ದಾರೆ.

ನಂತರ 19.08.2016 ರಲ್ಲಿ ರೂ. 415.68 ಕೋಟಿಗಳ ಯೋಜನೆ ಅನು ಮೋದನೆಗೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ. ಅಂದು ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರ್ಕಾರ ದಿನಾಂಕ 11.01.2017 ರಂದು ಸಾಸ್ವೇಹಳ್ಳಿ ಏತ ನೀರಾವರಿ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡಿತು. ಈ ಯೋಜನೆ ಜಾರಿಗೆ ಬರಲು ಮಾಜಿ ಶಾಸಕ ವಡ್ನಾಳ್ ರಾಜಣ್ಣ ಸೇರಿದಂತೆ ಕಾಂಗ್ರೆಸ್ ಮುಖಂಡರ ಶ್ರಮ, ಹೋರಾಟ ಕೂಡ ಇದೆ ಎಂದು ಅವರು ಸರ್ಕಾರಿ ದಾಖಲೆ ಸಮೇತ ವಿವರಿಸಿದ್ದಾರೆ.

ಬಿಜೆಪಿ ಪಕ್ಷದವರು ಚುನಾವಣೆ ವೇಳೆ ಸುಳ್ಳುಗಳನ್ನು ಸೃಷ್ಟಿ ಮಾಡುತ್ತಾರೆ ಎಂಬುದಕ್ಕೆ ಸಂಸದರು ಹೇಳಿದ ಸುಳ್ಳೇ ಸಾಕ್ಷಿ. ಬಿಜೆಪಿ ಎಂದರೆ ಸುಳ್ಳು ಎಂದೇ ಪ್ರಖ್ಯಾತಿ, ಇಂಥ ಸುಳ್ಳುಗಳನ್ನು ಜನರು ನಂಬುವುದಿಲ್ಲ, ಬಿಜೆಪಿಯವರು ಒಂದಾದರೂ ಸತ್ಯ ಹೇಳಿ ಮತ ಕೇಳಲಿ, ಸುಳ್ಳು ಮಾಹಿತಿ ನೀಡಿ ಜನರನ್ನು ದಾರಿ ತಪ್ಪಿಸಬಾರದು. ಸೋಲಿನ ಭಯದಿಂದ ಇಂಥ ಸುಳ್ಳುಗಳನ್ನು ಅವರು ಹೇಳುತ್ತಿದ್ದಾರೆ ಎಂದು ಬಸವರಾಜು ಟೀಕಿಸಿದ್ದಾರೆ.

## ಮಾಯಕೊಂಡ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪ್ರಭಾ ಮಲ್ಲಿಕಾರ್ಜುನ್ ಪ್ರಚಾರ



ದಾವಣಗೆರೆ, ಮೇ 5 - ಮಾಯಕೊಂಡ ವಿಧಾನಸಭಾ ಕ್ಷೇತ್ರದ ಚಿನ್ನಸಮುದ್ರ ಗ್ರಾಮದಲ್ಲಿ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಅದ್ಧೂರಿಯಾಗಿ ಪ್ರಚಾರ ಮಾಡಿದರು.

ಇದೇ ವೇಳೆ ಮಾಯಕೊಂಡ ಶಾಸಕ ಬಸವಂತಪ್ಪ ಮಾತನಾಡಿ, ಮೋದಿಯ ವಿರುದ್ಧ ವಾಗ್ದಾಳಿ ನಡೆಸಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಿಂದುಳಿದವರು ಈ ದೇಶದಲ್ಲಿ ಶಾಂತಿಯುತವಾಗಿ ಬದುಕಬೇಕೆಂದರೆ ಕೋಮುವಾದಿ ಬಿಜೆಪಿ ಪಕ್ಷವನ್ನು ಹೊರಗಿಟ್ಟು, ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಿ ಪ್ರಭಾ ಮಲ್ಲಿಕಾರ್ಜುನ್ ಅವರನ್ನು ಹೆಚ್ಚು ಮತಗಳ ಅಂತರದಿಂದ ಗೆಲ್ಲಿಸುವಂತೆ ಕರೆ ನೀಡಿದರು.

ಈ ಸಂದರ್ಭದಲ್ಲಿ ನೇರ್ಲಿಗೆ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶಶಿಬಾಯಿ ಶೇಖರ್ ನಾಯ್ಕ್, ಚಿನ್ನಸಮುದ್ರ ಗ್ರಾಮದ ಕಾಂಗ್ರೆಸ್ ಬ್ಲಾಕ್ ಸಮಿತಿಯ ಅಧ್ಯಕ್ಷ ಸುರೇಶ ನಾಯ್ಕ್, ರೈತ ಹೋರಾಟಗಾರ ಶೇಖರ್ ನಾಯ್ಕ್, ಜಿಲ್ಲಾ ಕಾಂಗ್ರೆಸ್ ಸಮಿತಿಯ ಮುಖಂಡ ಮುದೇಗೌಡ್ರು ಗಿರೀಶ್ ಹಾಗೂ ಇತರರು ಭಾಗವಹಿಸಿದ್ದರು.

## ಕಾಂಗ್ರೆಸ್ ಗೆಲ್ಲಿಸಲು ಸೈಯದ್ ಖಾಲಿದ್ ಅಹ್ಮದ್ ಕರೆ



ದಾವಣಗೆರೆ, ಮೇ 5- ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಲೋಕಸಭಾ ಚುನಾವಣೆಯ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರ ಪರ ಅಖಿಲ ಭಾರತ ರಾಷ್ಟ್ರೀಯ ಯುವ ಕಾಂಗ್ರೆಸ್‌ನ ಕಾರ್ಯದರ್ಶಿ ಸೈಯದ್ ಖಾಲಿದ್ ಅಹ್ಮದ್ ನೇತೃತ್ವದಲ್ಲಿ ಬಿರುಸಿನ ಪ್ರಚಾರ ನಡೆಸಲಾಯಿತು. ಜಿಲ್ಲೆಯ ಜ್ವಲಂತ ಸಮಸ್ಯೆಗಳ ಬಗ್ಗೆ ಸಮರ್ಥವಾಗಿ ಮಂಡನೆ ಮಾಡುವ ಅರ್ಹತೆ ಇರುವ ಹಾಗೂ ಭಾಷಾ ನೈಪುಣ್ಯತೆ ಹೊಂದಿರುವ ಪ್ರಭಾ ಮಲ್ಲಿಕಾರ್ಜುನ್ ಅವರು ಗೆಲ್ಲಬೇಕು ಎಂದು ಸೈಯದ್ ಖಾಲಿದ್ ಅಹ್ಮದ್ ಕರೆ ನೀಡಿದರು.

## ಗಂಗಾಮತಸ್ಥ ಸಮಾಜದಿಂದ ಕಾಂಗ್ರೆಸ್‌ಗೆ ಬೆಂಬಲದ ಸಭೆಯಲ್ಲಿ ಸಚಿವ ಎಸ್ಸೆಸ್ಸೆಂ



ದಾವಣಗೆರೆ, ಮೇ 5 - ಬಡವರ ಅಭಿವೃದ್ಧಿಗಾಗಿ ಕಾಂಗ್ರೆಸ್ ಸರ್ಕಾರ ಬದ್ಧವಾಗಿದ್ದು, ಗ್ಯಾರಂಟಿ ಯೋಜನೆಗಳೇ ಸಾಕ್ಷಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್ ಮಲ್ಲಿಕಾರ್ಜುನ ತಿಳಿಸಿದರು.

ನಗರದ ಅಂಬಿಗರ ಚೌಡಯ್ಯ ಸಮುದಾಯ ಭವನ ದಲ್ಲಿ ಗಂಗಾಮತಸ್ಥ ಸಮಾಜದಿಂದ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ಸಭೆಯನ್ನುದ್ದೇಶಿ ಅವರು ಮಾತನಾಡಿದರು.

ಬಡವರಿಗಾಗಿ ಕಾಂಗ್ರೆಸ್ ಸರ್ಕಾರ ಉತ್ತಮ ಯೋಜನೆಗಳನ್ನು ಜಾರಿಗೆ ತಂದಿದೆ. ಮಹಿಳೆಯರಿಗೆ ತಿಂಗಳಿಗೆ ಎರಡು ಸಾವಿರ, ಐದು ಕೆಜಿ ಅಕ್ಕಿಯ ಜತೆಗೆ ಹಣ, ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ, 200 ಯುನಿಟ್ ಉಚಿತ ಕರೆಂಟ್ ನೀಡಿದೆ.

ಈ ವೇಳೆ ಗಂಗಾಮತಸ್ಥ ಸಮಾಜದ ಅಧ್ಯಕ್ಷ ಗೌಡ್ರು ಮಂಜಪ್ಪ, ಮಾಗಾನಹಳ್ಳಿ ಪರಶುರಾಮ್, ಅರಸಿಕೆರೆ ರಾಮಣ್ಣ, ಪುಟಗನಾಳು ಮಂಜಪ್ಪ, ಬಸವರಾಜ್, ಮಲ್ಲೇಶ್, ನಾಗರಾಜ್ ಇತರರು ಉಪಸ್ಥಿತರಿದ್ದರು.

## ಹರಿಹರದಲ್ಲಿ ಕಾಂಗ್ರೆಸ್‌ನಿಂದ ಬಿರುಸಿನ ಪ್ರಚಾರ



ಹರಿಹರ, ಮೇ 5- ಹರಿಹರ ತಾಲ್ಲೂಕಿನ ಗುತ್ತೂರು ಬಡಾವಣೆಯ ಸುತ್ತಮುತ್ತಲಿನಲ್ಲಿ ದಾವಣಗೆರೆ ಲೋಕಸಭಾ ಚುನಾವಣೆಯ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರ ಪರ ಬಿರುಸಿನ ಪ್ರಚಾರವನ್ನು ಮಾಜಿ ಶಾಸಕ ರಾಮಪ್ಪ, ಹೆಚ್.ಎಸ್. ನಾಗರಾಜ್, ನಂದಿಗಾವಿ ಶ್ರೀನಿವಾಸ್, ವಾಗೀಶ್ ಸ್ವಾಮಿ ಹಾಗೂ ಹಾಲನಗೌಡ ಅವರ ನೇತೃತ್ವದಲ್ಲಿ ನಡೆಸಲಾಯಿತು.

ಇದೇ ವೇಳೆ ಜೆಡಿಎಸ್ ಮುಖಂಡ ಗುತ್ತೂರಿನ ಶಂಕರಗೌಡ್ರು, ಹೆಚ್.ಎಸ್.ನಾಗರಾಜ್ ಸಮ್ಮುಖದಲ್ಲಿ ಕಾಂಗ್ರೆಸ್ ಸೇರಿದರು. ಪ್ರಚಾರ ಕಾರ್ಯಕ್ರಮದಲ್ಲಿ ಮುಖಂಡರಾದ ಲಿಂಗರಾಜ್ ಮುತ್ತಗಿ, ರಾಜಾನಾಯ್ಕ್ ನಾಗರಕಟ್ಟೆ, ಬಾತಿ ಶ್ರೀಧರ್, ಬಾಬಣ್ಣ, ರಾಜು ಬೆಳ್ಳೂಡಿ, ಇಟಗಿ ನಾಗಣ್ಣ, ನರೇಂದ್ರ ಹಾಗೂ ಪಕ್ಷದ ಕಾರ್ಯಕರ್ತರುಗಳು ಇದ್ದರು.



## ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಅವರಿಗೆ ಕರ್ನಾಟಕ ರೈತರ ಸೇನೆ ಬೆಂಬಲ

ದಾವಣಗೆರೆ, ಮೇ 5- ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಅವರಿಗೆ ಕರ್ನಾಟಕ ರೈತರ ಸೇನೆ ಬೆಂಬಲ ಘೋಷಿಸಿದೆ. ರೈತ ಸೇನೆ ರಾಜ್ಯಾಧ್ಯಕ್ಷ ಉಜ್ಜನಗೌಡ ಬಿದರಿಕೆರೆ, ಕಾರ್ಯಾಧ್ಯಕ್ಷ ಎಂ.ರಮೇಶ್ ನೆಲಹೊನ್ನೆ, ಮಹಿಳಾ ರಾಜ್ಯಾಧ್ಯಕ್ಷೆ ಭಾಗ್ಯಲಕ್ಷ್ಮಿ, ಪ್ರಧಾನ ಕಾರ್ಯದರ್ಶಿ ಸಿ.ಹೆಚ್.ಪದ್ಮ, ಹೆಚ್.ಎಸ್.ಅನಿತಾ, ಎಸ್.ಡಿ.ಗೀತಾ, ಶಶಿಕಲಾ, ಕೆ.ಬಿ.ಔಡಮ್ಮ, ರಮೇಶ್, ಮಂಜಣ್ಣ ಹೊಸಹಟ್ಟಿ ಸೇರಿದಂತೆ ಇತರರು ಗಾಯತ್ರಿ ಸಿದ್ದೇಶ್ವರ ಅವರಿಗೆ ಸಂಪೂರ್ಣ ಬೆಂಬಲ ಕೊಡುವುದಾಗಿ ಘೋಷಿಸಿದ್ದಾರೆ.

## ಕಾಂಗ್ರೆಸ್ ಪಕ್ಷಕ್ಕೆ ದೀಕ್ಷಾ ಕನ್ಸಲ್ಟೆನ್ಸಿ ಬೆಂಬಲ



ದಾವಣಗೆರೆ, ಮೇ 5 - ದೀಕ್ಷಾ ಕನ್ಸಲ್ಟೆನ್ಸಿಯ ಸಿಬ್ಬಂದಿಗಳು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಸಮ್ಮುಖದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ನೀಡಿದರು. ನಗರದ ಕಾಂಗ್ರೆಸ್ ಪಕ್ಷದ ಕಚೇರಿ ಆವರಣದಲ್ಲಿ ಸಚಿವರಿಗೆ ಸನ್ಮಾನಿಸಿ ಬೆಂಬಲವನ್ನು ವ್ಯಕ್ತಪಡಿಸಿದರು.

ಈ ವೇಳೆ ಸಚಿವರು ಮಾತನಾಡಿ,ಲೋಕಸಭಾ ಚುನಾವಣೆಯಲ್ಲಿ ಈ ಬಾರಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ ಅವರಿಗೆ ಹೆಚ್ಚು ಮತವನ್ನು ಬರವಂತೆ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು. ಈ ವೇಳೆ ಕನ್ಸಲ್ಟೆನ್ಸಿಯ ಮಂಜುನಾಥ್ ಎನ್, ಕಕ್ಕರಗೊಳ್ಳ, ಕಾಯಿಪೇಟೆ ಬಸವರಾಜ್, ಹೆಚ್.ಡಿ ಸುರೇಂದ್ರ, ಗುರುಮೂರ್ತಿ, ಕರಿಬಸಪ್ಪ, ಕಾಡಪ್ಪರ ಬಸವರಾಜಪ್ಪ, ಶಶಿನಾಯ್ಕ್, ಹವಳಪ್ಪ, ಗುತ್ತೆಪ್ಪ, ಕುಂದೂರು ಲಲಿತಮ್ಮ, ಸುಧಾ, ಶೋಭಲತಾ ಹಾಗೂ ಇತರರು ಉಪಸ್ಥಿತರಿದ್ದರು.

# ಹರಿಹರ : ಗುತ್ತೂರು ಸುತ್ತ ಮುತ್ತ ಕಾಂಗ್ರೆಸ್ ಪ್ರಚಾರ



ಹರಿಹರ, ಮೇ 5- ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಪರವಾಗಿ ಹರಿಹರ ತಾಲ್ಲೂಕಿನ ಕಾಂಗ್ರೆಸ್ ಪಕ್ಷದ ಮುಖಂಡರು ಗುತ್ತೂರು, ಗಂಗನಹರಸಿ, ದೀಟೂರು, ಸಾರಥಿ, ಪಾಮೇನಹಳ್ಳಿ, ಚಿಕ್ಕಬಿದರಿ, ಕುರುಬರಹಳ್ಳಿ, ಕರ್ಲಹಳ್ಳಿ, ಬುಳ್ಳಾಪುರ, ವಟಗನಹಳ್ಳಿ, ಕೊಂಡಜ್ಜಿ, ದೊಗ್ಗಳ್ಳಿ, ಅಮರಾವತಿ ಸೇರಿದಂತೆ ವಿವಿಧ ಗ್ರಾಮ ಗಳಲ್ಲಿ ಪ್ರಚಾರ ನಡೆಸಿದರು. ಈ ಸಂದರ್ಭದಲ್ಲಿ ಮಾಜಿ ಶಾಸಕ ಎಸ್. ರಾಮಪ್ಪ, ಜನತಾ ಬಜಾರ್ ಮಾಜಿ ಅಧ್ಯಕ್ಷ ಹೆಚ್.ಎಸ್.ನಾಗರಾಜ್, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ಜಿಪಂ ಮಾಜಿ ಸದಸ್ಯ ಬಿ.ಎಂ. ವಾಗೀಶ್ ಸ್ವಾಮಿ, ತಾ.ಪಂ. ಮಾಜಿ ಸದಸ್ಯ ಜಿ.ಬಿ. ಹಾಲೇಶಗೌಡ್ರು, ಗುತ್ತೂರು ನಾಗರಾಜ್, ಗಂಗಾಧರ್, ಅಶೋಕ ಮೇಷ್ಟ್ರು, ನೇತ್ರಾವತಿ ಪ್ಯಾಟಿ ಮತ್ತಿತರರು ಹಾಜರಿದ್ದರು.

# ರುದ್ರೇಶ್ - ಅಣ್ಣಪ್ಪ ಅವರ ಸ್ನೇಹಿತರು ಕಾಂಗ್ರೆಸ್‌ಗೆ ಬೆಂಬಲ



ಚನ್ನಗಿರಿ, ಮೇ 5 - ಚನ್ನಗಿರಿ ವಿಧಾನಸಭಾ ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿಗೆ ಬೆಂಬಲ ನೀಡಿದ್ದ ಯುವ ಮುಖಂಡ ರುದ್ರೇಶ್ ಗಂಗಗೊಂಡನಹಳ್ಳಿ ಹಾಗೂ ಅಣ್ಣಪ್ಪ ಅವರ ಸ್ನೇಹಿತರು ಕಾಂಗ್ರೆಸ್ ಅಭ್ಯರ್ಥಿ ಶ್ರೀಮತಿ ಪ್ರಭಾ ಎಸ್.ಎಸ್ ಮಲ್ಲಿಕಾರ್ಜುನ್‌ಗೆ ಬೆಂಬಲ ಸೂಚಿಸಿದ್ದಾರೆ.

ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಅವರ ಪುತ್ರ ಸಮರ್ಥ್ ಶಾಮನೂರು ಸಮ್ಮುಖದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗಿ, ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಶ್ರೀಮತಿ ಪ್ರಭಾ ಎಸ್.ಎಸ್ ಮಲ್ಲಿಕಾರ್ಜುನ್ ಬೆಂಬಲಿಸುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಯುವ ಮುಖಂಡರಾದ ರಘು, ಯುವ ಮುಖಂಡರಾದ ಎಲ್.ಎಂ.ಹೆಚ್. ಸಾಗರ್, ಶಂಭು, ಶಿವರತನ್, ಜ್ಯೋತಿ, ರಮೇಶ್, ಹರೀಶ್ ಇದ್ದರು.

# ಕಾಂಗ್ರೆಸ್ ಆಡಳಿತವನ್ನು ಜನ ಮೆಚ್ಚಿದ್ದಾರೆ : ಗೆಲುವು ಖಚಿತ



**ಚನ್ನಗಿರಿ ತಾಲ್ಲೂಕಿನಲ್ಲಿ ಶಾಸಕ ಬಸವರಾಜು ವಿ. ಶಿವಗಂಗಾ ನೇತೃತ್ವದಲ್ಲಿ ಮತ ಯಾಚನೆ**

ಚನ್ನಗಿರಿ, ಮೇ 5- ಲೋಕಸಭಾ ಚುನಾವಣೆಯಲ್ಲಿ ಈ ಬಾರಿ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಗೆಲುವು ಸಾಧಿಸುವ ಮೂಲಕ ಇತಿಹಾಸ ಸೃಷ್ಟಿಸಲಿದ್ದಾರೆ ಎಂದು ಶಾಸಕ ಬಸವರಾಜು ವಿ. ಶಿವಗಂಗಾ ತಿಳಿಸಿದರು.

ತಾಲ್ಲೂಕಿನ ನುಗ್ಗಿಹಳ್ಳಿ, ಕೊರಟಿಕೆರೆ, ದೇವರಹಳ್ಳಿ ಹಾಗೂ ಹೊದಿಗೆರೆ ಸೇರಿದಂತೆ ಹಲವು ಗ್ರಾಮಗಳಿಗೆ ಭೇಟಿ ನೀಡಿ ಪಕ್ಷದ ಮುಖಂಡರ ಸಭೆಯಲ್ಲಿ ಅವರು ಮಾತನಾಡಿದರು.

ದೇಶದಲ್ಲಿ ಬಿಜೆಪಿಯ ದುರಾಡಳಿತದಿಂದ ಜನ ಬೇಸತ್ತು, ರಾಜ್ಯದಲ್ಲಿನ ಜನ ಕಾಂಗ್ರೆಸ್ ಆಡಳಿತ ಮೆಚ್ಚಿದ್ದಾರೆ. ಆದ್ದರಿಂದ ಲೋಕಸಭಾ ಚುನಾವಣೆಯಲ್ಲಿ ಡಾ. ಪ್ರಭಾ ಮಲ್ಲಿಕಾರ್ಜುನ್ ಗೆಲ್ಲುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದರು.

ಚನ್ನಗಿರಿ ಕ್ಷೇತ್ರದಲ್ಲಿ ಈಗಾಗಲೇ ಪ್ರಚಾರ ನಡೆಸುತ್ತಿದ್ದು, ಜನರಿಂದ ಉತ್ತಮ ಬೆಂಬಲ ಸಿಗುತ್ತಿದೆ. ಕಾಂಗ್ರೆಸ್ ಪಕ್ಷಕ್ಕೆ ಅಧಿಕಾರ ಬಂದರೆ ಉತ್ತಮ ಆಡಳಿತ ಮಾಡಲಿದೆ ಎಂಬ ನಂಬಿಕೆ ಜನರಲ್ಲಿದೆ ಎಂದು ಹೇಳಿದರು.

ಚನ್ನಗಿರಿ ಕ್ಷೇತ್ರದಿಂದ ಅತೀ ಹೆಚ್ಚು ಮತಗಳು ಕಾಂಗ್ರೆಸ್ ಪಕ್ಷಕ್ಕೆ ಸೇರಲಿವೆ. ಏಕೆಂದರೆ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಗಳು ಆಗುತ್ತಿದ್ದು, ಈ ಚುನಾವಣೆಯಿಂದ ಮತ್ತಷ್ಟು ಹೊಸ ಬದಲಾವಣೆ ಆಗಲಿದೆ ಎಂದರು.

ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಸಂಸತ್‌ಗೆ ಹೋಗಲು ಸಮರ್ಥರಿದ್ದಾರೆ. ಕೇಂದ್ರದಲ್ಲಿ ನಮ್ಮ ಪರವಾಗಿ ಧ್ವನಿ ಎತ್ತುವ ಜ್ಞಾನ, ಕೌಶಲ್ಯ ಹೊಂದಿದ್ದಾರೆ. ಇಂಥ ಅಭ್ಯರ್ಥಿಯನ್ನು ಗೆಲ್ಲಿಸುವುದು ನಮ್ಮ ಕರ್ತವ್ಯ. ಆದ್ದರಿಂದ ಪಕ್ಷದ ಮುಖಂಡರು, ಕಾರ್ಯಕರ್ತರು ಪ್ರತಿ ಮನೆಗೂ ಹೋಗಿ ಸರ್ಕಾರದ ಸಾಧನೆಗಳನ್ನು ತಿಳಿಸಿ ಮನವರಿಕೆ ಮಾಡಲು ತಿಳಿಸಿದರು.

ಈ ವೇಳೆ ಪಕ್ಷದ ಮುಖಂಡರಾದ ಹೊದಿಗೆರೆ ರಮೇಶ್, ಯೋಗೇಶ್, ಬಂಡಿ ಸತೀಶ್ ಕುಮಾರ್, ವಿಜಿ ಗೌಡ್ರು, ಗಿರೀಶ್, ರುದ್ರೇಶ್ ಸೇರಿದಂತೆ ಕಾಂಗ್ರೆಸ್ ಪಕ್ಷದ ನಾಯಕರಿದ್ದರು.

## ಮಲೇಬೆನ್ನೂರಿನಲ್ಲಿ ಬಿಜೆಪಿ -ಜೆಡಿಎಸ್ ಜಂಟಿ ಪ್ರಚಾರ



ಮಲೇಬೆನ್ನೂರು, ಮೇ 5- ದಾವಣಗೆರೆ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶ್ರೀಮತಿ ಗಾಯತ್ರಿ ಸಿದ್ದೇಶ್ವರ ಅವರ ಪರವಾಗಿ ಮಲೇಬೆನ್ನೂರಿನಲ್ಲಿ ಬಿಜೆಪಿ - ಜೆಡಿಎಸ್ ಮುಖಂಡರು, ಕಾರ್ಯಕರ್ತರು ಜಂಟಿಯಾಗಿ ಪ್ರಚಾರ ಮಾಡಿದರು.

ಈ ವೇಳೆ ಮತದಾರರಿಗೆ ಬಿಜೆಪಿ ಗ್ಯಾರಂಟಿ ಕಾರ್ಡ್‌ಗಳನ್ನು ವಿತರಿಸಿದರು. ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ.ಚಿದಾನಂದಪ್ಪ, ಜಿ.ಪಂ.ಮಾಜಿ ಸದಸ್ಯ ಆದಾಪುರ ವೀರಭದ್ರಪ್ಪ, ಮುಖಂಡರಾದ ಎಂ.ಆರ್. ಮಹಾದೇವಪ್ಪ, ಗೋವಿಂದಪ್ಪ ಸಾವಜ್ಜಿ, ಆದಾಪುರ ವಿಜಯ ಕುಮಾರ್, ಪುರಸಭೆ ಸದಸ್ಯರಾದ ಬೆಣ್ಣೇಹಳ್ಳಿ ಸಿದ್ದೇಶ್, ಜಿಗಳೇರ ಹಾಲೇಶಪ್ಪ, ಓ.ಜಿ.ಕುಮಾರ್, ಪಾನಿಪುರಿ ರಂಗಣ್ಣ, ಕೆ.ಜಿ.ಮಂಜುನಾಥ್, ಭೋವಿ ಮಂಜಣ್ಣ, ಬಟ್ಟೆ ಅಂಗಡಿ ವಿಶ್ವ, ಉಡೆದರ್ ಸಿದ್ದೇಶ್, ಓ.ಜಿ.ಪ್ರಭು, ಪ್ರಕಾಶಾಚಾರ್, ಓ.ಜಿ.ಧನು, ಬೆಣ್ಣೆಹಳ್ಳಿ ಬಸವರಾಜ್, ನಿರಂಜನ್ ಪಿಂಟು ಮತ್ತು ಬಿಜೆಪಿ ಹಾಗೂ ಜೆಡಿಎಸ್ ಕಾರ್ಯಕರ್ತರು ಪ್ರಚಾರದಲ್ಲಿ ಪಾಲ್ಗೊಂಡಿದ್ದರು.

# ಬಿಜೆಪಿ ಗೆಲ್ಲಲ್ಲ : ವಿನಯ್ ಕುಮಾರ್ ನಿಂತ್ರು ಗೆಲ್ಲಲ್ಲ : ಸಿಎಂ

ಹೊನ್ನಾಳಿ, ಮೇ 5 - ಈ ಬಾರಿ ದಾವಣಗೆರೆಯಲ್ಲಿ ಕಾಂಗ್ರೆಸ್ ವಿಜಯಮಾಲೆ ಧರಿಸುವುದು ಖಚಿತ, ವಿನಯ್ ಕುಮಾರ್‌ಗೆ ಓಟ್ ಹಾಕಿದ್ರೆ ಬಿಜೆಪಿಗೆ ಹಾಕಿದ ಹಾಗೆ, ನಿಮಗೆ ಸಿದ್ದರಾಮಯ್ಯ ಬೇಕಾ, ವಿನಯ್ ಕುಮಾರ್ ಬೇಕಾ ನಿರ್ಧಾರ ಮಾಡಿ ಎಂದು ಸಿಎಂ ಸಿದ್ದರಾಮಯ್ಯ ಕರೆ ನೀಡಿದರು.

ಇಂದಿಲ್ಲಿ ಕಾಂಗ್ರೆಸ್ ಪಕ್ಷದಿಂದ ಹಮ್ಮಿಕೊಂಡಿದ್ದ ಸಮಾವೇಶದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ನಮ್ಮ ಕುರುಬ ಸಮಾಜಕ್ಕೆ ಬಿಜೆಪಿಯರು ಎಲ್ಲಿಯೂ ಲೋಕಸಭಾ ಚುನಾವಣೆಯಲ್ಲಿ ಟಿಕೆಟ್ ನೀಡಿಲ್ಲ. ನಾವು ಎರಡು ಕಡೆ ಟಿಕೆಟ್ ಕೊಟ್ಟಿದ್ದೇವೆ. ಕಳೆದ ಆರು ತಿಂಗಳಿನಿಂದ ಪಕ್ಷಕ್ಕೆ ಬಂದ ವಿನಯ್ ಕುಮಾರ್‌ಗೆ ಬೇಡಯ್ಯ ನಿನಗಿನ್ನು ಭವಿಷ್ಯ ಇದೆ ಎಂದಿದ್ದೆ, ಆಯಿತು ಎಂದು ಒಪ್ಪಿಕೊಂಡು ಹೋದ ಗಿರಾಕಿ, ಉಲ್ಟಾ ಆಗಿ ಬಿಡೋದಾ ಎಂದು ಕಿಡಿಕಾರಿದರು.

ನಮ್ಮ ಗ್ಯಾರಂಟಿ ಯೋಜನೆಗಳಿಂದ ಜನತೆ ನೆಮ್ಮದಿಯಿಂದ ಬದುಕುತ್ತಿದ್ದಾರೆ. ಶಕ್ತಿಯೋಜನೆ ಯಿಂದ ಧರ್ಮಸ್ಥಳದ ಧರ್ಮಾಧಿಕಾರಿ ವಿರೇಂದ್ರ ಹೆಗಡೆ ಅವರೇ ಪತ್ರ ಬರೆದು, ನಿಮ್ಮ ಹೆಸರಿನಲ್ಲಿ ಪೂಜೆ ಮಾಡಿಸುತ್ತಿದ್ದೇವೆ ಎಂದಿದ್ದಾರೆ.



**ಈ ಬಾರಿ ಬಿಜೆಪಿ ಗೆಲ್ಲಲ್ಲ, ವಿನಯ್ ಕುಮಾರ್ ಗೆಲ್ಲಲ್ಲ, ಒಂದೇ ಜಾತಿಯನ್ನಿಟ್ಟುಕೊಂಡು ಗೆದ್ದವರಿಲ್ಲ. ವಿನಯ್ ಕುಮಾರ್‌ಗೆ ಓಟ್ ಹಾಕಿದರೆ ಅದು ಬಿಜೆಪಿಗೆ ಹಾಕಿದ ಹಾಗೆ. ನಾನು ಸಿಎಂ ಆಗಿ ಮುಂದುವರೆಯಬೇಕು ಎಂದರೆ 'ಕಾಂಗ್ರೆಸ್ ಪಕ್ಷಕ್ಕೆ ಮತವನ್ನು ನೀಡಿ' ಕಳೆದ ಬಾರಿ ಶಾಂತನಗೌಡ ಅವರಿಗೆ ಲೀಡ್ ಕೊಟ್ಟು ಗೆಲ್ಲಿಸಿದ ಹಾಗೆ ಕಾಂಗ್ರೆಸ್ ಅಭ್ಯರ್ಥಿ ಪ್ರಭಾ ಮಲ್ಲಿಕಾರ್ಜುನ್ ಅವರನ್ನು ಗೆಲ್ಲಿಸಬೇಕು .**

-ಸಿದ್ದರಾಮಯ್ಯ, ಮುಖ್ಯಮಂತ್ರಿ

ದಾವಣಗೆರೆ ಸಂಸದರಾಗಿರುವ ಸಿದ್ದೇಶ್ವರ ಅವರು, ಕೇಂದ್ರದ ಸಚಿವಾಲಯದಲ್ಲಿ ಮಾತನಾಡಿ ದಾವಣಗೆರೆಗೆ ಅನುದಾನ ತಂದಿಲ್ಲ. ಇನ್ನು ಅವರ ಪತ್ನಿ ಮಾತಾಡ್ತಾರಾ ? ಎಂದು ಪ್ರಶ್ನಿಸಿದ ಸಿಎಂ ಸಿದ್ದರಾಮಯ್ಯ ಅವರು ದೇಶದಲ್ಲಿ ಹಣದುಬ್ಬರ ಹೆಚ್ಚಾಗಿ ಬೆಲೆ ಏರಿಕೆಯಾಗಿವೆ. ಅನೇಕ ಸಮಸ್ಯೆಗಳಿಂದ ಜನತೆ ತತ್ತರಿಸಿ ಹೋಗಿದ್ದು ಬಿಜೆಪಿಯನ್ನು ವಿರೋಧಿಸುತ್ತಿದ್ದಾರೆ.

ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ಮಾತನಾಡಿ, ನಮ್ಮ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಏನೇನು ಮಾಡಬೇಕು ಅಂದುಕೊಂಡಿದ್ದೆವೋ ಅವೆಲ್ಲವನ್ನು ಮಾಡಿದ್ದೇವೆ. ಐದು ಯೋಜನೆಗಳು ಉಪಯೋಗವಾಗಿವೆ. ಈ ಎಲ್ಲಾ ಕಾರ್ಯಕ್ರಮಗಳಿಗೆ ಸಿಎಂ ಸಿದ್ದರಾಮಯ್ಯರು ಕಾರಣ ಎಂದ ಅವರು ದಾವಣಗೆರೆ ತಾಲ್ಲೂಕಿನಲ್ಲೇ ಗೃಹಲಕ್ಷ್ಮಿ ಉಪಯೋಗವಾಗಿದ್ದು ಜಿಲ್ಲೆಯಲ್ಲಿ 4.10 ಮಹಿಳೆಯರು ಇದರ ಉಪಯೋಗ ಪಡೆದುಕೊಂಡಿದ್ದಾರೆ. ಪ್ರಸ್ತುತ ಲೋಕಸಭಾ ಸದಸ್ಯರು ಏನು ಮಾಡಿಲ್ಲ ರಸ್ತೆಗಳ ಅಭಿವೃದ್ಧಿಯಾಗಿಲ್ಲ, ಶಿವಮೊಗ್ಗ, ಹರಿಹರ ರೈಲುಮಾರ್ಗದ ಮಾರ್ಗ ನೆನೆಗುದಿಗೆ ಬಿದ್ದಿದೆ.

ಹಿಂದೆ ತರಳುಬಾಳು ಹುಣ್ಣಿಮೆಯಲ್ಲಿ ಇದೇ ಹೊನ್ನಾಳಿಯಲ್ಲಿ 57 ಕೆರೆಗಳಿಗೆ ಅನುಮತಿ ನೀಡಲಾಗಿತ್ತು. ಈಗ ಕಾರ್ಯರೂಪದಲ್ಲಿದ್ದು ಮೂರು ತಿಂಗಳಲ್ಲಿ ಕಾರ್ಯರೂಪ ಆಗಲಿದೆ. ನಿಮ್ಮೆಲ್ಲರ ಆಶಿರ್ವಾದ ಕಾಂಗ್ರೆಸ್ ಪಕ್ಷಕ್ಕೆ ಅತ್ಯಗತ್ಯವಿದ್ದು ಡಾ. ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಮತ ನೀಡುವಂತೆ ಕೋರಿದರು.

ಈ ಸಂದರ್ಭದಲ್ಲಿ ತರಿಕೆರೆಯ ಶಾಸಕ ಶ್ರೀನಿವಾಸ್, ಈಶ್ವರ್ ನಾಯಕ್, ಶಾಂತನಗೌಡ, ಬಸವಂತಪ್ಪ, ಮಂಜಪ್ಪ, ಆ.ಶಂಕರ್, ಶಿವಯೋಗಿ, ಮಂಜಣ್ಣ, ನೈರುತ್ಯ ಅಭ್ಯರ್ಥಿ ಆಯುನೂರು ಮಂಜುಜಾಥ್, ಸಿದ್ದಪ್ಪ, ವಿಶ್ವನಾಥ್, ಗಂಗಪ್ಪ, ಮಾ.ಜಿ.ಆರ್. ನಾಗಪ್ಪ, ಚಂದ್ರಶೇಖರ್, ಗದಿಗೇಶ್ ಉಮಾಪತಿ ಇತರರು ಇದ್ದರು.

# ಬಿಜೆಪಿ ಬಳಿ ಜನ ಶ್ರೀಮಂತಿಕೆ

## ಪ್ರಿಯಾಂಕ ಗಾಂಧಿ ಹೇಳಿಕೆಗೆ ಸಿ.ಟಿ. ರವಿ ತಿರುಗೇಟು



ದಾವಣಗೆರೆ, ಮೇ 5 - ಬಿಜೆಪಿ ಬಳಿ ಜನ ಶ್ರೀಮಂತಿಕೆ ಇದೆ. ಬಿಜೆಪಿ ಅತಿ ಹೆಚ್ಚು ಶಾಸಕರು ಹಾಗೂ ಸಂಸದರನ್ನು ಹೊಂದಿದೆ. ಚುನಾವಣಾ ಬಾಂಡ್ ಮೂಲಕ ಪಾರದರ್ಶಕವಾಗಿ ಬಿಜೆಪಿಗೆ ದೇಣಿಗೆ ನೀಡಲಾಗಿದೆ ಎಂದು ಬಿಜೆಪಿ ನಾಯಕ ಸಿ.ಟಿ. ರವಿ ಹೇಳಿದ್ದಾರೆ.

ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಚುನಾವಣಾ ಬಾಂಡ್ ಮೂಲಕ ಕಾರ್ಪೊರೇಟ್ ವಲಯ ಬಿಜೆಪಿಗೆ ನೀಡಿರುವ ಚುನಾವಣಾ ಬಾಂಡ್ ಕುರಿತು ಕಾಂಗ್ರೆಸ್ ನಾಯಕಿ ಪ್ರಿಯಾಂಕ ಗಾಂಧಿ ವಾದ್ರಾ ಮಾಡಿರುವ ಆರೋಪಗಳನ್ನು ತಳ್ಳಿ ಹಾಕಿದರು.

ಚುನಾವಣಾ ಬಾಂಡ್‌ನಲ್ಲಿ ಬಿಜೆಪಿ ಭ್ರಷ್ಟಾಚಾರ ನಡೆಸಿದೆ. ಕಂಪನಿಗಳನ್ನು ಬೆದರಿಸಿ ಹಣ ಪಡೆಯಲಾಗಿದೆ ಹಾಗೂ ಬಿಜೆಪಿ ವಿಶ್ವದಲ್ಲೇ ಶ್ರೀಮಂತ ಪಕ್ಷವಾಗಿದೆ ಎಂದು ಪ್ರಿಯಾಂಕ ಗಾಂಧಿ ನಿನ್ನೆ ನಡೆದ ಚುನಾವಣಾ ಸಮಾವೇಶದಲ್ಲಿ ಹೇಳಿದರು.

ಈ ಬಗ್ಗೆ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ರವಿ, ಪ್ರಿಯಾಂಕ ಅವರು ಯಾವ ದೃಷ್ಟಿಯಿಂದ ಹೇಳಿದ್ದಾರೋ ಗೊತ್ತಿಲ್ಲ. ಬಿಜೆಪಿ ಜನ ಶ್ರೀಮಂತಿಕೆ ಹೊಂದಿದೆ. ನಮ್ಮ ನಾಯಕ ನರೇಂದ್ರ ಮೋದಿ ಜಗತ್ತಿನಾದ್ಯಂತ ಜನರ ಪ್ರೀತಿ - ವಿಶ್ವಾಸ ಗಳಿಸಿದ್ದಾರೆ ಎಂದರು.

ಪಾರದರ್ಶಕತೆಗಾಗಿ ಚುನಾವಣಾ ಬಾಂಡ್ ವ್ಯವಸ್ಥೆ ಜಾರಿಗೆ ತರಲಾಗಿತ್ತು. ನಾವು ವಿಶ್ವಾಸ ಹಾಗೂ ಪಾರದರ್ಶಕವಾಗಿ ದೇಣಿಗೆ ಪಡೆದಿದ್ದೇವೆ ಎಂದು ತಿಳಿಸಿದರು.

ಬಿಜೆಪಿ ಅತಿ ಹೆಚ್ಚು ಶಾಸಕರು ಹಾಗೂ ಸಂಸದರನ್ನು ಹೊಂದಿದೆ. ಅತಿ ಹೆಚ್ಚು ರಾಜ್ಯಗಳಲ್ಲಿ ಅಧಿಕಾರದಲ್ಲಿದೆ. ಕೇಂದ್ರದಲ್ಲೂ ಅಧಿಕಾರದಲ್ಲಿದೆ. ಆದರೂ ಶೇ.44ರಷ್ಟು ಮಾತ್ರ ಚುನಾವಣಾ ಬಾಂಡ್ ದೇಣಿಗೆ ದೊರೆತಿದೆ. ಶೇ.56 ರಷ್ಟು ದೇಣಿಗೆ ಕಾಂಗ್ರೆಸ್, ಡಿಎಂಕೆ, ಎಎಪಿ ಮುಂತಾದ ಪ್ರತಿಪಕ್ಷಗಳೇ ಪಡೆದುಕೊಂಡಿವೆ ಎಂದವರು ಹೇಳಿದರು.

ಒಂದು ವೇಳೆ ಚುನಾವಣಾ ದೇಣಿಗೆಯಲ್ಲಿ ಅವ್ಯವಹಾರ ನಡೆದಿದೆ ಎಂದು ಕಾಂಗ್ರೆಸ್ ಭಾವಿಸುವುದಾದರೆ ಅವರು ಪಡೆದಿರುವ ದೇಣಿಗೆ ವಾಪಸ್ ಕೊಡಲಿ ಎಂದು ಸವಾಲು ಹಾಕಿದರು.

ಅಭಿವೃದ್ಧಿಯ ಪರಿಕಲ್ಪನೆ ಹೊಂದಿರುವ ನರೇಂದ್ರ ಮೋದಿಯವರು ಎಲ್ಲರನ್ನೂ ಒಳಗೊಳ್ಳುವಿಕೆ, ಏಕತೆಗೆ ಒತ್ತು ನೀಡುತ್ತಾರೆ. ಹೀಗಿದ್ದರೂ ಕಾಂಗ್ರೆಸ್‌ನವರು ಮೋದಿ ಅವರ ವಿರುದ್ಧವಾಗಿ ಸುಳ್ಳು, ಅಪಪ್ರಚಾರ ಮತ್ತು ಅನುಮಾನ ಹುಟ್ಟುಹಾಕುವುದನ್ನೇ ಅಜೆಂಡಾ ಮಾಡಿಕೊಂಡು ಮತ ವಿಭಜಿಸಲು ಯತ್ನಿಸುತ್ತಿದ್ದಾರೆ ಎಂದು ಇದೇ ವೇಳೆ ದೂರಿದರು.

ಕಳೆದ 7 ತಿಂಗಳಿನಿಂದ ಕಾಂಗ್ರೆಸ್ ಸರ್ಕಾರ ಹಾಲು ಉತ್ಪಾದಕರಿಗೆ ಸಬ್ಸಿಡಿ ಹಣ ನೀಡಿಲ್ಲ. 108 ಆಂಬ್ಯುಲೆನ್ಸ್ ಸಿಬ್ಬಂದಿಗೆ ವೇತನ ನೀಡಿಲ್ಲ. ಖಜಾನೆ ಖಾಲಿಯಾಗಿದೆಯೇ? ಎಂದು ರವಿ ಪ್ರಶ್ನಿಸಿದರು.

ಸುಳ್ಳು, ಅಪಪ್ರಚಾರ ಮತ್ತು ಅನುಮಾನದ ಮೂಲಕವೇ ಬಿಜೆಪಿ ಪಕ್ಷವನ್ನು ಸೋಲಿಸಲು ಕಾಂಗ್ರೆಸ್ ಯತ್ನಿಸುತ್ತಿದೆ. ಆದರೆ, ದೇಶದ ಜನರಿಗೆ ಮೋದಿಯ ತಾಕತ್ತು ಮತ್ತು ಪಾರದರ್ಶಕ ಆಡಳಿತದ ಮೇಲೆ ನಂಬಿಕೆಯಿರುವುದರಿಂದ ಈ ಬಾರಿಯೂ ಮೋದಿ ದೇಶದ ಪ್ರಧಾನಿಯಾಗುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದವರು ವಿಶ್ವಾಸ ವ್ಯಕ್ತಪಡಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ, ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ, ಪರಿಷತ್ ಸದಸ್ಯರಾದ ಕೆ. ಎಸ್. ನವೀನ್, ಎನ್. ರವಿಕುಮಾರ್, ಜಿಲ್ಲಾಧ್ಯಕ್ಷ ಎನ್. ರಾಜಶೇಖರ್, ಜೆಡಿಎಸ್ ನಾಯಕ ಹೆಚ್.ಎಸ್. ಶಿವಶಂಕರ್, ಬಿಜೆಪಿ ಮುಖಂಡರಾದ ಯಶವಂತರಾವ್ ಜಾಧವ್, ಮಾಳವಿಕಾ ಅವಿನಾಶ್, ಅಣ್ಣೇಶ್ ಐರಣಿ, ವೀರೇಶ್ ಹನಗವಾಡಿ, ಕೊಳೇನಹಳ್ಳಿ ಸತೀಶ್ ಮತ್ತಿತರರು ಉಪಸ್ಥಿತರಿದ್ದರು.

### ಮತ ಜಿಹಾದ್ ಕರೆಗೆ ಖಂಡನೆ

ಈ ಹಿಂದೆ ಲವ್ ಜಿಹಾದ್ ಇತ್ತು, ಈಗ ಕಾಂಗ್ರೆಸ್‌ನವರು ವೋಟ್ ಜಿಹಾದ್ ಮಾಡಲು ಯತ್ನಿಸುತ್ತಿದ್ದಾರೆ ಎಂದು ಸಿ.ಟಿ. ರವಿ ಕಿಡಿಕಾರಿದರು.

ಕಾಂಗ್ರೆಸ್ ನಾಯಕ ಸಲ್ಮಾನ್ ಖುರ್ಷೀದ್ ಅವರ ಸೊಸೆ ಮರಿಯಾ ಆಲಂ ಖಾನ್ ಅವರು ಮತ ಜಿಹಾದ್ ಮೂಲಕ ಬಿಜೆಪಿ ಸರ್ಕಾರವನ್ನು ಕಿತ್ತು ಹಾಕುವಂತೆ ಕರೆ ನೀಡಿರುವುದನ್ನು ರವಿ ಖಂಡಿಸಿದರು.

### ನ್ಯಾಯಮೂರ್ತಿಗಳ ಉಸ್ತುವಾರಿಯಲ್ಲಿ ಪ್ರಜ್ವಲ್ ಪ್ರಕರಣ ತನಿಖೆಗೆ ಆಗ್ರಹ

ಸಂಸದ ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣವನ್ನು ಸುಪ್ರೀಂ ಕೋರ್ಟ್ ಇಲ್ಲವೇ ಹೈಕೋರ್ಟ್ ಹಾಲಿ ಮಹಿಳಾ ನ್ಯಾಯಮೂರ್ತಿಗಳ ಉಸ್ತುವಾರಿ ತನಿಖೆಗೆ ಒಳಪಡಿಸಬೇಕು ಎಂದು ಬಿಜೆಪಿ ನಾಯಕ ಸಿ.ಟಿ. ರವಿ ಆಗ್ರಹಿಸಿದ್ದಾರೆ.

ಪೆನ್‌ಡ್ರೈವ್ ಪ್ರಕರಣಕ್ಕೆ ಸಂಬಂಧಿಸಿದಂತೆ ತಪ್ಪು ಮಾಡಿದವರಿಗೆ ಶಿಕ್ಷೆಯಾಗಬೇಕು. ಸಂತ್ರಸ್ತೆಯರಿಗೆ ನ್ಯಾಯ ಸಿಗಬೇಕು. ಇದೇ ವೇಳೆ ಪ್ರಕರಣ ರಾಜಕೀಯ ಉದ್ದೇಶಕ್ಕೆ ಬಳಕೆಯಾಗಬಾರದು ಎಂದವರು ಹೇಳಿದರು. ನ್ಯಾಯಮೂರ್ತಿಗಳ ಉಸ್ತುವಾರಿಯಲ್ಲಿ ತನಿಖೆ ನಡೆಸಿದರೆ, ಪ್ರಕರಣದಲ್ಲಿ ರಾಜಕೀಯವಾಗುವುದು ತಪ್ಪಲಿದೆ ಎಂದವರು ತಿಳಿಸಿದರು.

# ಬಸವಾಪಟ್ಟಣ ವ್ಯಾಪ್ತಿಯಲ್ಲಿ ಕಾಂಗ್ರೆಸ್ ತೊರೆದು ಬಿಜೆಪಿಗೆ



ದಾವಣಗೆರೆ, ಮೇ 5 - ಬಸವಾಪಟ್ಟಣ ವ್ಯಾಪ್ತಿಯ ಕಾಂಗ್ರೆಸ್ ಕಾರ್ಮಿಕ ವಿಭಾಗಗಳ ಅಧ್ಯಕ್ಷ ಮಂಜುನಾಥ್ ಹಾಗೂ ಶೃಂಗಾರಭಾಗ ತಾಂಡಾದ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಜಗದೀಶ್ ಕಾಂಗ್ರೆಸ್ ತೊರೆದು, ಸಂಸದ ಜಿ. ಎಂ.ಸಿದ್ದೇಶ್ವರ ಅವರ ಸಮ್ಮುಖದಲ್ಲಿ ಬಿಜೆಪಿ ಸೇರ್ಪಡೆಗೊಂಡರು.

ಈ ವೇಳೆ ಮಾಜಿ ಸಚಿವ ಸಿ.ಟಿ.ರವಿ, ಜಿಲ್ಲಾಧ್ಯಕ್ಷ ಎನ್.ರಾಜಶೇಖರ್, ಮಾಜಿ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್, ಯುವ ಮೋರ್ಚಾ ಅಧ್ಯಕ್ಷ ಸಚಿನ್ ಇದ್ದರು.

# ಹೊಸಬೆಳವನೂರು ವ್ಯಾಪ್ತಿಯ ಮುಖಂಡರು ಬಿಜೆಪಿಗೆ



ದಾವಣಗೆರೆ, ಮೇ 5- ಹೊಸಬೆಳವನೂರು ವ್ಯಾಪ್ತಿಯ ಅನೇಕ ಕಾಂಗ್ರೆಸ್ ಮುಖಂಡರು ಪಕ್ಷ ತೊರೆದು ಬಿಜೆಪಿ ಸೇರ್ಪಡೆಗೊಂಡರು. ಹೊಸಬೆಳವನೂರಿನ ದಿಳ್ಳೆಪ್ಪ ಮಂಜುನಾಥ್, ಬಸವರಾಜ್, ಜವಳಘಟ್ಟ ಗ್ರಾ.ಪಂ ಮಾಜಿ ಸದಸ್ಯ ಚಂದ್ರಪ್ಪ, ಶಶಿಕುಮಾರ್, ಪ್ರಕಾಶ್, ನಾಗರಾಜ್, ರವಿಕುಮಾರ್ ಮಹಾದೇವಪುರ, ರಂಗಣ್ಣರ ನಾಗರಾಜ್, ನವೀನ್ ತರಳಬಾಳು ನಗರ, ರಾಜು, ಇಮ್ರಾನ್ ಸೇರಿದಂತೆ ಅನೇಕ ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರು ಪಕ್ಷ ತೊರೆದು ಬಿಜೆಪಿ ಸೇರ್ಪಡೆಗೊಂಡರು.

ಈ ವೇಳೆ ಸಂಸದ ಜಿ.ಎಂ.ಸಿದ್ದೇಶ್ವರ, ಎಸ್ಟಿ ಮೋರ್ಚಾ ರಾಜ್ಯ ಉಪಾಧ್ಯಕ್ಷ ಶ್ರೀನಿವಾಸ್ ದಾಸಕರಿಯಪ್ಪ, ಭೋವಿ ಸಮಾಜದ ಮುಖಂಡರಾದ ಶ್ರೀನಿವಾಸ್, ವಿಜಯಕುಮಾರ್, ಗುರುಪ್ರಸಾದ್ ಮತ್ತಿತರರು ಇದ್ದರು.

# ನಾನು ನಿಮ್ಮ ಮನ ತಲುಪಿದ್ದೇನೆ: ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ



ದಾವಣಗೆರೆ, ಮೇ 5- ಆತ್ಮೀಯ ಮತದಾರ ಬಂಧುಗಳೇ ನಾನು ಪ್ರತಿಯೊಬ್ಬರ ಮನೆ ತಲುಪುವುದಕ್ಕೆ ಆಗದೇ ಇರಬಹುದು. ಆದರೆ, ನಿಮ್ಮೆಲ್ಲರ ಮನ ತಲುಪಿದ್ದೇನೆ ಎನ್ನುವ ವಿಶ್ವಾಸ ನನ್ನಲ್ಲಿದೆ. ಚುನಾವಣೆ ಬಳಿಕ ಎಲ್ಲರನ್ನೂ ಮತ್ತೊಮ್ಮೆ ಭೇಟಿಯಾಗುತ್ತೇನೆ ಎಂದು ಲೋಕಸಭಾ ಚುನಾವಣೆಯ ಬಿಜೆಪಿ ಅಭ್ಯರ್ಥಿ ಶ್ರೀಮತಿ ಗಾಯತ್ರಿ ಸಿದ್ದೇಶ್ವರ ಅವರು ತಿಳಿಸಿದ್ದಾರೆ.

ನನ್ನ ಕ್ರಮ ಸಂಖ್ಯೆ 1, ಗುರುತು ಕಮಲ. ಮೇ 7 ರಂದು ನಡೆಯಲಿರುವ ಚುನಾವಣೆಯಲ್ಲಿ ನನಗೆ ನಿಮ್ಮ ಅಮೂಲ್ಯ ಮತವನ್ನು ನೀಡಿ ಗೆಲ್ಲಿಸಬೇಕು ಎಂದು ಅವರು ಕೇಳಿಕೊಂಡಿದ್ದಾರೆ.

ಉತ್ತರ ವಿಧಾನಸಭಾ ಕ್ಷೇತ್ರದಲ್ಲಿ ಮತ ಯಾಚಿಸಿ ಮಾತನಾಡಿದ ಅವರು, ಲೋಕಸಭಾ ಕ್ಷೇತ್ರದ ಪ್ರತಿಯೊಂದು ಮನೆಗೂ ಭೇಟಿ ನೀಡಬೇಕು ಅನ್ನೋ ಆಸೆ ನನ್ನದಾಗಿತ್ತು. ಆದರೆ, ಸಮಯದ ಅಭಾವವಾಗಿದ್ದು, ಬಹುತೇಕ ಗ್ರಾಮಗಳಿಗೆ ಭೇಟಿ ನೀಡಿ ಮತ ಯಾಚಿಸಿದ್ದೇನೆ ಎಂದು ಅವರು ತಿಳಿಸಿದ್ದಾರೆ.

ನನ್ನ ಪರವಾಗಿ ನನ್ನ ಅಪಾರ ಕಾರ್ಯಕರ್ತರ ಪಡೆ ಪ್ರತಿ ಮನೆಗೂ ತಲುಪಿ ಮತ ಯಾಚಿಸಿದ್ದಾರೆ. ಅವರು ಬೇರೆಯಲ್ಲ, ನಾನು ಬೇರೆಯಲ್ಲ ಎಂದು ಭಾವಿಸಿದ್ದೇನೆ. ನಾನೇ ನಿಮ್ಮ ಮನೆ - ಬಾಗಿಲಿಗೆ ಬಂದು ಮತಯಾಚಿಸಿದ್ದೇನೆ ಎಂದು ತಿಳಿದುಕೊಂಡು ನನಗೆ ಮತ ಹಾಕಬೇಕು ಎಂದು ಗಾಯತ್ರಿ ಸಿದ್ದೇಶ್ವರ ಅವರು ಮನವಿ ಮಾಡಿದರು.

# ಶ್ರೀಶೈಲ ಜಗದ್ಗುರುಗಳ ದರ್ಶನಾಶೀರ್ವಾದ ಪಡೆದ ಪ್ರಭಾ ಮಲ್ಲಿಕಾರ್ಜುನ್ ದಂಪತಿ



ದಾವಣಗೆರೆ, ಮೇ 5 - ಯುವ ಮುಖಂಡ ಆರ್.ಟಿ ಪ್ರಶಾಂತ್ ದುಗತ್ತಿಮಠರವರ ಮನೆಯಲ್ಲಿ ನಡೆದ ಶ್ರೀಶೈಲ ಜಗದ್ಗುರುಗಳವರ ಇಷ್ಟಲಿಂಗ ಪೂಜೆ ಮತ್ತು ಧರ್ಮ ಸಮಾರಂಭದಲ್ಲಿ ದಾವಣಗೆರೆ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಡಾ.ಪ್ರಭಾ ಮಲ್ಲಿಕಾರ್ಜುನ್ ಮತ್ತು ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ಆಗಮಿಸಿ ಜಗದ್ಗುರುಗಳವರ ಆಶೀರ್ವಾದ ಪಡೆದರು.

ಧರ್ಮ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ದಯಪಾಲಿಸಿದ ಶ್ರೀಶೈಲ ಜಗದ್ಗುರುಗಳವರು ಧರ್ಮದ ಹಾದಿಯಲ್ಲಿ ಎಲ್ಲರೂ ಸಾಗಬೇಕು. ಧರ್ಮವನ್ನು ಕಾಪಾಡಿದವರಿಗೆ ಧರ್ಮ ಕಾಪಾಡುತ್ತದೆ ಮತ್ತು ಧರ್ಮದ ಪರವಾಗಿ ಹೋರಾಟ ಮಾಡಿದವರಿಗೆ ಜೀವನದಲ್ಲಿ ಗೆಲುವು ನಿಶ್ಚಿತ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲೆಯ ಅನೇಕ ಮಠಾಧೀಶರು, ಶಾಸಕ ಶಾಮನೂರು ಶಿವಶಂಕರಪ್ಪ, ಸಮಾಜದ ಮುಖಂಡ ಅಥಣಿ ವೀರಣ್ಣ, ಅಣಬೇರು ರಾಜಣ್ಣ, ಎಸ್.ಕೆ.ವೀರಣ್ಣ, ಡಿ.ಎಂ ಹಾಲಸ್ವಾಮಿ, ಟಿ.ಎಂ.ಉಮಾಪತಯ್ಯ, ಎನ್.ಎಂ.ತಿಪ್ಪೇಸ್ವಾಮಿ, ಕೆ.ಎಂ.ಪರಮೇಶ್ವರಯ್ಯ, ಬಿ.ಎಂ.ವಾಗೀಶ್ ಸ್ವಾಮಿ, ಹುಲ್ಲುಮನಿ ಗಣೇಶ್, ದೇವರಮನಿ ಯೋಗೀಶ್, ಎನ್ ಹೆಚ್ ಪಾಟೀಲ್, ಡಿ.ಜಿ.ಶಿವಾನಂದಪ್ಪ, ಡಾ. ಕೊಟ್ರೇಶ್ ಬಿದರಿ, ಮಲ್ಲಿಕಾರ್ಜುನ್ ಕಲ್ಮಠ್, ಟಿ.ಎಂ.ಶಿವಶಂಕರ್, ಉಳುವಯ್ಯ ಸೇರಿದಂತೆ ಅನೇಕ ಮುಖಂಡರು ಮತ್ತು ನೂರಾರು ಭಕ್ತರು ಉಪಸ್ಥಿತರಿದ್ದರು.

# 'ಪ್ರಭಾ ಪ್ರಣಾಳಿಕೆ' ಮೂಲಕ ಜನರಿಗೆ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಪ್ರಾಮೀಸ್



ದಾವಣಗೆರೆ, ಮೇ 5- ನನ್ನ ರಾಜಕೀಯದಲ್ಲಿ 'ನನ್ನ ತತ್ವ ಪ್ರಜಾಪ್ರಭುತ್ವ' ಎಂಬ ತತ್ವವು ಜನರ ಸೇವೆ, ಸತ್ಯದ ಆಧಾರದ ಮೇಲೆ ಆಡಳಿತ ಮತ್ತು ನಾಗರಿಕರ ಕಲ್ಯಾಣಕ್ಕೆ ಆದ್ಯತೆ ನೀಡುವಂತಹ ತತ್ವಗಳ ಮೇಲೆ ಕೇಂದ್ರೀಕರಿಸುತ್ತದೆ ಎಂದು ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ತಿಳಿಸಿದ್ದಾರೆ.

'ನನ್ನ ತತ್ವ ಪ್ರಜಾಪ್ರಭುತ್ವ'ದಡಿ ಪ್ರಣಾಳಿಕೆಯನ್ನು ಹೊರತಂದಿರುವ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು, ಇದರಲ್ಲಿ ತಮ್ಮ ಪರಿಚಯದೊಂದಿಗೆ ತಾವು ಮಾಡಿರುವ ಜನಸೇವೆ ಮತ್ತು ಆರೋಗ್ಯ ಸೇವೆ ಕುರಿತಂತೆ ಮಾಹಿತಿಯನ್ನು ಮತದಾರರ ಗಮನಕ್ಕೆ ತಂದಿದ್ದಾರೆ.

ಇನ್ನು ರಾಜ್ಯ ಸರ್ಕಾರದ 5 ಗ್ಯಾರಂಟಿ ಯೋಜನೆಗಳಿಂದ ದಾವಣಗೆರೆ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಫಲಾನುಭವಿಗಳಿಗೆ ನೀಡಿರುವ ವೆಚ್ಚವನ್ನು ಕಾಣಿಸಿದ್ದು, ಮುಂದೆ ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ಪಂಚ ನ್ಯಾಯ- ಪಚ್ಚಿಸ್ ಗ್ಯಾರಂಟಿ ಯೋಜನೆಗಳನ್ನು ಜನರಿಗೆ ತಲುಪಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಇನ್ನು ನಾನು ಈ ಕ್ಷೇತ್ರವನ್ನು ಪ್ರತಿನಿಧಿಸಿದರೆ ಏನೆಲ್ಲಾ ಕಾರ್ಯಕ್ರಮಗಳನ್ನು ತರುತ್ತೇನೆ ಎಂದು ಪ್ರಣಾಳಿಕೆ ಮೂಲಕ ಪ್ರಭಾ ಅವರು ದಾವಣಗೆರೆ ಜನತೆಗೆ ಪ್ರಾಮೀಸ್ ಮಾಡಿದ್ದಾರೆ. ಇದಕ್ಕೆ ತಮ್ಮ ಮಾವ ಶಾಮನೂರು ಶಿವಶಂಕರಪ್ಪ ಮತ್ತು ಪತಿ - ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರ ಪ್ರೇರಣೆ ಮತ್ತು ಮಾರ್ಗದರ್ಶನ ನೀಡಿದ್ದಾರೆ ಎಂದು ಹೇಳಿದ್ದಾರೆ.

ಪ್ರಣಾಳಿಕೆಯಲ್ಲಿ ಮಹಿಳಾ ಸಬಲೀಕರಣ, ಶಿಕ್ಷಣ ಕ್ಷೇತ್ರ, ಆರೋಗ್ಯ ಕ್ಷೇತ್ರ, ವಸತಿ ಕ್ಷೇತ್ರ, ಆಹಾರ ಕ್ಷೇತ್ರ, ಕಾನೂನು ಮತ್ತು ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರ, ಕ್ರೀಡಾ ಕ್ಷೇತ್ರ, ಪ್ರವಾಸೋದ್ಯಮ, ಮನರಂಜನೆ ಹಾಗೂ ಕೃಷಿ ಮತ್ತು ನೀರಾವರಿ ಸಂಶೋಧನೆ, ವಾಣಿಜ್ಯ ಮತ್ತು ಕೈಗಾರಿಕೆ ಆಧ್ಯಾತ್ಮಿಕ ಕ್ಷೇತ್ರವು ಸೇರಿದಂತೆ ಹೀಗೆ ಹತ್ತು ಹಲವು ಯೋಜನೆಗಳನ್ನು ತಿಳಿಸಿ, ಈ ಎಲ್ಲಾ ಯೋಜನೆಗಳನ್ನು 5 ವರ್ಷಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ ನಡೆಸುವುದಾಗಿ ತಿಳಿಸಿದ್ದಾರೆ.

ಪ್ರಭಾ ಮಲ್ಲಿಕಾರ್ಜುನ್ ಅವರ ತತ್ವಶಾಸ್ತ್ರದ ನೈತಿಕ ಆಡಳಿತ, ಸಾಮಾಜಿಕ ನ್ಯಾಯ ಮತ್ತು ಅಂತರ್ಗತ ನಿರ್ಧಾರಗಳನ್ನು ತೆಗೆದುಕೊಳ್ಳುವ ಬಯಕೆಯಿಂದ ಪ್ರೇರೇಪಿಸಲ್ಪಟ್ಟಿದೆ. ದಾವಣಗೆರೆಯಲ್ಲಿ ಹೆಚ್ಚು ಸ್ಪಂದಿಸುವ ಮತ್ತು ಜವಾಬ್ದಾರಿಯುತ ರಾಜಕೀಯ ಪರಿಸರ ವ್ಯವಸ್ಥೆಗಾಗಿ ಈ ಮೌಲ್ಯಗಳ ಮತ್ತು ಅವರ ದೃಷ್ಟಿಗೆ ಹೊಂದಿಕೆಯಾಗುತ್ತಿದೆ ಎಂದು ಡಾ. ಪ್ರಭಾ ಅವರ ಜನ ಸಂಪರ್ಕ ಕಚೇರಿ ಪ್ರಕಟಣೆ ತಿಳಿಸಿದೆ.

ಪ್ರಚಾರದಲ್ಲೂ ಸಹ ಪ್ರತಿಯೊಂದು ಗ್ರಾಮದಲ್ಲೂ ಮಹಿಳೆಯರೊಂದಿಗೆ ಸಂವಾದ ನಡೆಸಿರುವ ಪ್ರಭಾ ಮಲ್ಲಿಕಾರ್ಜುನ್ ಅವರು, ಆರೋಗ್ಯ ರಕ್ಷಣೆ ಬಗ್ಗೆ ಮಾಹಿತಿ ನೀಡಿ ಅವರ ಕಷ್ಟಗಳನ್ನು ಆಲಿಸಿರುವುದು ಹಾಗೂ ಶೋಷಿತರು, ಸಮಾಜದ ಕಟ್ಟಕಡೆಯ ವ್ಯಕ್ತಿಗಳು ಹಾಗೂ ಲಿಂಗತ್ವ ಅಲ್ಪಸಂಖ್ಯಾತರೊಂದಿಗೆ ಮಾತುಕತೆ ನಡೆಸಿರುವುದು ಅವರ ಔದಾರ್ಯಕ್ಕೆ ಸಾಕ್ಷಿಯಾಗಿದೆ ಎಂದು ಪ್ರಕಟಣೆ ಬಣ್ಣಿಸಿದೆ.

# ಸೊಸೆ ಡಾ. ಪ್ರಭಾ ಎಸ್ಸೆಸ್ಸೆಂ ಪರ ಮಾವ ಬಕ್ಕೇಶ್ ಮತಯಾಚನೆ

## ಪ್ರಜ್ಞಾವಂತ ಮತದಾರರು ಕಾಂಗ್ರೆಸ್ ಬೆಂಬಲಿಸಲು ಕರೆ



ದಾವಣಗೆರೆ, ಮೇ 5 - ಲೋಕಸಭಾ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ದಾವಣಗೆರೆ ಉತ್ತರ ವಿಧಾನಸಭಾ ಮತದಾರರು ಪ್ರಜ್ಞಾವಂತರಿದ್ದು, ಪ್ರಜ್ಞಾವಂತಿಕೆಯನ್ನು ತೋರಿಸಬೇಕಿದೆ ಎಂದು ಚಿತ್ರದುರ್ಗ ಜಿಲ್ಲಾ ಪರಿಷತ್ ಮಾಜಿ ಅಧ್ಯಕ್ಷ ಎಸ್.ಎಸ್. ಬಕ್ಕೇಶ್ ಅವರು ಕರೆ ನೀಡಿದರು.

ಅವರಿಂದು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರ ಪರವಾಗಿ ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ವಿವಿಧ ಬಡಾವಣೆಗಳಲ್ಲಿ ಮತಯಾಚಿಸಿ ಮತದಾರರನ್ನುದ್ದೇಶಿಸಿ ಮಾತನಾಡಿದರು.

ದಾವಣಗೆರೆ ಜಿಲ್ಲೆಯಲ್ಲಿ ಶಾಮನೂರು ಶಿವಶಂಕರಪ್ಪ ಮತ್ತು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಸಾಕಷ್ಟು ಅಭಿವೃದ್ಧಿ ಮಾಡಿದ್ದು, ಇನ್ನಷ್ಟು ಅಭಿವೃದ್ಧಿಗೆ ಪ್ರಭಾ ಮಲ್ಲಿಕಾರ್ಜುನ್ ಅವರನ್ನು ಪ್ರಜ್ಞಾವಂತ ಮತದಾರರು ಬೆಂಬಲಿಸುವ ಮೂಲಕ ಲೋಕಸಭೆಗೆ ಕಳುಹಿಸಬೇಕೆಂದರು.

ಕುಂದವಾಡ ಕೆರೆ, ಗಾಜಿನ ಮನೆ ಮತ್ತು 15 ಸಾವಿರ ಜನರಿಗೆ ಸೂರು ಕಲ್ಪಿಸಿದ ಕೀರ್ತಿಯನ್ನು ಹೊಂದಿರುವ ಎಸ್ಸೆಸ್ ಮತ್ತು ಸಚಿವ ಎಸ್ಸೆಸ್ಸೆಂ ಅವರು ದಾವಣಗೆರೆ ಜಿಲ್ಲೆ ಮತ್ತು ಇನ್ನಷ್ಟು ಅಭಿವೃದ್ಧಿ ಮಾಡಲು ಕೇಂದ್ರ ಸರ್ಕಾರದ ಸಹಾಯಧನ ಅವಶ್ಯಕತೆ ಇದ್ದು, ಪ್ರಭಾ ಮಲ್ಲಿಕಾರ್ಜುನ್ ಗೆದ್ದರೆ ಹಲವು ಅನುದಾನಗಳನ್ನು ತಂದು ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳುವರು ಎಂದರು.

ಈ ಸಂದರ್ಭದಲ್ಲಿ ಮುಖಂಡರುಗಳಾದ ಮೇಕಾ ಮುರುಳಿಕೃಷ್ಣ, ರಾಮಮೂರ್ತಿ, ಎಸ್.ಎನ್. ಬಸವರಾಜ್, ಮಂಜುನಾಥ್, ಹರೀಶ್, ವೆಂಕಟೇಶ್ ನಾಯಕ, ಶಶಿ, ಕಾಳಾಚಾರಿ, ಚನ್ನಬಸಪ್ಪ, ರಮೇಶ್, ಭೀಮೇಶ್, ಲಿಂಗರಾಜ್, ಪ್ರದೀಪ್, ರಾಜಣ್ಣ, ಬಾಪೂಜಿ ಬ್ಯಾಂಕ್ ರವಿ, ಸೇರಿದಂತೆ ಅನೇಕ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

# ಶಾಸಕ ಎಸ್ಸೆಸ್‌ರೊಂದಿಗೆ ಡಾ. ಪ್ರಭಾ ಮಲ್ಲಿಕಾರ್ಜುನ್ ಮತಯಾಚನೆ



### ಪೌರಕಾರ್ಮಿಕರು, ಬಡವರಿಗೆ ಸೂರು ಕಲ್ಪಿಸಿದ್ದು ಕಾಂಗ್ರೆಸ್ : ಶಾಸಕ ಶಾಮನೂರು ಶಿವಶಂಕರಪ್ಪ

### ಸಂವಿಧಾನ ರಕ್ಷಣೆ, ಎಲ್ಲಾ ವರ್ಗದವರ ಹಿತ ಕಾಪಾಡಲಾಗುವುದು : ಡಾ. ಪ್ರಭಾ ಮಲ್ಲಿಕಾರ್ಜುನ್

ದಾವಣಗೆರೆ, ಮೇ 5 - ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ 1,6,5 ಮತ್ತು 45ನೇ ವಾರ್ಡ್‌ಗಳ ವ್ಯಾಪ್ತಿಯಲ್ಲಿ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪನವರು ಮತ್ತು ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಮತ ಯಾಚಿಸಿದರು.

ನಂತರ ಎಸ್ಸೆಸ್ ಮಾತನಾಡಿ, ಈ ಭಾಗದ ಪೌರಕಾರ್ಮಿಕರು ಮತ್ತು ಬಡವರಿಗೆ ಸೂರು ಕಲ್ಪಿಸಿದ್ದು ಕಾಂಗ್ರೆಸ್ ಪಕ್ಷ ಎಂಬುದನ್ನು ಯಾರೂ ಮರೆಯಬಾರದು. ಸೂರು ಕಲ್ಪಿಸುವುದರ ಜೊತೆಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗಿದೆ ಎಂದರು.

ಅದೇ ರೀತಿ ರಾಜ್ಯ ಸರ್ಕಾರ ನೀಡುವ ಯೋಜನೆಗಳನ್ನು ಯಾವುದೇ ಏಜೆಂಟ್‌ರು ಇಲ್ಲದೇ ಅರ್ಹ ಫಲಾನುಭವಿಗಳಿಗೆ ತಲುಪಿಸಲಾಗಿದೆ ಎಂದು ತಿಳಿಸಿ ಪ್ರತಿಯೊಂದು ಸಮಸ್ಯೆಗೂ ಸ್ಪಂದಿಸುವ ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ನನ್ನನ್ನು ಬೆಂಬಲಿಸಿದಂತೆ ಅತ್ಯಧಿಕ ಮತಗಳನ್ನು ನೀಡುವ ಮೂಲಕ ಜಯಶೀಲರನ್ನಾಗಿ ಮಾಡಬೇಕೆಂದು ಕರೆ ನೀಡಿದರು.

ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಮಾತನಾಡಿ, ಸಂವಿಧಾನ ರಕ್ಷಣೆ ಮತ್ತು ಎಲ್ಲಾ ವರ್ಗಗಳ ಹಿತ ಕಾಪಾಡುವುದು ನನ್ನ ಧ್ಯೇಯ ಎಂದು ತಿಳಿಸಿ ಈ ಭಾಗದಲ್ಲಿ ನಮ್ಮ ಮಾವನವರು ಅಭಿವೃದ್ಧಿ ಮಾಡಿದ್ದು, ಅವರಿಗೆ ಸದಾ ಬೆಂಬಲಿಸುತ್ತಿರುವ ತಾವುಗಳು ನನ್ನನ್ನು ಬೆಂಬಲಿಸಬೇಕೆಂದು ಮನವಿ ಮಾಡಿದರು.

ರಾಜ್ಯದಲ್ಲಿ ಅಧಿಕಾರಕ್ಕೆ ಬರುವ ಮುನ್ನ ಕಾಂಗ್ರೆಸ್ ಪಕ್ಷ ತನ್ನ ಪ್ರಣಾಳಿಕೆಯಲ್ಲಿ 5 ಗ್ಯಾರಂಟಿ ಯೋಜನೆಗಳನ್ನು ತರುವ ಭರವಸೆ ನೀಡಿತ್ತು. ಅದರಂತೆ ಸರ್ಕಾರ ಬಂದ ತಕ್ಷಣ ಐದೂ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದು ಇಂದು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರವೊಂದಕ್ಕೆ ಮಾರ್ಚ್ ಅಂತ್ಯಕ್ಕೆ ಸುಮಾರು ರೂ.122 ಕೋಟಿಯಷ್ಟು ಹಣವನ್ನು ಫಲಾನುಭವಿಗಳಿಗೆ ವಿತರಿಸಲಾಗಿದೆ ಎಂದರು.

ಇನ್ನು ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ 'ಪಂಚ ನ್ಯಾಯ ಪಚ್ಚೀಸ್ ಗ್ಯಾರೆಂಟಿ' ಭರವಸೆಗಳನ್ನು ನೀಡಲಾಗಿದ್ದು, ಯುವ ನ್ಯಾಯದಡಿ ಯುವಕರಿಗೆ ಉದ್ಯೋಗ, ಮಹಿಳಾ ನ್ಯಾಯದಡಿ ಪ್ರತಿ ಮಹಿಳೆಗೆ 1 ಲಕ್ಷ ರೂ., ರೈತ ನ್ಯಾಯದಡಿ ಸ್ವಾಮಿನಾಥನ್ ಆಯೋಗವನ್ನು ಜಾರಿಗೊಳಿಸುವುದು, ನರೇಗಾ ಕೂಲಿ ಹಣವನ್ನು ರೂ. 400ಕ್ಕೆ ಹೆಚ್ಚಿಸಲಾಗುವುದು ಸೇರಿದಂತೆ ಹಲವು ಯೋಜನೆಗಳನ್ನು ಪ್ರಣಾಳಿಕೆಯಲ್ಲಿ ಘೋಷಿಸಲಾಗಿದ್ದು, ಅದರಂತೆ ನಾವುಗಳು ಜಾರಿಗೆ ತರುತ್ತೇವೆ ಎಂದರು.

ಈ ಸಂದರ್ಭದಲ್ಲಿ ರಾಜ್ಯ ಕಾಂಗ್ರೆಸ್ ವಕ್ತಾರರಾದ ಯು.ಟಿ. ಫರ್ಜಾನ್, ಜಿಲ್ಲಾ ಕಾಂಗ್ರೆಸ್ ಪರಿಶಿಷ್ಟ ಜಾತಿ ವಿಭಾಗದ ಅಧ್ಯಕ್ಷ ಬಿ.ಹೆಚ್. ವೀರಭದ್ರಪ್ಪ, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಸ್. ಮಲ್ಲಿಕಾರ್ಜುನ್, ಮಹಾನಗರ ಪಾಲಿಕೆ ಸದಸ್ಯರುಗಳಾದ ಜಿ.ಡಿ. ಪ್ರಕಾಶ್, ಎಲ್.ಡಿ. ಗೋಣೆಪ್ಪ, ಶ್ರೀಮತಿ ಸುಧಾ ಇಟ್ಟಿಗುಡಿ ಮಂಜುನಾಥ್, ಉದಯಕುಮಾರ್, ಎನ್. ನೀಲಗಿರಿಯಪ್ಪ, ಟಿ. ರಮೇಶ್, ಬಿ.ಎಂ. ರಾಮಸ್ವಾಮಿ, ಯುವ ಕಾಂಗ್ರೆಸ್‌ನ ಸಾಗರ್, ಮಾಜಿ ಮೇಯರ್ ಹೆಚ್.ಬಿ. ಗೋಣೆಪ್ಪ, ಸಾಲುಮನಿ ಬಸವರಾಜ್, ಎಂ. ಮಂಜುನಾಥ್, ಜಮ್ನಳ್ಳಿ ನಾಗರಾಜ್, ಡಿ. ಎಸ್. ಸುರೇಶ್, ಇಟ್ಟಿಗುಡಿ ಮಂಜುನಾಥ್, ಆರ್. ವಾಸುದೇವ್, ವಿಜಯಕುಮಾರ್, ಅಣ್ಣಪ್ಪ, ಮಂಜಮ್ಮ, ಬಾಲಾಜಿ, ಸೇರಿದಂತೆ ಇತರರು ಉಪಸ್ಥಿತರಿದ್ದರು.


## ಯುನಿಟಿ ಹೆಲ್ತ್ ಸೆಂಟರ್

5ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ.



### ಮತದಾನ ಜಾಗೃತಿ ವೈದ್ಯಕೀಯ ಶಿಬಿರ

ದಿನಾಂಕ 07-05-2024ರ ಮಂಗಳವಾರದಂದು ಮತದಾನ ಮಾಡಿ ಬೆರಳಿನ ಶಾಹಿ ಗುರುತನ್ನು ತೋರಿಸಿದವರಿಗೆ ಈ ಕೆಳಕಂಡ ವೈದ್ಯಕೀಯ ಸೌಲಭ್ಯಗಳನ್ನು ರಿಯಾಯಿತಿ ದರದಲ್ಲಿ ಕೊಡಲಾಗುವುದು.

1) ಒ.ಪಿ.ಡಿ. (ಹೊರ ರೋಗಿಗಳಿಗೆ) ರೂ. 50/-
2) ಲ್ಯಾಬೋರೇಟರಿ ಪರೀಕ್ಷೆಗಳಿಗೆ 50% ರಿಯಾಯಿತಿ
3) ಇ.ಸಿ.ಜಿ. ರೂ. 50/-
4) ಅಲ್ಟ್ರಾಸೌಂಡ್ 10% ರಿಯಾಯಿತಿ
5) ಎಂ.ಆರ್.ಐ. ಮತ್ತು ಸಿ.ಟಿ. ಸ್ಕ್ಯಾನ್ 10% ರಿಯಾಯಿತಿ

ಈ ಮೇಲ್ಕಂಡ ದರಗಳು ಮೊದಲು ಬಂದ 100 ರೋಗಿಗಳಿಗೆ ಮಾತ್ರ.

*NOTHING IN THIS COUNTRY IS FREE. IF YOU ARE GETTING SOMETHING WITHOUT PAYING FOR IT, THANK A TAXPAYER. NOT TO ANY POLITICAL PARTY*

*ದಿನಾಂಕ 07-05-2024ರಂದು ನಡೆಯುವ ಲೋಕಸಭಾ ಚುನಾವಣೆಯಲ್ಲಿ ನಿಮ್ಮ ಅಮೂಲ್ಯವಾದ ಮತವನ್ನು ತಪ್ಪದೇ ಚಲಾಯಿಸಿ.*

ಡಾ|| ಬಿ.ಎಸ್. ನಾಗಪ್ರಕಾಶ್ ಡಾ|| ಬಿ.ಎನ್. ಅಭಿಷೇಕ್

## ಬಾಷಾ ನಗರದಲ್ಲಿ ಪ್ರಭಾ ಪರ ಪ್ರಚಾರ



ದಾವಣಗೆರೆ, ಮೇ 5 - ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರ ಪರ ಅಖಿಲ ಭಾರತ ರಾಷ್ಟ್ರೀಯ ಯುವ ಕಾಂಗ್ರೆಸ್‌ನ ಕಾರ್ಯದರ್ಶಿ ಸೈಯದ್ ಖಾಲಿದ್ ಅಹ್ಮದ್ ಅವರು ವಾರ್ಡ್ ನಂಬರ್ 4 ರ ಮಿಲ್ಲತ್ ಕಾಲೋನಿ, ಬಾಷಾ ನಗರದಲ್ಲಿ ಪ್ರಚಾರ ನಡೆಸಿದರು. ಈ ವೇಳೆ ಕಾಂಗ್ರೆಸ್ ಯುವ ಮುಖಂಡರಾದ ಸೈಯದ್ ಅಲ್ತಾಫ್, ಸೈಯದ್ ಇರ್ಫಾನ್, ಸಂತೋಷ್, ವಾಜಿದ್, ದಿಲ್ಶಾದ್, ಫಜ್ಲು, ಸೈಯದ್ ತಾಜ್ ಮತ್ತಿತರರು ಹಾಜರಿದ್ದರು.

## ಬಿಜೆಪಿಯಿಂದ ಭೋವಿ ಸಮಾಜಕ್ಕೆ ಅನ್ಯಾಯ : ಜಯಣ್ಣ

ದಾವಣಗೆರೆ, ಮೇ 5- ಭೋವಿ ಸಮಾಜಕ್ಕೆ ಬಿಜೆಪಿ ಸರ್ಕಾರದಿಂದ ಅನ್ಯಾಯವಾಗಿದೆ. ಆದ್ದರಿಂದ ಭೋವಿ ಸಮಾಜದವರೆಲ್ಲರೂ ಕಾಂಗ್ರೆಸ್ ಪಕ್ಷಕ್ಕೆ ಮತ ಹಾಕುವಂತೆ ಸಮಾಜದ ಜಿಲ್ಲಾಧ್ಯಕ್ಷ ಎಚ್. ಜಯಣ್ಣ ಕರೆ ನೀಡಿದರು.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 2008ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯ 110 ಜನ ಶಾಸಕರಾಗಿದ್ದರು. ಆ ವೇಳೆ ಭೋವಿ ಸಮಾಜದ 4 ಜನ ಪಕ್ಷೇತರ ಶಾಸಕರ ಬೆಂಬಲದಿಂದ ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪನವರು ಕೆಲವು ದಿನದ ನಂತರ ಅನ್ಯಪಕ್ಷದ ಶಾಸಕರನ್ನು ಬಿಜೆಪಿಗೆ ಸೇರಿಸಿಕೊಂಡು, ನಮ್ಮ ಸಮಾಜದ ಶಾಸಕರನ್ನು ಮಂತ್ರಿ ಮಂಡಲದಿಂದ ವಜಾಗೊಳಿಸಿ ಸಮಾಜಕ್ಕೆ ಅನ್ಯಾಯ ಮಾಡಿದ್ದಾರೆ ಎಂದು ದೂರಿದರು.

ವಯೋಮಿತಿ ಆಧಾರದಲ್ಲಿ ಯಡಿಯೂರಪ್ಪನವರು ನಿವೃತ್ತಿಯಾದ ತರುವಾಯ ಮುಖ್ಯಮಂತ್ರಿ ಸ್ಥಾನಕ್ಕೆ ಅರವಿಂದ ಲಿಂಬಾವಳಿ ಹೆಸರೇ ಮುಂಚೂಣಿಯಲ್ಲಿತ್ತು. ಆದರೆ ಅವರನ್ನು ರಾಜ್ಯಾಧ್ಯಕ್ಷರನ್ನಾಗಿಸಿ ಬಸವರಾಜ ಬೊಮ್ಮಾಯಿ ಅವರಿಗೆ ಮುಖ್ಯಮಂತ್ರಿ ಮಾಡಿದ್ದರಿಂದ ಸಮಾಜಕ್ಕೆ ನೋವಾಗಿದೆ ಎಂದರು.

ಸಿದ್ದರಾಮಯ್ಯನವರ ಸರ್ಕಾರ ನಮ್ಮ ಸಮಾಜದ ನಾಯಕರಿಗೆ ಮಂತ್ರಿಮಂಡಲದಲ್ಲಿ ಸ್ಥಾನ ಕಲ್ಪಿಸಿ ಸಮಾಜಕ್ಕೆ ನ್ಯಾಯ ಒದಗಿಸಿದೆ ಎಂದು ಹೇಳಿದರು. ಬಿಜೆಪಿ ಪಕ್ಷವು ಭೋವಿ ಸಮಾಜಕ್ಕೆ ಅನ್ಯಾಯ ಮಾಡುತ್ತಾ ಬಂದಿದೆ. ಆದ್ದರಿಂದ ಸಮಾಜದವರು ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಅವರನ್ನು ಬೆಂಬಲಿಸಿ ಗೆಲ್ಲಿಸೋಣ ಎಂದು ಮನವಿ ಮಾಡಿದರು.

ಸಮಾಜದ ಪ್ರಧಾನ ಕಾರ್ಯದರ್ಶಿ ಜಿ.ಸಿ. ಮಂಜಪ್ಪ, ಕಾರ್ಯಾಧ್ಯಕ್ಷ ವಿ. ಗೋಪಾಲ್, ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಉಮಾ ಕುಮಾರಿ, ಅರ್ಜುನ್, ಶಿವಾನಂದ ಸುದ್ದಿಗೋಷ್ಠಿಯಲ್ಲಿದ್ದರು.

## ಶ್ಯಾವಿಗೆ ಅನಿತಾ ಕಾಂಗ್ರೆಸ್ ಸೇರ್ಪಡೆ



ಮಲೇಬೆನ್ನೂರು, ಮೇ 5- ಪಟ್ಟಣದ ಪುರಸಭೆ ಚುನಾವಣೆಯಲ್ಲಿ 2 ಬಾರಿ ಜೆಡಿಎಸ್‌ನಿಂದ ಸ್ಪರ್ಧಿಸಿ ಪರಾಭವನಗೊಂಡಿದ್ದ ಶ್ಯಾವಿಗೆ ಅನಿತಾ ಅವರು, ಗುರುವಾರ ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಸಮ್ಮುಖದಲ್ಲಿ ಜೆಡಿಎಸ್ ತೊರೆದು ಕಾಂಗ್ರೆಸ್ ಸೇರ್ಪಡೆಯಾದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ.ಅಬೀದ್ ಅಲಿ, ಎಂ.ಬಿ.ಫೈಜು, ಪುರಸಭೆ ಸದಸ್ಯರಾದ ನಯಾಜ್, ಭೋವಿ ಶಿವು, ದಾದಾಪೀರ್, ಪಿ.ಆರ್.ರಾಜು, ಎ. ಕೆ.ಲೋಕೇಶ್, ಎ.ಕೆ.ಪ್ರಕಾಶ್ ಮತ್ತಿತರರು ಈ ವೇಳೆ ಹಾಜರಿದ್ದರು.

## ಜಿಲ್ಲೆ ಅಭಿವೃದ್ಧಿಯೇ ನನ್ನ ಗ್ಯಾರಂಟಿ

**(3ನೇ ಪುಟದಿಂದ)** ವರ್ಷಗಳ ಕಾಲ ಸೇವೆ ಮಾಡಬೇಕೆಂದುಕೊಂಡಿದ್ದೇನೆ ಎಂದು ಹೇಳಿದರು. ಎಲ್ಲಾ ಕಡೆ ಹೊಸ ನಾಯಕತ್ವ ಬರಬೇಕು ಎಂಬ ಮಹತ್ವಾಕಾಂಕ್ಷೆ ಹೊಂದಿದ್ದೇನೆ. ಈಗಲೂ ದಾವಣಗೆರೆ ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿಯೂ ಅಸಮಾನತೆ ತಾಂಡವವಾಡುತ್ತಿದೆ. ಎರಡೇ ಕುಟುಂಬಗಳಿಗೆ ಅಧಿಕಾರ ಸೀಮಿತವಾದರೆ ಪ್ರಜಾಪ್ರಭುತ್ವ, ಅಭಿವೃದ್ಧಿಗೂ ಒಳ್ಳೆಯದಲ್ಲ. ನನ್ನ ಹೋರಾಟ ಜನರಿಗೋಸ್ಕರ ಎಂದು ತಿಳಿಸಿದರು.

## ಆಂಧ್ರ ಪೊಲೀಸ್ ಮುಖ್ಯಸ್ಥರ ವರ್ಗಾವಣೆಗೆ ಚುನಾವಣಾ ಆಯೋಗದ ಆದೇಶ

ನವದೆಹಲಿ, ಮೇ 5 - ಆಂಧ್ರ ಪ್ರದೇಶ ಪೊಲೀಸ್ ಮುಖ್ಯಸ್ಥರಾದ ಕೆ.ವಿ. ರಾಜೇಂದ್ರನಾಥ ರೆಡ್ಡಿ ಅವರನ್ನು ತಕ್ಷಣವೇ ವರ್ಗಾವಣೆ ಮಾಡುವಂತೆ ಚುನಾವಣಾ ಆಯೋಗ ಆದೇಶಿಸಿದೆ.

ಪೊಲೀಸ್ ಮಹಾನಿರ್ದೇಶಕರ ಸ್ಥಾನಕ್ಕೆ ಸೂಕ್ತ ಮೂವರ ಹೆಸರು ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ಚುನಾವಣಾ ಆಯೋಗ ತಿಳಿಸಿದೆ.

ಆಂಧ್ರ ಪ್ರದೇಶದ 175 ವಿಧಾನಸಭೆ ಹಾಗೂ 25 ಲೋಕಸಭಾ ಸ್ಥಾನಗಳಿಗೆ ಮೇ 13ರಂದು ಏಕಕಾಲಕ್ಕೆ ಚುನಾವಣೆ ನಡೆಯಲಿದೆ.

## ಚೀಲೂರಿನಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪರ ಸಚಿವ ಎಸ್ಸೆಸ್ಸೆಂ ಪ್ರಚಾರ

ನ್ಯಾಮತಿ, ಮೇ 5 - ಚೀಲೂರು ಗ್ರಾಮದಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ದಾವಣಗೆರೆ ಲೋಕಸಭಾ ಕಾಂಗ್ರೆಸ್ ಅಭ್ಯರ್ಥಿ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರ ಗೆಲುವಿಗೆ ಎಲ್ಲರೂ ಶ್ರಮಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹೇಳಿದರು.

ಕಾಂಗ್ರೆಸ್ ಪಕ್ಷ ಜಾತ್ಯತೀತ ಪಕ್ಷವಾಗಿದೆ. ಡಾ.ಪ್ರಭಾ ಮಲ್ಲಿಕಾರ್ಜುನ್ ಸೇವಾ ಮನೋಭಾವನೆ ಹೊಂದಿದ್ದು, ಅವರನ್ನು ಲೋಕಸಭೆಗೆ ಆಯ್ಕೆ ಮಾಡುವ ಮೂಲಕ ಮತ್ತಷ್ಟು ಸೇವೆ ಮಾಡಲು ಅನುವು ಮಾಡಿಕೊಡಬೇಕು ಎಂದು ತಿಳಿಸಿದರು.

ಜಿ.ಪಂ. ಮಾಜಿ ಸದಸ್ಯ ದೊಡ್ಡೇರಿ ಡಿ.ಜಿ. ವಿಶ್ವನಾಥ್ ಮಾತನಾಡಿ, ಕಾಂಗ್ರೆಸ್ ಪಕ್ಷದ ದೀನ-ದಲಿತರ ಪರ ನಿಲುವಿಗೆ ಮನಸೋತು ನಮ್ಮ ಭಾಗದ ಅನೇಕ ಮುಖಂಡರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡಿದ್ದಾರೆ. ಅವರನ್ನು ಹೃತ್ಪೂರ್ವಕವಾಗಿ ಸ್ವಾಗತಿಸುವುದಾಗಿ ನುಡಿದರು.

ಚೀ. ಕಡದಕಟ್ಟೆ ಶೇಖರಪ್ಪ, ಕೆ.ಪಿ. ಸಿದ್ಧನಗೌಡ, ಸತೀಶ್‌ನಾಯ್ಕ, ಹೋಟೆಲ್ ಉಮೇಶ್, ಚೀಲೂರು ಗಿರೀಶ್, ರಮೇಶ್, ರಂಗನಾಥ್, ಶಿವರಾಜ್, ಮುಸ್ಸೇನಾಳ್ ಭೀಮಸೇನನಾಯ್ಕ, ಕೂಗೋನಹಳ್ಳಿ ಉಮೇಶ್ ಮತ್ತಿತರ ಅನೇಕ ಮುಖಂಡರು ಬಿಜೆಪಿ ತೊರೆದು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡರು.

ಶಾಸಕ ಡಿ.ಜಿ. ಶಾಂತನಗೌಡ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಚ್.ಬಿ. ಮಂಜಪ್ಪ ಸೇರಿದಂತೆ ಕಾಂಗ್ರೆಸ್ ಮುಖಂಡರು ಇದ್ದರು.



## ದೇಶದ ಉಳಿವಿಗಾಗಿ ಮೋದಿ ಪರಿವಾರ ಕೆಳಗಿಳಿಸಬೇಕು : ನಟ ಪ್ರಕಾಶ್ ರಾಜ್

### ರಾಣೇಬೆನ್ನೂರಿನಲ್ಲಿ ಕಾರ್ಮಿಕ ದಿನಾಚರಣೆ ಕಾರ್ಯಕ್ರಮ



ಹಾವೇರಿ, ಮೇ 5 - ಭಾರತ ದೇಶ ಕಳೆದ 10 ವರ್ಷಗಳಿಂದ ಆತಂಕವಾದಿಗಳ ಕೈಯಲ್ಲಿದೆ. ಮೋದಿ ಮತ್ತು ಅವರ ಪರಿವಾರವನ್ನು ಈ ಬಾರಿ ಕೆಳಗಿಳಿಸಲು ಎಲ್ಲಾ ರೈತ ಸಂಘಟನೆಗಳು, ಪ್ರಗತಿಪರ, ದಲಿತಪರ ಸಂಘಟನೆಗಳು, ಕಾರ್ಮಿಕ ಸಂಘಟನೆಗಳು ಒಂದಾಗಬೇಕೆಂದು ಖ್ಯಾತ ಬಹುಭಾಷಾ ನಟ, ದಿಟ್ಟ ನಿಲುವಿನ ಪ್ರಗತಿಪರ ಚಿಂತಕ ಪ್ರಕಾಶ್ ರಾಜ್ ಕರೆ ನೀಡಿದರು.

ಹಾವೇರಿಯ ಸಜ್ಜನ್ ಫಂಕ್ಷನ್ ಹಾಲ್‌ನಲ್ಲಿ ನಡೆದ ವಿಶ್ವದ 138 ನೇ ಅಂತರರಾಷ್ಟ್ರೀಯ ಕಾರ್ಮಿಕ ದಿನಾಚರಣೆಯ ನಿಮಿತ್ಯ ಅಖಿಲ ಭಾರತ ಕಾರ್ಮಿಕ ಸಂಘಗಳ ಒಕ್ಕೂಟ ಮತ್ತು ಎದ್ದೇಳು ಕರ್ನಾಟಕ ಹಾವೇರಿಯ ಜಿಲ್ಲಾ ಸಮಿತಿಯ ಸಹಯೋಗದಲ್ಲಿ ಏರ್ಪಡಿಸಿದ್ದ ಕಾರ್ಮಿಕ ಹಕ್ಕಗಳ ಹಕ್ಕೊತ್ತಾಯಕ್ಕಾಗಿ ಹಮ್ಮಿಕೊಂಡ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ರೈತಾಪಿ ವರ್ಗದವರನ್ನು ಸಂಪೂರ್ಣ ನೆಲಕಚ್ಚುವ ಸ್ಥಿತಿಗೆ ತಂದ ಕೀರ್ತಿ ಮಹಾನಾಯಕ ಮೋದಿಗೆ ಸಲ್ಲುತ್ತದೆ ಎಂದರು. ಅವರು ಅಂಗನವಾಡಿ, ಬಿಸಿಯೂಟ, ಗ್ರಾಮ ಪಂಚಾಯಿತಿ, ಸ್ತ್ರೀ ಶಕ್ತಿ ಒಕ್ಕೂಟಗಳ ನೌಕರರ, ಕಾರ್ಮಿಕರು, ರೈತರು, ದಲಿತಪರ, ಪ್ರಗತಿಪರ ಸಂಘಟನೆಗಳು ಸೇರಿದಂತೆ ಶ್ರಮಿಕ ವರ್ಗಗಳು ಚುನಾವಣೆಯಲ್ಲಿ ಯಾವುದೇ ಆಸೆ ಆಮಿಷಕ್ಕೆ ಒಳಗಾಗದೆ ಮೋದಿ ಮತ್ತು ಅವರ ಪರಿವಾರವನ್ನು ಅಧಿಕಾರದಿಂದ ಕೆಳಗಿಸಬೇಕೆಂದರು.

ಇದೇ ಸಂದರ್ಭದಲ್ಲಿ ಮಾತನಾಡಿದ ರೈತಪರ ಸಂಘಟನೆಗಳ ರವೀಂದ್ರಗೌಡ ಎಫ್. ಪಾಟೀಲ ಎ.ಎಂ ನಾಯಕ ಸಂವಿಧಾನ ವಿರೋಧಿ ಬಿಜೆಪಿ ಯನ್ನು ಅಧಿಕಾರದಿಂದ ಕೆಳಗಿಸಬೇಕೆಂದರು ಕರೆ ನೀಡಿ ಸಂಘಟನೆಗಳ ಪರವಾಗಿ ಪ್ರಕಾಶ ರಾಜ್‌ರವರಿಗೆ ಹಸಿರು ಶಾಲು ಹೊದಿಸಿ ಸತ್ಕರಿಸಿದರು. ಸಾಮಾಜಿಕ ಹೋರಾಟಗಾರಳಾದ ಅಕ್ಷತಾ ಕೆ.ಸಿ. ಎದ್ದೇಳು ಕರ್ನಾಟಕ ಚಳುವಳಿಯ ಸಂಸ್ಥಾಪಕ ಶ್ರೀನೂರ ಶ್ರೀಧರ್, ರೈತ ಮುಖಂಡ ಹನುಮಂತಪ್ಪ ಕಬ್ಬಾರ, ಎಸ್‌ಎಫ್‌ಐ ಮುಖಂಡ ಬಸವರಾಜ ಬೋವಿ, ವಕೀಲರಾದ ಬಸವರಾಜ ಹಾದಿಮನಿ ಮುಂತಾದವರು ಭಾಗವಹಿಸಿದ್ದರು. ಸಾವಿರಕ್ಕೂ ಹೆಚ್ಚು ಮಹಿಳೆಯರು ಪಾಲ್ಗೊಂಡಿದ್ದು ವಿಶೇಷವಾಗಿತ್ತು.

ಹಾವೇರಿ ಜಿಲ್ಲಾ ವಿವಿಧ ಒಕ್ಕೂಟಗಳ ಅಧ್ಯಕ್ಷ ಹೊನ್ನಪ್ಪ ಮರಿಯಮ್ಮನವರ ಅಧ್ಯಕ್ಷತೆ ವಹಿಸಿದ್ದರು.

## ಅಂಕಲಿಮಠದ ಶ್ರೀಗಳಿಂದ ಡಾ.ಪ್ರಭಾ ಅವರಿಗೆ ಆಶೀರ್ವಾದ



ದಾವಣಗೆರೆ, ಮೇ 5 - ರಾಯಚೂರು ಜಿಲ್ಲೆ, ಲಿಂಗಸೂರು ತಾಲ್ಲೂಕಿನ, ತಲೆಕಟ್ಟು ಗ್ರಾಮದ ಅಂಕಲಿ ಮಠದ ಅಂಕಲಿ ಶ್ರೀಗಳು ನಿನ್ನೆ ನಗರಕ್ಕೆ ಆಗಮಿಸಿದ ಸಂದರ್ಭದಲ್ಲಿ ದಾವಣಗೆರೆ ಲೋಕಸಭಾ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್‌ರವರ ನಿವಾಸದಲ್ಲಿ ಲೋಕಸಭೆ ಚುನಾವಣೆಯಲ್ಲಿ ಗೆಲ್ಲುವಂತೆ ಶಾಲು ಹೊದಿಸಿ, ಹೂವಿನ ಹಾರ ಅರ್ಪಿಸಿ, ಮಠದ ಪ್ರಸಾದ ನೀಡಿ ಆಶೀರ್ವದಿಸಿದರು.

ಈ ಸಂದರ್ಭದಲ್ಲಿ ಕೆ.ಟಿ.ಜೆ. ನಗರದ ಗಾಂಧೀಜಿ ಹರಿಜನ ಯುವಕ ಸಂಘದ ಪ್ರಧಾನ ಕಾರ್ಯದರ್ಶಿ ಹಾಗೂ ಕೆ.ಪಿ.ಸಿ.ಸಿ. ಎಸ್ಸಿ ವಿಭಾಗದ ಮಾಜಿ ಕಾರ್ಯದರ್ಶಿ ಸೋಮಲಾಪುರ ಹನುಮಂತಪ್ಪ, ಕಾಂಕ್ರೀಟ್ ಮಿಕ್ಸರ್ ಮಾಲೀಕ ನಾಗರಾಜ್, ಹನುಮಂತಪ್ಪ, ಕಾಂಗ್ರೆಸ್ ಮುಖಂಡ ಬಸಾಪುರದ ಹರೀಶ್ ಇನ್ನು ಮುಂತಾದ ಮಠದ ಭಕ್ತರು ಉಪಸ್ಥಿತರಿದ್ದರು.

## 2ನೇ ಹಂತದ ಪ್ರಚಾರಕ್ಕೆ ತೆರೆ

**(3ನೇ ಪುಟದಿಂದ)** ತಾಪಮಾನ ತೀವ್ರವಾಗುತ್ತಿರುವ ಹಿನ್ನೆಲೆಯಲ್ಲಿ, ಚುನಾವಣೆಗಾಗಿ ವ್ಯಾಪಕ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಶಾಮಿಯಾನ, ಟೆಂಟ್, ಹೆಚ್ಚುವರಿ ಫ್ಯಾನ್ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗುತ್ತಿದೆ. ಚುನಾವಣಾ ಬೂತ್ ಪಕ್ಕದಲ್ಲಿನ ಕೋಣೆಗಳನ್ನು ಸರದಿ ಕೋಣೆಗಳಾಗಿ ಬಳಸಲು ನಿರ್ಧರಿಸಲಾಗಿದೆ.

ಮೊದಲ ಹಂತದಲ್ಲಿ ಶೇ.69.56ರಷ್ಟು ಮತದಾನವಾಗಿತ್ತು.

## ಪ್ರಜ್ವಲ್ ಪ್ರಕರಣ : ಸಂತ್ರಸ್ತೆಯರಿಗೆ ನೆರವು

**(3ನೇ ಪುಟದಿಂದ)** ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಆರೋಪಿ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಆಗ್ರಹಿಸಿದ್ದಾರೆ ಎಂದರು.

ನೂರಾರು ಸಂಖ್ಯೆಯಲ್ಲಿರುವ ಅತ್ಯಾಚಾರ ಸಂತ್ರಸ್ತೆಯರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಣಕಾಸು ನೆರವು ಘೋಷಿಸಿದ್ದಾರೆ. ಈ ರೀತಿಯ ಅತ್ಯಾಚಾರ ಕೃತ್ಯ ಕಳೆದ 75 ವರ್ಷಗಳಲ್ಲೇ ಎಂದೂ ನಡೆದಿರಲಿಲ್ಲ ಎಂದೂ ಸುರ್ಜೇವಾಲಾ ಹೇಳಿದರು.

## ಸಮಾಜದ ಶಾಂತಿ-ನೆಮ್ಮದಿಗಾಗಿ ಕಾಂಗ್ರೆಸ್ ಗೆಲ್ಲಿಸಲು ಡಿಬಿ ಕರೆ



ದಾವಣಗೆರೆ, ಮೇ 5 - ಲೋಕಸಭಾ ಕ್ಷೇತ್ರದ ಸಮಗ್ರ ಅಭಿವೃದ್ಧಿ ಮತ್ತು ಸಮಾಜದ ಜನರ ಶಾಂತಿ ನೆಮ್ಮದಿಗಾಗಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರನ್ನು ಗೆಲ್ಲಿಸಿ ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ. ಬಸವರಾಜ್ ಮನವಿ ಮಾಡಿದರು.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಕಾಂಗ್ರೆಸ್ ಪಕ್ಷದಿಂದ ಜಿಲ್ಲೆಯಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯ ಮಾಡಿದ್ದಾರೆ ಎಂದು ಸ್ಮರಿಸಿದರು.

ಪಕ್ಷದ ಸಹಾಯದಿಂದ ಬಡವರಿಗೆ 16 ಸಾವಿರ ಆರ್‌ಸಿಸಿ ಮನೆ, ಕುಡಿಯುವ ನೀರಿಗಾಗಿ ಟಿವಿ ಸ್ಟೇಷನ್ ಕೆರೆ ಮತ್ತು ಕುಂದವಾಡ ಕೆರೆ ನಿರ್ಮಿಸಿ ಜನರ ದಾಹ ತಣಿಸಿದ್ದಾರೆ. ಆದ್ದರಿಂದ ಅಭಿವೃದ್ಧಿ ಕಾಳಜಿ ಹೊಂದಿದ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರನ್ನು ಗೆಲ್ಲಿಸಬೇಕು ಎಂದು ಹೇಳಿದರು.

ಡಾ. ಪ್ರಭಾ ಅವರು ಸಂಸದರಾದರೆ, ಜಿಲ್ಲೆಗೆ ಏರ್‌ಪೋರ್ಟ್, ಐಟಿ-ಬಿಟಿ ಕಂಪನಿಗಳನ್ನು ತರಲಿದ್ದು, ಇದರಿಂದ ಈ ಭಾಗದ ಯುವಕರ ನಿರುದ್ಯೋಗ ಸಮಸ್ಯೆ ನಿವಾರಣೆಯಾಗಲಿದೆ ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಜಿ. ಶಿವಕುಮಾರ್, ಕಾಂಗ್ರೆಸ್ ಇಂಟಕ್ ಜಿಲ್ಲಾಧ್ಯಕ್ಷ ಕೆ.ಎಂ. ಮಂಜುನಾಥ್, ಎಸ್.ಎಂ. ಜಯಪ್ರಕಾಶ್, ಎಚ್. ಮಂಜುನಾಥ್, ಗೊಲ್ಲರಹಳ್ಳಿ ಚೌಡಪ್ಪ, ಅಲ್ಲಾವಲಿ ಮುಜಾಹಿದ್, ಡಿ. ಶಿವಕುಮಾರ್, ಬಿ.ಎಸ್. ಸುರೇಶ್, ಗಿರಿಧರ್, ಎಸ್. ಹನುಮಂತಪ್ಪ, ಗೋಪಾಲ್, ಎಚ್. ಗಣೇಶ್, ಗೋವಿಂದ, ನವೀನ್, ಮುಬಾರಕ್ ಗೋಷ್ಠಿಯಲ್ಲಿದ್ದರು.

## ಮೇ 8ರವರೆಗೆ ರೇವಣ್ಣ ಕಸ್ಟಡಿಗೆ

**(3ನೇ ಪುಟದಿಂದ)** ಸಂತ್ರಸ್ತೆಯರು ಕಾನೂನು ನೆರವು, ರಕ್ಷಣೆ, ದೂರು ಪಡೆಯಲು ಸಹಾಯವಾಣಿಯನ್ನು ತೆರೆಯಲಾಗಿದೆ. ಇನ್ನೂ ಮೂವರು ಸಂತ್ರಸ್ತೆಯರು ಎಸ್.ಐ.ಟಿ. ಸಂಪರ್ಕಿಸಿದ್ದಾರೆ ಎಂದು ಹೇಳಲಾಗುತ್ತಿದೆ.

## ಜಿಲ್ಲಾ ಕೊರಮ ಸಮಾಜದಿಂದ ಕಾಂಗ್ರೆಸ್ ಅಭ್ಯರ್ಥಿಗೆ ಬೆಂಬಲ



ದಾವಣಗೆರೆ, ಮೇ 5 - ಜಿಲ್ಲಾ ಕೊರಮ ಸಮಾಜದ ವತಿಯಿಂದ ಇಂದು ನಡೆದ ಸಭೆಯಲ್ಲಿ ಕಾಂಗ್ರೆಸ್ ಪಕ್ಷದ ಲೋಕಸಭಾ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಬೆಂಬಲ ಸೂಚಿಸಲಾಯಿತು. ಸಭೆಯಲ್ಲಿ ಸಂಘದ ಅಧ್ಯಕ್ಷ ಕೆ.ಆರ್. ಗಂಗರಾಜು, ಕಾರ್ಯದರ್ಶಿ ಕೃಷ್ಣಪ್ಪ, ಗೌರವಾಧ್ಯಕ್ಷ ಹೊಸಳ್ಳಿ ದ್ಯಾಮಣ್ಣ ಮತ್ತು ಸಂಘದ ಪದಾಧಿಕಾರಿಗಳು ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಸದಸ್ಯ ಸೈಯದ್ ಚಾರ್ಲಿ ಹಾಗೂ ಮುಸ್ಲಿಂ ಸಮಾಜದ ಮಾಜಿ ಅಧ್ಯಕ್ಷ ಮುಸ್ತಾಕ್ ಅಹಮದ್ ಉಪಸ್ಥಿತರಿದ್ದರು.

## ಪ್ರಜಾಪರಿವರ್ತನಾ ವೇದಿಕೆಯಿಂದ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಬೆಂಬಲ



ಹೊನ್ನಾಳಿ, ಮೇ 5 - ಪ್ರಜಾಪರಿವರ್ತನಾ ವೇದಿಕೆ ಜಿಲ್ಲಾ ಸಮಿತಿ ವತಿಯಿಂದ ಕಾಂಗ್ರೆಸ್ ಅಭ್ಯರ್ಥಿ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರನ್ನು ಬೆಂಬಲಿಸಿ ಅವರ ಗೆಲುವಿಗೆ ವೇದಿಕೆಯ ಕಾರ್ಯಕರ್ತರುಗಳು, ಮುಖಂಡರುಗಳು ಸಹಕಾರ ನೀಡಬೇಕಾಗಿ ಪ್ರಜಾಪರಿವರ್ತನಾ ವೇದಿಕೆಯ ರಾಜ್ಯ ಕಾರ್ಯಾಧ್ಯಕ್ಷ ಎ.ಡಿ.ಈಶ್ವರಪ್ಪ ಮತ್ತು ಜಿಲ್ಲಾಧ್ಯಕ್ಷ ಎಚ್.ಕೆ.ಕೃಷ್ಣ ಅರಕೆರೆ ಜಂಟಿ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.ಜಿಲ್ಲಾದ್ಯಂತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತರು ಮತ್ತು ಇತರೆ ಹಿಂದುಳಿದ ವರ್ಗಗಳ ಜನರು ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗೆ ಮತ ಹಾಕುವುದರ ಮೂಲಕ ಒಗ್ಗಟ್ಟನ್ನು ಪ್ರದರ್ಶಿಸುವಂತೆ ಕರೆ ನೀಡಿದರು.

## ಸಾಧನೆ ತೋರಿಸಿದರೆ ರಾಜಕೀಯದಿಂದ ನಿವೃತ್ತಿ : ಸಿಎಂ

**(3ನೇ ಪುಟದಿಂದ)** ತಿಳಿಸಿದರು.

**ಶಿಸ್ತಿನ ಸಿಪಾಯಿ:** ಶಾಸಕ ಡಿ.ಜಿ.ಶಾಂತನಗೌಡ ಅವರು ಪಕ್ಷದ ನಿಷ್ಠಾವಂತ ಶಾಸಕರಾಗಿದ್ದು ತಮಗೆ ಇಂತದ್ದೇ ಸ್ಥಾನ-ಮಾನ ಬೇಕೆಂದು ಎಂದಿಗೂ ಕಿರಿ-ಕಿರಿ ಮಾಡಿಲ್ಲ, ಹಾಗೆಯೇ ಪಕ್ಷದ ಶಿಸ್ತನ್ನು, ಹೇಳಿದ ಕೆಲಸವನ್ನು ಚಾಚೂ ತಪ್ಪದೇ ಪಾಲಿಸುತ್ತಾರೆ ಎಂದು ಬಣ್ಣಿಸಿದರು. ಮುಂದಿನ ದಿನಗಳಲ್ಲಿ ಅವರಿಗೆ ನಿಗಮ ಮಂಡಳಿಯಲ್ಲಿ ಅವಕಾಶ ಕಲ್ಪಿಸುತ್ತೇನೆ ಎಂದು ಘೋಷಿಸಿದರು.

**ವಿನಯ್ ಬೆಂಬಲಿಸಬೇಡಿ;** ಕುರುಬ ಸಮಾಜದವರು ರಾಜ್ಯದಲ್ಲಿ 7% ಜನಸಂಖ್ಯೆ ಹೊಂದಿದ್ದರೂ ಪಕ್ಷವು ಇಬ್ಬರಿಗೆ ಲೋಕಸಭೆಯಲ್ಲಿ ಅವಕಾಶ ನೀಡಿದೆ. ಆದರೆ ಬಿಜೆಪಿ ಪಕ್ಷವು ಒಬ್ಬರಿಗೂ ಅವಕಾಶ ನೀಡಿಲ್ಲ. ಇಂತಹದರಲ್ಲಿ ಜಾತಿಯ ಹೆಸರೇಳಿಕೊಂಡು ಪಕ್ಷೇತರ ಅಭ್ಯರ್ಥಿಯಾಗಿ ಚುನಾವಣೆಗೆ ನಿಂತಿರುವ ವಿನಯ್ ಕುಮಾರ್ ಅವರನ್ನು ದುಡ್ಡು ಕೊಟ್ಟು ಬಿಜೆಪಿ ಪಕ್ಷದವರು ಚುನಾವಣೆಗೆ ನಿಲ್ಲಿಸಿದ್ದು, ನೀವೇನಾದರೂ ವಿನಯ್‌ಕುಮಾರ್ ಅವರಿಗೆ ಮತ ಹಾಕಿದರೆ ಬಿಜೆಪಿ ಪಕ್ಷಕ್ಕೆ ಬೆಂಬಲಿಸಿದಂತಾಗುತ್ತದೆ ಎಂದು ಅವರು ಸ್ಪಷ್ಟಪಡಿಸಿದರು.

**ರಾಜೀನಾಮೆ :** ಮೋದಿಯವರು ತಮ್ಮ 10 ವರ್ಷಗಳ ಅವಧಿಯಲ್ಲಿ ಗುರುತರವಾದ 10 ಸಾಧನೆಗಳನ್ನು ಹೇಳಿದರೆ ನಾನು ರಾಜಕೀಯದಿಂದ ನಿವೃತ್ತಿ ಪಡೆಯುತ್ತೇನೆ ಎಂದು ಸವಾಲ್ ಹಾಕಿದರು.

ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರು ಮಾತನಾಡಿ, ಚುನಾವಣೆ ಇನ್ನೆರಡು ದಿನ ಮಾತ್ರವಿದ್ದು ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರುಗಳು ಒಗ್ಗಟ್ಟಾಗಿ ಕೆಲಸ ಮಾಡಿ ಬೂತ್ ಮಟ್ಟದಿಂದಲೂ ನಮ್ಮ ಅಭ್ಯರ್ಥಿಗೆ ಮತ ಹಾಕಿಸುವುದರ ಮೂಲಕ ನಿಮ್ಮ ತಾಲ್ಲೂಕುಗಳಿಂದ ಹೆಚ್ಚಿನ ಮತಗಳನ್ನು ಹಾಕಿಸಿ ಗೆಲುವಿಗೆ ಕಾರಣರಾಗಬೇಕು ಎಂದು ವಿನಂತಿಸಿದರು.

ಡಾ. ಪ್ರಭಾ ಮಲ್ಲಿಕಾರ್ಜುನ್ ಗೆಲುವು ಸಾಧಿಸಿದರೆ ಶಿವಮೊಗ್ಗ-ಹರಿಹರ ರೈಲ್ವೆ ಯೋಜನೆ, ಚೀಲೂರು-ರಾಂಪುರ-ಗೋವಿನಕೋವಿ ನಡುವೆ ಸೇತುವೆ ನಿರ್ಮಾಣ, ಕೆರೆಗಳಿಗೆ ನೀರು ತುಂಬಿಸುವ ನೀರಾವರಿ ಯೋಜನೆಗಳು ಸೇರಿದಂತೆ ಅಭಿವೃದ್ಧಿ ಕಾಮಗಾರಿಗಳಿಗೆ ವಿಶೇಷ ಒತ್ತನ್ನು ನೀಡಲಾಗುವುದು ಎಂದು ಭರವಸೆ ನೀಡಿದರು.

ಶಾಸಕ ಡಿ.ಜಿ.ಶಾಂತನಗೌಡ ಮಾತನಾಡಿ, ರಾಜ್ಯದ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಡೆಯವರು ಮುಕ್ತ ಕಂಠದಿಂದ ಶ್ಲಾಘಿಸಿದ್ದಾರೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬರಗಾಲವಿರುವ ಪ್ರಯುಕ್ತ ಕುಡಿಯುವ ನೀರಿಗೆ ಸಮಸ್ಯೆಯುಂಟಾಗಬಾರದೆಂದು ಕೋಟಿಗಟ್ಟಲೇ ಅನುದಾನ ಬಿಡುಗಡೆ ಮಾಡಿದ್ದಾರೆ. ನ್ಯಾಮತಿ ತಾಲ್ಲೂಕು ಶೇ. 97 ಮತ್ತು ಹೊನ್ನಾಳಿ ತಾಲ್ಲೂಕಿನಲ್ಲಿ ಶೇ.98 ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳಿದ್ದಾರೆ. ಸಮಸ್ಯೆಯಿದ್ದವುಗಳನ್ನು ನಮ್ಮ ತಂಡವು ಮನೆ-ಮನೆಗೂ ಭೇಟಿ ನೀಡಿ ಸಮಸ್ಯೆ ಬಗೆಹರಿಸಿದೆ ಎಂದು ಮಾಹಿತಿ ನೀಡಿದರು.

ವಿಧಾನಸಭಾ ಚುನಾವಣೆಯಲ್ಲಿ ನನಗೆ 17819 ಮತಗಳನ್ನು ಹಾಕಿ ಗೆಲುವು ತಂದು ಕೊಟ್ಟಿದ್ದೀರಿ. ಅದೇ ತರಹ ನಮ್ಮ ಅಭ್ಯರ್ಥಿ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರಿಗೆ 25000 ಕ್ಕೂ ಹೆಚ್ಚು ಮತಗಳ ಅಂತರದಿಂದ ಗೆಲುವಿಗೆ ಕಾರಣರಾಗಬೇಕೆಂದು ಮನವಿ ಮಾಡಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಚ್.ಬಿ.ಮಂಜಪ್ಪ ಸ್ವಾಗತಿಸಿದರು. ಕಾಂಗ್ರೆಸ್ ಮುಖಂಡ ಬಿ.ಸಿದ್ದಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಎಚ್.ಎ.ಉಮಾಪತಿ ವಂದಿಸಿದರು.

ಈ ಸಂದರ್ಭದಲ್ಲಿ ಶಾಸಕ ಶ್ರೀನಿವಾಸ್, ಬಸವಂತಪ್ಪ, ವಿಧಾನಪರಿಷತ್ತಿನ ಮಾಜಿ ಸದಸ್ಯರಾದ ಆಯನೂರ್ ಮಂಜುನಾಥ್, ಆರ್. ಶಂಕರ್, ಮಾಜಿ ಶಾಸಕ ಡಾ.ಡಿ.ಬಿ.ಗಂಗಪ್ಪ, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಚ್. ಬಿ.ಶಿವಯೋಗಿ, ಆರ್.ನಾಗಪ್ಪ, ಡಿ.ಜಿ.ವಿಶ್ವನಾಥ್, ಮಹಿಳಾ ಘಟಕದ ಅಧ್ಯಕ್ಷೆಯರಾದ ವನಜಾಕ್ಷಮ್ಮ, ಪುಷ್ಪಾ, ಡಿ.ಡಿ.ಸಿ.ಸಿ.ಬ್ಯಾಂಕ್ ನಿರ್ದೇಶಕ ಡಿ.ಎಸ್. ಸುರೇಂದ್ರಗೌಡ, ಯುವ ಕಾಂಗ್ರೆಸ್ ಅಧ್ಯಕ್ಷ ಪ್ರಶಾಂತ್ ಬಣ್ಣಜ್ಜಿ, ಮುಖಂಡರುಗಳಾದ ಡಾ. ಈಶ್ವರ್ ನಾಯ್ಕ್, ಎಚ್.ಎ.ಗದ್ದಿಗೇಶ್, ಸಣ್ಣಕ್ಕಿ ಬಸವನಗೌಡ, ಎ.ಆರ್.ಚಂದ್ರಶೇಖರಪ್ಪ, ನುಚ್ಚಿನ್ ವಾಗೀಶ್, ಸುರೇಶ್, ಜೀವೇಶಪ್ಪ, ವರದರಾಜ ಗೌಡ್ರು, ಎಚ್.ಬಿ.ಅಣ್ಣಪ್ಪ, ಎಚ್.ಡಿ.ವಿಜೇಂದ್ರಪ್ಪ, ವಸಂತನಾಯ್ಕ್, ಮಧುಗೌಡ, ಜಬ್ಬಾರ್ ಅಲಿ ಖಾನ್, ಮತ್ತಿತರರು ಉಪಸ್ಥಿತರಿದ್ದರು.

## ಮತದಾನ ಮಾಡಿ ಸೆಲ್ಫಿ ಕಳುಹಿಸಿ : ವಿಶೇಷ ಬಹುಮಾನ

**(3ನೇ ಪುಟದಿಂದ)** ತೋರಿಸುತ್ತಾ ಕನಿಷ್ಠ 20 ಜನರು ಗರಿಷ್ಠ 100 ಜನರು ಸೇರಿ ಸೆಲ್ಫಿ ತೆಗೆದು 9731016999 ಮೊಬೈಲ್‌ಗೆ ಕಳುಹಿಸಿ ಬಹುಮಾನ ಪಡೆಯಬಹುದೆಂದು ಜಿ.ಪಂ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಸ್ವೀಪ್ ಸಮಿತಿ ಅಧ್ಯಕ್ಷ ಸುರೇಶ್.ಬಿ.ಇಟ್ನಾಳ್ ತಿಳಿಸಿದ್ದಾರೆ. 100 ಕ್ಕಿಂತ ಹೆಚ್ಚು ಜನರು ಒಂದೇ ವೇದಿಕೆಯಲ್ಲಿ ನಿಂತು ಶಾಹಿ ಹಚ್ಚಿದ ತೋರು ಬೆರಳಿನೊಂದಿಗೆ ಸೆಲ್ಫಿ ತೆಗೆದು ಕಳುಹಿಸಿದಲ್ಲಿ ಇವರಿಗೆ ವಿಶೇಷ ಬಹುಮಾನ ನೀಡಲಾಗುತ್ತದೆ. ಕಳುಹಿಸಿದ ಸೆಲ್ಫಿಗಳಲ್ಲಿ ಆಕರ್ಷಕ ಫೋಟೋಗಳನ್ನು ಚುನಾವಣಾ ಆಯೋಗಕ್ಕೆ ಕಳುಹಿಸಿಕೊಡಲಾಗುತ್ತದೆ ಎಂದು ಅವರು ತಿಳಿಸಿದ್ದಾರೆ.

## ಕಾಂಗ್ರೆಸ್‌ಗೆ ಬಡವರ ಮೇಲೆ ನಾಟಕೀಯ ಪ್ರೀತಿ

**(3ನೇ ಪುಟದಿಂದ)** ಎಂದರು.

ಮೋದಿ ಜೀ ಅಧಿಕಾರಕ್ಕೆ ಬಂದ ಮೇಲೆ ಗೇಲ್ ಇಂಡಿಯಾ ಕಂಪನಿ, ಬಿ.ಹೆಚ್.ಇ.ಎಲ್, ಭಾರತ್ ಎಲೆಕ್ಟ್ರಾನಿಕ್ಸ್, ಕೋಲ್ ಇಂಡಿಯಾ, ಹಿಂದೂಸ್ತಾನ್ ಏರೋನಾ ಟಿಕ್ಸ್ ಸೇರಿದಂತೆ ಹಲವಾರು ಉದ್ದಿಮೆಗ ಳು ಲಾಭದತ್ತ ಮುಖ ಮಾಡಿವೆ. ಇದಕ್ಕೆ ಕಾರಣ ಮೋದಿ ಜೀ ಅಳವಡಿಸಿಕೊಂಡಿ ರು ವ ಆತ್ಮನಿರ್ಭರ ಭಾರತ ಯೋಜನೆ. ಈ ಯೋ ಜನೆ ಮೂಲಕ ಭಾರತ ಸ್ವಾವಲಂಬನೆಯ ತ್ತ ದಾಪುಗಾಲು ಇಡುತ್ತಿದೆ. ಭಾರತ ಈಗ ಸೆ ಮಿಕಂಡಕ್ಟರ್ ಉತ್ಪಾದನೆ ಬಗ್ಗೆ ಚಿಂತಿಸು ತ್ತಿದೆ. ಅಭಿವೃದ್ಧಿ ಅಂದರೆ ಇದಲ್ಲವೇ..? ಎಂದು ಕಾಂಗ್ರೆಸ್ಸಿಗರನ್ನು ಪ್ರಶ್ನಿಸಿದರು.

2004 ರಿಂದ 2014 ರವರೆಗಿನ ಯುಪಿಎ (ಕಾಂಗ್ರೆಸ್) ಆಡಳಿತಾವಧಿಯಲ್ಲಿ ಪ್ರತಿನಿತ್ಯ ದಿನ ಪತ್ರಿಕೆಗಳಲ್ಲಿ ಯಾವ ಯಾವ ಸುದ್ದಿಗಳು ಮುಖಪುಟದಲ್ಲಿ ಬರುತ್ತಿದ್ದವು ಎಂಬುದನ್ನು ನೆನಪು ಮಾಡಿಕೊಳ್ಳಿ. ಅಲ್ಲಿ ಬಾಂಬ್ ಬ್ಲಾಸ್ಟ್, ಇಲ್ಲಿ ಬಾಂಬ್ ಬ್ಲಾಸ್ಟ್, ಭ್ರಷ್ಟಾಚಾರ, ಸೈನಿಕರ ಮೇಲೆ ದಾಳಿ, ಭಯೋತ್ಪಾದಕರ ಅಟ್ಟಹಾಸ, ಕಾಮನ್ ವೆ ಲ್ತ್ ಹಗರಣ, ಕೋಲ್ ಹಗರಣ, ಸತ್ಯಂ ಹಗರಣ , ಐಪಿಎಲ್ ಹಗರಣ ಹೀಗೆ ಸಾಲು ಸಾಲು ಹಗರಣಗಳ ಸರಮಾಲೆಯೇ ಮುಖ ಪುಟಗಳಲ್ಲಿ ಸುದ್ದಿಯಾಗುತ್ತಿದ್ದವು. ಆದರೆ, ಮೋದಿ ಜೀ ಅಧಿಕಾರಕ್ಕೆ ಬಂದು 10 ವರ್ಷಗಳಲ್ಲಿ ಒಂದೇ ಒಂ ದು ಕಪ್ಪು ಚುಕ್ಕೆ ಇಲ್ಲದಂತೆ ಅಧಿಕಾರ ನಡೆ ಸಿದ್ದಾರೆ. ಈಗಿನ ದಿನಪತ್ರಿಕೆಗಳ ಮುಖ ಪುಟದಲ್ಲಿ ದೇಶದ ಅಭಿವೃದ್ಧಿ, ಆರ್ಥಿಕ ಚೇತರಿಕೆ ಸೇರಿದಂತೆ ಅನೇಕ ಯಶೋಗಾಥೆಗಳು ಪ್ರಕಟಗೊಳ್ಳುತ್ತಿವೆ. ಇದಕ್ಕೆಲ್ಲಾ ಮೋದಿ ಜೀ ಅವರ ದಿಟ್ಟ ನಾಯಕತ್ವ ಕಾರಣ ಎಂದರು ತಿಳಿಸಿದರು.

**ಅಭಿವೃದ್ಧಿಗೆ ಶಾಮನೂರು ಕುಟುಂಬ ಅಡ್ಡಿ :** ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪ್ರಚಾರ ನಡೆಸಿ ಮಾತನಾಡಿ, ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ, ದಾವಣಗೆರೆ ಲೋಕಸಭಾ ಕ್ಷೇತ್ರದ ಅಭಿವೃದ್ಧಿಗೆ ಶಾಮನೂರು ಕುಟುಂಬ ಅಡ್ಡಿಯಾಗಿದೆ ಎಂದು ಆರೋಪಿಸಿದರು. ದಾವಣಗೆರೆಗೆ ಅವಶ್ಯಕವಾಗಿರುವ ಸರ್ಕಾರಿ ಮೆಡಿಕಲ್ ಕಾಲೇಜು ಬಾರದಂತೆ ಶಾಮನೂರು ಕುಟುಂಬ ನೋಡಿಕೊಳ್ಳುತ್ತಿದೆ. ಸರ್ಕಾರಿ ಮೆಡಿಕಲ್ ಕಾಲೇಜು ದಾವಣಗೆರೆಗೆ ಬಂದರೆ ಚಿಗಟೇರಿ ಆಸ್ಪತ್ರೆಯಿಂದ ಅವರಿಗೆ ಸಿಗುತ್ತಿರುವ ಕೋಟ್ಯಾಂತರ ಆಮದಿಗೆ ಹೊಡೆತ ಬೀಳಲಿದೆ ಎಂಬ ಉದ್ದೇಶ ಶಾಮನೂರು ಫ್ಯಾಮಿಲಿಯದ್ದು.

ಚಿಗಟೇರಿ ಸಾರ್ವಜನಿಕ ಜಿಲ್ಲಾಸ್ಪತ್ರೆಗೆ ನಮ್ಮ ಸರ್ಕಾರ ಎಂ.ಆರ್.ಐ. ಸ್ಕ್ಯಾನಿಂಗ್ ಯಂತ್ರ ಮಂಜೂರು ಮಾಡಿದ್ದರೂ ಸಹ ಶಾಮನೂರು ಕುಟುಂಬ ಅದನ್ನು ವ್ಯವಸ್ಥಿತವಾಗಿ ತಡೆಯುವ ಕೆಲಸ ಮಾಡುತ್ತಿದೆ. ಅನೇಕ ಬಡ ರೋಗಿಗಳು ಎಂ.ಆರ್.ಐ. ಸ್ಕ್ಯಾನಿಂಗ್ ಗೆ ಚಿತ್ರದುರ್ಗದ ಆಸ್ಪತ್ರೆಗೆ ಓಡಾಡು ತ್ತಿದ್ದಾರೆ. ಶಾಮನೂರು ಕುಟುಂಬದವರಿಗೆ ಬಡವರ ಕಷ್ಟ ಹೇಗೆ ಅರ್ಥವಾದೀತು ? ಎಂದು ಪ್ರಶ್ನಿಸಿದರು.

ಎಂಎಲ್‌ಸಿ ರವಿಕುಮಾರ್, ರೈತ ಮೋರ್ಚಾ ರಾಜ್ಯ ಉಪಾಧ್ಯಕ್ಷ ಲೋಕಿಕೆರೆ ನಾಗರಾಜ್, ಬಿಜೆಪಿ ಪ್ರಧಾನ ಕಾರ್ಯದರ್ಶಿ ಬಿ.ಎಸ್. ಜಗದೀಶ್, ಮಾಜಿ ಮುಖ್ಯಸಚೇತಕ ಶಿವಯೋಗಿಸ್ವಾಮಿ, ಪಾಲಿಕೆ ಸದಸ್ಯ ಪ್ರಸನ್ನ ಕುಮಾರ್, ವೀಣಾ ನಂಜಪ್ಪ, ರೇಖಾ ಸುರೇಶ್ ಮತ್ತು ಇತರರು ಪ್ರಚಾರದಲ್ಲಿ ಭಾಗವಹಿಸಿದ್ದರು.

# ಪ್ರಜ್ವಲ್ ರೇವಣ್ಣ ವಿರುದ್ಧ ಬ್ಲೂ ಕಾರ್ನರ್ ನೋಟಿಸ್



ಬೆಂಗಳೂರು, ಮೇ 5 - ಸಂಸದ ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣಕ್ಕೆ ಸಂಬಂಧಿಸಿದಂತೆ ಬ್ಲೂ ಕಾರ್ನರ್ ನೋಟಿಸ್ ಹೊರಡಿಸಲಾಗಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ ತಿಳಿಸಿದ್ದಾರೆ.

ಇಂಟರ್‌ಪೋಲ್‌ನಿಂದ ಬ್ಲೂ ಕಾರ್ನರ್ ನೋಟಿಸ್ ಹೊರಡಿಸಲಾಗಿದೆ.

ಅಪರಾಧ ಪ್ರಕರಣಕ್ಕೆ ಸಂಬಂಧಿಸಿದಂತೆ ವ್ಯಕ್ತಿಗಳ ಮಾಹಿತಿ ಸಂಗ್ರಹಿಸಲು ಈ ನೋಟಿಸ್ ಹೊರಡಿಸಲಾಗುತ್ತದೆ. ಪ್ರಜ್ವಲ್ ವಾಪಸ್ ಕರೆ ತರುವ ಬಗ್ಗೆ ವಿಶೇಷ ತನಿಖಾ ತಂಡ ನಿರ್ಧಾರ ತೆಗೆದುಕೊಳ್ಳಲಿದೆ ಎಂದೂ ಅವರು ತಿಳಿಸಿದ್ದಾರೆ.


## ರವಿ ಜ್ಯೂಯಲರ್ಸ್

Gold | Diamond | Silver

Commitment to Purity & Quality

ಅಕ್ಷಯ ತೃತೀಯ ಮತ್ತು ಬಸವಜಯಂತಿ ಹಬ್ಬದ ಹಾರ್ದಿಕ ಶುಭಾಶಯಗಳು

ಬಂಗಾರದ ಆಭರಣ ಕೊಂಡಲ್ಲಿ ಬೆಳ್ಳಿ ನಾಣ್ಯ ಉಚಿತವಾಗಿ ಪಡೆಯಿರಿ

ಮುಂಗಡ ಬುಕ್ಕಿಂಗ್ ಪ್ರಾರಂಭವಾಗಿದೆ



ವಿಶ್ವಾಸದಿಂದ ಹೂಡಿ ಬಂಗಾರದಿಂದ ಲಾಭ ಗಳಿಸಿ...

16 ವರ್ಷಗಳಿಂದಲೂ ನಂಬಿಕಾರ್ಹ ಸೇವೆಯಲ್ಲಿ ಸರಿಸಾಟಿಯಿಲ್ಲದ ಆಯ್ಕೆ ಮತ್ತು ವಿನ್ಯಾಸಕ್ಕಾಗಿ.

### ರವಿ ಜ್ಯೂಯಲರ್ಸ್ ವೃದ್ಧಿ ಸುವರ್ಣ

### ಉಳಿತಾಯ ಯೋಜನೆ-2023

| ಯೋಜನೆ | ತಿಂಗಳು | ತಿಂಗಳು ಕಂತುಗಳು | ಬೋನಸ್ | ಒಟ್ಟು ಮೊತ್ತ |
|---|---|---|---|---|
| 1 | 11 | 11x500 = 5,500 | + 500 | 6,000/- |
| 2 | 11 | 11x1000 = 11,000 | + 1,000 | 12,000/- |
| 3 | 11 | 11x1500 = 16,500 | + 1,500 | 18,000/- |
| 4 | 11 | 11x2000 = 22,000 | + 2,000 | 24,000/- |
| 5 | 11 | 11x2500 = 27,500 | + 2,500 | 30,000/- |
| 6 | 11 | 11x3000 = 33,000 | + 3,000 | 36,000/- |
| 7 | 11 | 11x3500 = 38,500 | + 3,500 | 42,000/- |
| 8 | 11 | 11x4000 = 44,000 | + 4,000 | 48,000/- |
| 9 | 11 | 11x4500 = 49,500 | + 4,500 | 54,000/- |
| 10 | 11 | 11x5000 = 55,000 | + 4,990 | 59,990/- |

* ನಿಯಮ, ನಿಬಂಧನೆಗಳು ಅನ್ವಯ

ಮಂಡಿಪೇಟೆ, ದಾವಣಗೆರೆ-577001 99649 32113 | 8880889524

ravijewellersdvg@gmail.com


## ಎರಡನೇ ವರ್ಷದ ಪುಣ್ಯಸ್ಮರಣೆ



**ಶ್ರೀ ಅಣ್ಣಪ್ಪ ಎ.ಆರ್.**


ಸಹ ಪ್ರಾಧ್ಯಾಪಕರು, UBDT ಇಂಜಿನಿಯರಿಂಗ್ ಕಾಲೇಜು, ದಾವಣಗೆರೆ.

ನಿಧನ : 06-05-2022

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷ ಕಳೆದರೂ, ನಿಮ್ಮ ಪ್ರೀತಿ ಮತ್ತು ಆದರ್ಶಗಳನ್ನೇ ಮರೆಯಾಗುತ್ತಿಲ್ಲ. ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತಾ, ಪ್ರತಿ ಗಂಟೆಯಲ್ಲಿ ನಿನ್ನ ನೆನಪಿನಲ್ಲಿರುವ

**ನಿನ್ನ ತಾಯಿ ಮತ್ತು ಅಪಾರ ಬಂಧು-ಬಳಗದವರು**

## ನಿವೃತ್ತ ಡೆಪ್ಯೂಟಿ ತಹಶೀಲ್ದಾರ್ ಎನ್.ಎಂ. ಷಡಾಕ್ಷರಪ್ಪ ನಿಧನ



ದಾವಣಗೆರೆ ಎಂ.ಸಿ.ಸಿ. 'ಎ' ಬ್ಲಾಕ್ ಸಾಯಿಬಾಬಾ ದೇವಸ್ಥಾನ ಹಿಂಭಾಗದ 9ನೇ ಮುಖ್ಯ ರಸ್ತೆ ವಾಸಿ ನಿವೃತ್ತ ಡೆಪ್ಯೂಟಿ ತಹಶೀಲ್ದಾರ್

**ಎನ್.ಎಂ. ಷಡಾಕ್ಷರಪ್ಪ**

ಅವರು, ದಿನಾಂಕ 5.5.2024ರ ಭಾನುವಾರ ಸಂಜೆ 7ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 87 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಮೂವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 6.5.2024ರ ಸೋಮವಾರ ಮಧ್ಯಾಹ್ನ 2 ಗಂಟೆಗೆ ಗ್ಲಾಸ್ ಹೌಸ್ ಹತ್ತಿರದ ಶಾಮನೂರು ರುದ್ರಭೂಮಿಯಲ್ಲಿ ನೆರವೇರಲಿದೆ.

ದುಃಖತಪ್ತ ಕುಟುಂಬ ವರ್ಗದವರು

ಎನ್.ಎಸ್. ರೇಣುಕಾ ಪ್ರಸಾದ್ ಮೊ : 94488 39227

॥ ಶ್ರೀ ವೀರಭದ್ರೇಶ್ವರ ಪ್ರಸನ್ನ ॥

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ಕೂಡ್ಲಿಗಿ ತಾಲ್ಲೂಕು ಮರಬ ಗ್ರಾಮದ ದಾವಣಗೆರೆ ಆವರಗೆರೆ ವಾಸಿಗಳಾದ

**ಶ್ರೀಮತಿ ಸರೋಜಮ್ಮ ಬಿ. ಮತ್ತು ಮಕ್ಕಳು**

ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ 28.04.2024ನೇ ಭಾನುವಾರ ಬೆಳಿಗ್ಗೆ 5.30ಕ್ಕೆ ನಮ್ಮ ಪೂಜ್ಯ ಪತಿಯವರಾದ

**ಬಾವಿಕಟ್ಟೆ ಶ್ರೀ ಚಿಕ್ಕವೀರಪ್ಪನವರು**

ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆಯನ್ನು**

ದಿನಾಂಕ 06-05-2024ನೇ ಸೋಮವಾರ ಬೆಳಿಗ್ಗೆ 10.30ಕ್ಕೆ ದಾವಣಗೆರೆ, ಆವರಗೆರೆ ಕೆ.ಜಿ. ಹೊಂಡೈ ಶೋ ರೂಂ ಎದುರು, ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು : ಮೃತರ ಧರ್ಮಪತ್ನಿ ಶ್ರೀಮತಿ ಸರೋಜಮ್ಮ ಬಿ. ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಮೃತರ ಸಹೋದರರು, ಬಾವಿಕಟ್ಟೆ ವಂಶಸ್ಥರು ಮರಬ ಹಾಗೂ ಬಂಧು-ಮಿತ್ರರು. ಮೊ : 94482 37377, 99452 49088

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ತಪ್ಪದೇ ಆಗಮಿಸಬೇಕಾಗಿ ವಿನಂತಿ.


ನಂಜಪ್ಪ ಹಾಸ್ಪಿಟಲ್ಸ್ ದಾವಣಗೆರೆ

## ಅಮೂಲ್ಯ ಮತದಾನ, ರಾಷ್ಟ್ರದ ಪ್ರಗತಿಗೆ ಸೋಪಾನ



ಮತ ಚಲಾಯಿಸಿ,
ಗುರುತು ತೋರಿಸಿ,
ರಿಯಾಯಿತಿ ಪಡೆಯಿರಿ

ಮೇ 7 ರಿಂದ 14 ರವರೆಗೆ

25% ರಿಯಾಯಿತಿ ಲ್ಯಾಬ್ ಪರೀಕ್ಷೆಗಳ ಮೇಲೆ

15% ರಿಯಾಯಿತಿ ಇಸಿಜಿ, ಎಕೋ, ಸಿಟಿ ಹಾಗೂ ಅಲ್ಟ್ರಾಸೌಂಡ್ ಮೇಲೆ

*ಹೊರ ರೋಗಿಗಳ ಸೇವೆಗಳಿಗೆ ಮಾತ್ರ ಅನ್ವಯಿಸುತ್ತದೆ

ಮಾಗನೂರು ಬಸಪ್ಪ ರಸ್ತೆ, ತರಳಬಾಳು ಲೇಔಟ್, ದಾವಣಗೆರೆ 08192-260111



* ಶಿಕ್ಷಣ ಮಾರ್ಗ * ಉದ್ಯೋಗ ಮಾರ್ಗ * ಕೃಷಿ ಮಾರ್ಗ * ಜೀವನ ಮಾರ್ಗ

## ದಾವಣಗೆರೆ ಲೋಕಸಭಾ ಚುನಾವಣೆ - 2024

### ನಾವು ನಿಮ್ಮ ಜೊತೆಗಿದ್ದೇವೆ...



ಗ್ಯಾಸ್ ಸಿಲಿಂಡರ್

**ಆತ್ಮೀಯ ನನ್ನ ತಂದೆ-ತಾಯಿ, ಸಹೋದರ-ಸಹೋದರಿಯರೇ,**

ದಾವಣಗೆರೆ ತಾಲ್ಲೂಕಿನ ಕಕ್ಕರಗೊಳ್ಳ ಗ್ರಾಮದಲ್ಲಿ ಜನಿಸಿರುವ ನಾನು ಜೀವನದಲ್ಲಿ ಸಾಧಿಸುವ ಗುರಿಯನ್ನಿಟ್ಟುಕೊಂಡು ಹೊರಟವನು. ಒಂದೊಂದೇ ಹೆಜ್ಜೆಗಳನ್ನಿಡುತ್ತಾ, ಇನ್‌ಸೈಟ್ ಐ.ಎ.ಎಸ್. ಅಕಾಡೆಮಿಯನ್ನು ಸ್ಥಾಪಿಸಿ, ದೇಶದಲ್ಲಿ ಪ್ರತಿಷ್ಠಿತ ಸಂಸ್ಥೆಯಾಗಿ, ಲಕ್ಷಾಂತರ ವಿದ್ಯಾರ್ಥಿಗಳಿಗೆ ತರಬೇತಿಯನ್ನು ನೀಡಿ, ಸಾವಿರಾರು ಉನ್ನತ ಅಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.



**ದಿನಾಂಕ 07-05-2024ನೇ ಮಂಗಳವಾರದಂದು** ನಡೆಯಲಿರುವ ಪ್ರಜೆಗಳ ಪ್ರಜಾಪ್ರಭುತ್ವದ ಹಬ್ಬ ದಾವಣಗೆರೆ ಲೋಕಸಭಾ ಚುನಾವಣೆಯಲ್ಲಿ "ನಿಮ್ಮೆಲ್ಲರ ಧ್ವನಿಯಾಗಿ, ಪ್ರತಿನಿಧಿಯಾಗಿ ಪಕ್ಷೇತರ ಅಭ್ಯರ್ಥಿಯಾಗಿ" ಸ್ಪರ್ಧಿಸಿರುತ್ತೇನೆ

ಉತ್ತಮ ಶಿಕ್ಷಣ, ಉದ್ಯೋಗ, ಕೃಷಿ ಮತ್ತು ಜೀವನ ಮಾರ್ಗಗಳನ್ನು ಕಂಡುಕೊಳ್ಳುವಲ್ಲಿ ಸಹಕಾರಿಯಾಗಿ, ರೈತರ ಜೊತೆಗಿರುತ್ತೇನೆ. ಕ್ಷೇತ್ರದ ಶ್ರೇಯೋಭಿವೃದ್ಧಿಗಾಗಿ ನಿಮ್ಮ ಧ್ವನಿಯಾಗಿ ಸಂಸದನಾಗಿರಲು ಬಯಸುವ ನನಗೆ ಆಶೀರ್ವಾದ ಮಾಡಿ, ನಿಮ್ಮ ಶಕ್ತಿಯುತವಾದ ತಮ್ಮ ಪವಿತ್ರವಾದ ಮತವನ್ನು ನೀಡಿ ಗೆಲ್ಲಿಸಿ, ತಮ್ಮ ಸೇವೆ ಮಾಡಲು ಅವಕಾಶವನ್ನು ಕಲ್ಪಿಸಿಕೊಡಬೇಕಾಗಿ ವಿನಂತಿಸಿಕೊಳ್ಳುತ್ತಿದ್ದೇನೆ.

ತಮ್ಮ ಸೇವಾಕಾಂಕ್ಷಿ,
ಜಿ. ಬಿ. ವಿನಯ್‌ಕುಮಾರ್

"ಕ್ರಮಸಂಖ್ಯೆ 28 ಗ್ಯಾಸ್ ಸಿಲಿಂಡರ್" ಗುರುತಿಗೆ ತಮ್ಮ ಮತವನ್ನು ನೀಡಿ

| ಕ್ರ.ಸಂ. | ಅಭ್ಯರ್ಥಿಯ ಹೆಸರು | ಚಿಹ್ನೆ | ಮತದಾನ |
|---|---|---|---|
| 28 | ಜಿ. ಬಿ. ವಿನಯ್‌ಕುಮಾರ್ | ಗ್ಯಾಸ್ ಸಿಲಿಂಡರ್ | |

ನಿಮ್ಮ ಒಂದು "ಓಟು" ನಿಮ್ಮ ಮಕ್ಕಳ, ನಿಮ್ಮ ಕುಟುಂಬದ ಭವಿಷ್ಯಕ್ಕೆ ಸಹಕಾರಿಯಾಗಲಿದೆ

2ನೇ ಮತಯಂತ್ರ

| | | |
|---|---|---|
| 17 | | |
| 18 | | |
| 19 | | |
| 20 | | |
| 21 | | |
| 22 | | |
| 23 | | |
| 24 | | |
| 25 | | |
| 26 | | |
| 27 | | |
| 28 | ಜಿ. ಬಿ. ವಿನಯ್‌ಕುಮಾರ್ ಪಕ್ಷೇತರ ಅಭ್ಯರ್ಥಿ | |
| 29 | | |
| 30 | | |
| 31 | | |

ಪ್ರಜಾಪ್ರಭುತ್ವದ ರಾಷ್ಟ್ರ ಭಾರತ ದೇಶದಲ್ಲಿ ಪ್ರಜೆಗಳೇ ಪ್ರಭುಗಳು ನನ್ನನ್ನು ಆಶೀರ್ವಾದಿಸಿ

ನೀವು ನೀಡುವ ಓಟಿನಿಂದ ನಿಮ್ಮ ವಿನಯ್‌ಕುಮಾರ್ ಸಂಸದನಾಗಿ ಭಾರತ ದೇಶಕ್ಕೆ ಮಾದರಿಯಾಗುತ್ತಾನೆ.



ಸ್ವಾಭಿಮಾನಿಯಾಗಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧೆ ಮಾಡಿರುತ್ತೇನೆ

**ನನಗೆ ನೀವೇ ಹೈಕಮಾಂಡ್**

ನಿಮ್ಮ ಮನೆಯ ಮಗ
ಜಿ. ಬಿ. ವಿನಯ್‌ಕುಮಾರ್


KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas